ಸಂಪುಟ: 05 ಸಂಚಿಕೆ: 264 ಪುಟಗಳು: 08 ಸೋಮವಾರ 08 ಡಿಸೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಚೊಕ್ಕತನ ಎಂದರೇನು ಕೊಳೆಯೇ ಕಾಣಿಸದ ಲೋಕವಿಲ್ಲ. ಕೊಳೆಯಿಲ್ಲದ ದೇಹವಿಲ್ಲ ಬಂದ ಕೊಳೆಯನ್ನು ಆಗಾಗ ಕಳಚಿಕೊಳ್ಳುವುದೇ ಚೊಕ್ಕತನದ ಲಕ್ಷಣ

## ಸರ್ಕಾರಿ ಶಾಲೆ ವಿಲೀನ ಅಧಿವೇಶನದಲ್ಲಿ ಚರ್ಚೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಒಂದೂವರೆ ಕಿ.ಮೀ. ವ್ಯಾಪ್ತಿಯೊಳಗೆ ಇರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವುದು ಸೂಕ್ತ. ಈ ಕುರಿತು ಬೆಳಗಾವಿಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸುವೆ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

ಹಿಂದೆ ಸರ್ವ ಶಿಕ್ಷಾ ಅಭಿಯಾನ ಯೋಜನೆ ಜಾರಿಗೊಂಡಾಗ ಹೆಚ್ಚಿನ ಸರ್ಕಾರಿ ಶಾಲೆಗಳನ್ನು ಆರಂಭಿಸಲಾಯಿತು. ಖಾಸಗಿ ಶಾಲೆಗಳ ವ್ಯಾಮೋಹದಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಮಾಗಡಿ ತಾಲ್ಲೂಕಿನ ಹಳ್ಳಿಯೊಂದಕ್ಕೆ ಹೋಗಿದ್ದಾಗ ಅಲ್ಲಿನ ಕಿರಿಯ ಪ್ರಾಥಮಿಕ ಶಾಲೆಯ ಮೂರು ತರಗತಿಗಳಲ್ಲಿ ತಲಾ ಇಬ್ಬರು. ಎರಡು ತರಗತಿಗಳಲ್ಲಿ ಮಕ್ಕಳೇ ಇಲ್ಲದ್ದನ್ನು ನೋಡಿ ಬಂದಿದ್ದೇನೆ ಎಂದು ತಿಳಿಸಿದ್ದಾರೆ. ಇಂತಹ ಸನ್ನಿವೇಶ ತಪ್ಪಿಸಲು ಸರ್ಕಾರಿ ಶಾಲೆಗಳ ವಿಲೀನ, ಮಕ್ಕಳನ್ನು ಶಾಲೆಗೆ ಕರೆ ತರಲು ಸಾರಿಗೆ ವ್ಯವಸ್ಥೆ, ಉತ್ತಮ ಶೌಚಾಲಯ, ಮೈದಾನದ ವ್ಯವಸ್ಥೆ ಮಾಡುವುದು ಒಳ್ಳೆಯದು. ಸರ್ಕಾರಿ ಶಾಲೆಗಳ ಸಬಲೀಕರಣ ಹಾಗೂ ಗುಣಮಟ್ಟ ಹೆಚ್ಚಳದೊಂದಿಗೆ ವಿಶ್ವಾಸರ್ಹತೆ ವೃದ್ಧಿಗೆ ಒತ್ತು ನೀಡಬೇಕಾಗಿದೆ

## ಹೋಟೆಲ್‌ಗಳಲ್ಲಿ ಆಧಾರ್ ಗುರುತು ತಾಳೆಗೆ ಹೊಸ ನಿಯಮ

• ಉದಯವಾಹಿನಿ, ಬೆಂಗಳೂರು

ಹೋಟೆಲ್‌ಗಳು, ಕಾರ್ಯಕ್ರಮ ಸಂಘಟಕರು ತಮ್ಮ ಗ್ರಾಹಕರಿಂದ ಆಧಾರ್ ಕಾರ್ಡ್‌ನ ಬೆರಳಚ್ಚು ಪ್ರತಿ ಪಡೆದು, ಅವುಗಳನ್ನು ತಮ್ಮಲ್ಲಿ ಇರಿಸಿಕೊಳ್ಳುವುದನ್ನು ಕಡಿಮೆ ಮಾಡಲು ಹೊಸ ನಿಯಮಗಳನ್ನು ಶೀಘ್ರವೇ ಪ್ರಕಟಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹೀಗೆ ಆಧಾರ್ ಕಾರ್ಡ್ ಪ್ರತಿ ಪಡೆದುಕೊಳ್ಳುವುದು ಆಧಾರ್ ಕಾಯ್ದೆಗೆ ವಿರುದ್ಧ. ಹೋಟೆಲ್ ಪ್ರತಿನಿಧಿಗಳು, ಕಾರ್ಯಕ್ರಮ ಸಂಘಟಕರು ಮುಂತಾದವರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ವ್ಯಕ್ತಿಯ ಗುರುತನ್ನು ತಾಳೆ ಮಾಡುವ ತಂತ್ರಜ್ಞಾನವನ್ನು ಪಡೆಯಬೇಕು ಎಂದಾದರೆ ತಮ್ಮ ಸಂಸ್ಥೆಯನ್ನು ನೋಂದಣಿ ಮಾಡಿಸುವುದು ಕಡ್ಡಾಯ ಎನ್ನುವ ನಿಯಮಕ್ಕೆ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಒಪ್ಪಿಗೆ ನೀಡಿದೆ ಎಂದು ಅದರ ಸಿಇಒ ಭುವನೇಶ್ ಕುಮಾರ್ ಹೇಳಿದ್ದಾರೆ. 'ಹೊಸ ನಿಯಮವನ್ನು ಶೀಘ್ರದಲ್ಲಿಯೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ. ಆಧಾರ್ ಸಂಖ್ಯೆಯನ್ನು ಆಧರಿಸಿ ವ್ಯಕ್ತಿಯ ಗುರುತು ತಾಳೆ ಮಾಡುವ ಸಂಸ್ಥೆಗಳು ತಮ್ಮ ಹೆಸರನ್ನು ನೋಂದಣಿ ಮಾಡುವುದನ್ನು ಈ ನಿಯಮವು ಕಡ್ಡಾಯಗೊಳಿಸುತ್ತದೆ' ಎಂದು ಕುಮಾರ್ ತಿಳಿಸಿದ್ದಾರೆ. ಆಧಾರ್‌ನ ಕೇಂದ್ರ ದತ್ತಾಂಶ ಕೋಶದ ಜೊತೆ ಸಂಪರ್ಕ ಹೊಂದದೆಯೂ ವ್ಯಕ್ತಿಯ ಗುರುತು ತಾಳೆ ನೋಡುವ ಹೊಸ ಆಪ್ ಒಂದನ್ನು ಯುಐಡಿಎಐ ಪರೀಕ್ಷಿಸುತ್ತಿದೆ. ಗ್ರಾಹಕರ ವಯಸ್ಸಿನ ಆಧಾರದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಿರುವ ಅಂಗಡಿಗಳಲ್ಲಿ ಬಳಕೆ ಮಾಡಬಹುದು.

## ರಾಜ್ಯದ ವಿವಿಧ ಕೇಂದ್ರಗಳಲ್ಲಿ ನಡೆದ ಟಿಇಟಿ ಪರೀಕ್ಷೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ವಿವಿಧ ಕೇಂದ್ರಗಳಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) – 2025 ಭಾನುವಾರ ಸುಗಮವಾಗಿ ನಡೆಯಿತು. ರಾಜ್ಯದಾದ್ಯಂತ ಏಕಕಾಲದಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಪರೀಕ್ಷೆ ನಡೆಯಿತು. 1ರಿಂದ 5ನೇ ತರಗತಿಗೆ ಬೋಧಿಸುವ ಶಿಕ್ಷಕರ ಅರ್ಹತೆಗಾಗಿ ಬೆಳಿಗ್ಗೆ 9.30ರಿಂದ 309 ಕೇಂದ್ರಗಳಲ್ಲಿ ಪರೀಕ್ಷೆ ಹಮ್ಮಿಕೊಳ್ಳಲಾಗಿತ್ತು. ಅರ್ಜಿ ಸಲ್ಲಿಸಿದ್ದ 85 ಸಾವಿರ ಅಭ್ಯರ್ಥಿಗಳಲ್ಲಿ 79 ಸಾವಿರ ಮಂದಿ (ಶೇ93.35) ಹಾಜರಾಗಿದ್ದರು. 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರ ಅರ್ಹತೆಗಾಗಿ ಮಧ್ಯಾಹ್ನ 2ರಿಂದ 913 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದವು. ಅರ್ಜಿ ಸಲ್ಲಿಸಿದ್ದ 2.50 ಲಕ್ಷ ಅಭ್ಯರ್ಥಿಗಳ ಪೈಕಿ, 2.37 ಲಕ್ಷ (ಶೇ 94.79) ಮಂದಿ ಪರೀಕ್ಷೆಗೆ ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತಿಳಿಸಿದೆ.

## ಭಗವದ್ಗೀತೆ ಅಪ್ರಸ್ತುತ ಎಂದಿದ್ದ ಎಚ್‌ಡಿಕೆ: ಮಹದೇವಪ್ಪ ಟೀಕೆ

• ಉದಯವಾಹಿನಿ, ಬೆಂಗಳೂರು

ಭಗವದ್ಗೀತೆ ಕಲಿಯುವುದರಿಂದ ಜನರಿಗೆ ಉಪಯೋಗವಾಗುತ್ತಾ ಎಂದು ಹಿಂದೆ ಕೇಳಿದ್ದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈಗ ಶಾಲೆಗಳಲ್ಲಿ ಭಗವದ್ಗೀತೆ ಕಲಿಸಬೇಕು ಎಂದು ಪತ್ರ ಬರೆದಿರುವುದು ಅವರು ಸೈದ್ಧಾಂತಿಕವಾಗಿ ಅಧಃಪತನ ಹೊಂದಿರುವುದಕ್ಕೆ ಸಾಕ್ಷಿ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದರು. ಭಗವದ್ಗೀತೆಯ ಅಪ್ರಸ್ತುತತೆಯ ಬಗ್ಗೆ ಸರ್ಕಾರವು ಹೊಂದಿರಬೇಕಾದ ಜವಾಬ್ದಾರಿಗಳ ಬಗ್ಗೆ ಕುಮಾರಸ್ವಾಮಿ ಮಾತನಾಡಿದ್ದರು. ಈಗ ಕೋಮುವಾದಿ ಆರ್‌ಎಸ್‌ಎಸ್ ಅನ್ನು ಬೆಂಬಲಿಸಲು ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ಟೀಕಿಸಿದರು.

ಮಕ್ಕಳ ತಲೆಗೆ ಕೇವಲ ಧಾರ್ಮಿಕತೆ ತುಂಬುವುದನ್ನು ಬಿಟ್ಟು ಒಂದಷ್ಟು ವೈಚಾರಿಕ, ವೈಜ್ಞಾನಿಕ ಮತ್ತು ಸಮಾನತೆಯ ಜ್ಞಾನವನ್ನು ತುಂಬುವ ಕೆಲಸ ಮಾಡಿ. ನಿಮ್ಮ ಕಾರಿನಲ್ಲಿ ಇರುವ ಪುಸ್ತಕವನ್ನು ಪೂರ್ತಿ ಓದಿ ಬಿಡಿ ಎಂದು ಸಲಹೆ ನೀಡಿದ್ದಾರೆ. ಸೈದ್ಧಾಂತಿಕವಾಗಿ ಬಹಳಷ್ಟು ಗೊಂದಲದಲ್ಲಿ ಇರುವ ಕುಮಾರಸ್ವಾಮಿ ಅವರು ಭಗವದ್ಗೀತೆಯ ಹಿಂದೆ ಬಿದ್ದು ಮಕ್ಕಳ ಮನಸ್ಸಿಂದ ಪ್ರಜಾಸತ್ತಾತ್ಮಕ ತಿಳಿವಳಿಕೆಯನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದಾರೆ.



**ಬೆಳಗಾವಿ ಅಧಿವೇಶನ – 3,000 ರೂಮ್ ಬುಕ್, 10 ದಿನಗಳ ಅಧಿವೇಶನಕ್ಕೆ 21 ಕೋಟಿ ಖರ್ಚು**

**ಸೋಮವಾರದಿಂದ ಸರ್ಕಾರಕ್ಕೆ ಬಿಸಿ ಮುಟ್ಟಿಸಲು 84 ಸಂಘಟನೆ ಸಜ್ಜು**

**ಸುವರ್ಣಸೌಧ ಮುತ್ತಿಗೆಗೆ ಬಿಜೆಪಿ ನಿರ್ಧಾರ**

# ಶಸ್ತ್ರ... ಅಸ್ತ್ರ.. ಪ್ರತ್ಯಸ್ತ್ರ...

# ಸದನ ಸಮರ


**ಬೆಳಗಾವಿ ಅಧಿವೇಶನ ಆರಂಭಗೊಳ್ಳಲಿದೆ. ಒಟ್ಟು 10 ದಿನಗಳ ಕಾಲ ಅಧಿವೇಶನ ನಡೆಯಲಿದೆ. ಪ್ರತಿವರ್ಷ ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ನಡೆಯುತ್ತದೆ. ಬೆಳಗಾವಿಯಲ್ಲಿ ಈವರೆಗೆ 13 ಬಾರಿ ಉಭಯ ಸದನಗಳ ಅಧಿವೇಶನ ನಡೆದಿದ್ದು, ಒಟ್ಟು 170 ಕೋಟಿ ರೂ. ವೆಚ್ಚ ಮಾಡಲಾಗಿದೆ. ಕಳೆದ ವರ್ಷ 15 ಕೋಟಿ ರೂ. ವೆಚ್ಚದಲ್ಲಿ ಅಧಿವೇಶನ ಮುಕ್ತಾಯಗೊಂಡಿತ್ತು.**

**ಬೆಳಗಾವಿಗೆ ಸಿಎಂ ಆಗಮನ**

### ವಿಶೇಷ ನ್ಯಾಯಾಲಯ ಸ್ಥಾಪನೆ

**ತಪ್ಪು ಮಾಹಿತಿ ಹರಡುವ ಪ್ರಕರಣಗಳ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಜಿಲ್ಲೆಗಳಲ್ಲಿ ಹೆಚ್ಚಿನ ತಪ್ಪು ಮಾಹಿತಿ ಪ್ರಕರಣಗಳು ದಾಖಲಾಗದಿದ್ದರೆ, ಅಂತಹ ಜಿಲ್ಲೆಗಳಲ್ಲಿ ಸೆಷನ್ ಕೋರ್ಟನ್ನೇ ವಿಶೇಷ ನ್ಯಾಯಾಲಯವಾಗಿ ಪರಿಗಣಿಸಲಾಗುವುದು. ಈ ಪ್ರಸ್ತಾಪಿತ ಕಾಯ್ದೆಯಡಿ ದಾಖಲಾಗುವ ಎಲ್ಲಾ ಪ್ರಕರಣಗಳನ್ನು ವಿಶೇಷ ನ್ಯಾಯಾಲಯದಲ್ಲೇ ವಿಚಾರಣೆ ನಡೆಸಬೇಕು. ರಾಜ್ಯ ಸರ್ಕಾರ ಈ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಚಾರಣೆ ನಡೆಯುವ ಪ್ರತಿ ವಿಶೇಷ ನ್ಯಾಯಾಲಯದಲ್ಲಿ ಕನಿಷ್ಠ ಒಬ್ಬ ವಿಶೇಷ ಸರ್ಕಾರಿ ಅಭಿಯಂತರರನ್ನು ನೇಮಿಸಬೇಕು. ಕನಿಷ್ಠ ಏಳು ವರ್ಷ ವಕೀಲನಾಗಿ ಪ್ರಾಕ್ಟೀಸ್ ಮಾಡಿದ ವ್ಯಕ್ತಿಯನ್ನೇ ವಿಶೇಷ ಸರ್ಕಾರಿ ಅಭಿಯಂತರರನ್ನಾಗಿ ನೇಮಿಸಬೇಕು.**

### ಸಚಿವರ ಹಾಜರಿ ಕಡ್ಡಾಯ



**ಸದನದ ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಹೆಚ್ಚಿನ ಸಂಖ್ಯೆಯ ಸಚಿವರು ವಿಧಾನಪರಿಷತ್ ಕಲಾಪಗಳಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಪ್ರತಿ ಬಾರಿಯೂ ಸಚಿವರ ಸಂಖ್ಯೆ ಕಡಿಮೆ ಇರುತ್ತದೆ. ಈ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಹೊರಟ್ಟಿ ಹೇಳಿದರು. 'ಬೆಳಗಾವಿಯ ಅಧಿವೇಶನದಲ್ಲಿ ಸಚಿವರ ಹಾಜರಾತಿ ಖಚಿತಪಡಿಸಬೇಕು. ಸಂಪುಟದ ಎಲ್ಲಾ ಸದಸ್ಯರಿಗೂ ಹಾಜರಿರುವಂತೆ ಸೂಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವೆ. ಎಲ್ಲಾ ಪ್ರಶ್ನೆಗಳಿಗೂ ಸಭಾನಾಯಕರೇ ಉತ್ತರ ನೀಡುವ ಸಂಪ್ರದಾಯ ಮುಕ್ತಾಯವಾಗಬೇಕು.ಆಯಾ ಸಚಿವರೇ ಹಾಜರಿದ್ದು ಉತ್ತರ ನೀಡಬೇಕು' ಎಂದರು.**

• ಉದಯವಾಹಿನಿ, ಬೆಳಗಾವಿ

ಸೋಮವಾರದಿಂದ ಈ ಸಲದ 10 ದಿನದ ಬೆಳಗಾವಿ ಅಧಿವೇಶನಕ್ಕೆ 21 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಬೆಳಗಾವಿ ಜಿಲ್ಲಾಡಳಿತ ಈಗಾಗಲೇ ಸಕಲ ಸಿದ್ಧತೆ ಮಾಡಿಕೊಂಡಿದೆ. ಆದರೆ ಇದರಿಂದ ದೊಡ್ಡ ಮಟ್ಟದಲ್ಲಿ ಏನೂ ಪ್ರಯೋಜನ ಆಗುವುದಿಲ್ಲ ಎಂಬ ಅಭಿಪ್ರಾಯ ಇದೆ. ಆಡಳಿತ ವಿಪಕ್ಷಗಳು ಗಂಭೀರ ಸ್ವರೂಪದ ಚರ್ಚೆ ನಡೆಸುವ ಬದಲಾಗಿ ಕಾಲಹರಣದಲ್ಲಿ ತೊಡಗಿಸಿಕೊಳ್ಳುತ್ತಿವೆ ಎಂಬ ಆರೋಪಗಳೂ ಇವೆ.

**ವಸತಿಗೆ 3,000 ಕೊಠಡಿಗಳು ಬುಕ್ :** ಶಾಸಕರು, ಅಧಿಕಾರಿಗಳ ವಸತಿಗಾಗಿ 3 ಸಾವಿರ ಕೋಠಡಿಗಳು ಬುಕ್ಕಿಂಗ್ ಆಗಿದ್ದು 6 ಸಾವಿರ ಪೊಲೀಸ್ ಸಿಬ್ಬಂದಿ ಜರ್ಮನ್ ಟೆಂಟ್ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ಸುವರ್ಣ ಸೌಧದ ಸುತ್ತಮುತ್ತ ವ್ಯಾಪ್ತಿ ಪೊಲೀಸ್ ಬಂದೋಬಸ್ತ್ ನಿಯೋಜನೆ ಮಾಡಲಾಗಿದೆ. ಇಷ್ಟೆಲ್ಲಾ ಖರ್ಚು ವೆಚ್ಚ ಮಾಡಿದ್ರೂ, ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ ಎಂಬುವುದು ಪ್ರತಿವರ್ಷ ಕೇಳಿ ಬರುತ್ತಿರುವ ಆರೋಪವಾಗಿದೆ. ನೆಪ ಮಾತ್ರಕ್ಕೆ ಎಂಬಂತೆ ಕೊನೆಯ 2 ದಿನಗಳ ಕಾಲ ಉತ್ತರ ಕರ್ನಾಟಕದ ಭಾಗದ ಚರ್ಚೆಗೆ ಸಮಯ ನೀಡಲಾಗುತ್ತದೆ. ಉಳಿದಂತೆ ಹೆಚ್ಚಿನ ಅವಧಿಯಲ್ಲಿ ಇತರ ಚರ್ಚೆಗಳು, ಗಲಾಟೆ, ಗದ್ದಲವೇ ಗಮನ ಸೆಳೆಯುತ್ತದೆ. ಹೀಗಾಗಿ ಈ ಬಾರಿ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಒಟ್ಟು 84 ಸಂಘಟನೆಗಳು ಸಿದ್ಧತೆ ನಡೆಸಿಕೊಂಡಿವೆ. ಹೆಸರು ಕಾಳು, ಸೋಯಾಬಿನ್, ಬೆಳೆಗಳಿಗೆ ಪರಿಹಾರ ನೀಡುವಂತೆ ಬಿಜೆಪಿ ಸುವರ್ಣ ಸೌಧ ಮುತ್ತಿಗೆಗೆ ನಿರ್ಧಾರ ಮಾಡಿದೆ.


ಕಬ್ಬು ಬೆಳೆಗಾರರ ವಿವಿಧ ಸಮಸ್ಯೆ ಇತ್ಯರ್ಥಕ್ಕೆ ರೈತರ ಬೃಹತ್ ಪ್ರತಿಭಟನೆ ನಡೆಸಲು ತಯಾರಿ ಮಾಡಿಕೊಂಡಿದೆ. ಸರ್ಕಾರಿ ನೇಮಕಾತಿಗಾಗಿ ಆಗ್ರಹಿಸಿ ಯುವ ಸಮೂಹದಿಂದ ಬೃಹತ್ ಪ್ರತಿಭಟನೆ ನಡೆಯಲಿದೆ. ಪಂಚಮಸಾಲಿ ಸಮಾಜದಿಂದ ಮೌನ ಪ್ರತಿಭಟನೆಗೆ ತೀರ್ಮಾನ ಮಾಡಲಾಗಿದ್ದು ಇದನ್ನು ಸರ್ಕಾರ ಹೇಗೆ ಎದುರಿಸುತ್ತೆ ಕಾದು ನೋಡಬೇಕಿದೆ.

**1** ತಪ್ಪು, ಸುಳ್ಳು ಮಾಹಿತಿ ಹಬ್ಬಿಸಿದರೆ ಗರಿಷ್ಠ 5 ವರ್ಷ ಶಿಕ್ಷೆ ಪರಿಷ್ಕೃತ ಮಸೂದೆಯಲ್ಲೇನಿದೆ..?

**2** ಬೆಳಗಾವಿ ಅಧಿವೇಶನ ಪ್ರಶೋತ್ತರದಲ್ಲೂ 'ಉತ್ತರ'ಕ್ಕೆ ಆದ್ಯತೆ ಹೊರಟ್ಟಿ

**3** ಬೆಳಗಾವಿಯಲ್ಲಿ ದೇಸಿ-ವಿದೇಶಿ ಸವಿಗಳ ಆರ್ಭಟ, ಸಾವಿರಾರು ಸ್ಟೂಡೆಂಡ್ ಗಳಿಂದ ಸಖತ್ ಮನರಂಜನೆ!


### ಜ್ವಲಂತ ಸಮಸ್ಯೆಗಳತ್ತ ಚಿತ್ತ




ಅಧಿವೇಶನದಲ್ಲಿ ರಾಜ್ಯದ ಜ್ವಲಂತ ಸಮಸ್ಯೆ, ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಕುರಿತು ಚರ್ಚಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು 'ಉತ್ತರ ಕರ್ನಾಟಕದ ರೈತರ ಸಂಕಷ್ಟ ನೀರಾವರಿ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಸಮಯ ಮೀಸಲಿಡಬೇಕಿದೆ. ಪ್ರತಿ ಬಾರಿ ಬೆಳಗಾವಿ ಅಧಿವೇಶನದಲ್ಲಿ ನಾಮಕಾವಾಸ್ತೆ ಚರ್ಚೆ ನಡೆಯುತ್ತಿದೆ. ಈ ಬಾರಿ ಸಮಯ ವ್ಯರ್ಥ ಮಾಡಲು ಬರೀ ಭರವಸೆಗೆ ಸೀಮಿತವಾಗಲು ಬಿಡುವುದಿಲ್ಲ. ಅಧಿವೇಶನದ ಆರಂಭದ ದಿನಗಳಲ್ಲೇ ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಚರ್ಚಿಸಲು ತೀರ್ಮಾನಿಸಿದ್ದೇವೆ. ಕಬ್ಬಿನ ಬೆಳೆಗಾರರು ಮೆಕ್ಕೆ ಜೋಳ ಬೆಳೆಯುವ ರೈತರ ಸಮಸ್ಯೆ ಪರಿಹಾರಕ್ಕೆ ಪಟ್ಟು ಹಿಡಿಯಲಾಗುವುದು' ಎಂದರು.

### ಕಂಪನಿಗಳು ಹೊಣೆಗಾರರು

ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ, ನಿರ್ದೇಶನ ಅಥವಾ ಆದೇಶದ ಯಾವುದೇ ಉಪಬಂಧಗಳ ಉಲ್ಲಂಘನೆಯಾಗಿದ್ದರೆ, ಉಲ್ಲಂಘನೆ ನಡೆದ ಸಮಯದಲ್ಲಿ, ಕಂಪನಿ ಮತ್ತು ಕಂಪನಿಯ ವ್ಯವಹಾರದ ನಿರ್ವಹಣೆಗಾಗಿ ಕಂಪನಿಯ ಉಸ್ತುವಾರಿಯಾಗಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಉಲ್ಲಂಘನೆಯ ತಪ್ಪಿತಸ್ಥನಾಗಿರತಕ್ಕದ್ದು ಮತ್ತು ಅದರ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ಅದಕ್ಕೆ ಅನುಗುಣವಾಗಿ ಶಿಕ್ಷೆಗೆ ಗುರಿಯಾಗಲಿದ್ದಾರೆ. ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ, ನಿರ್ದೇಶನ ಅಥವಾ ಆದೇಶದ ಯಾವುದೇ ಉಪಬಂಧಗಳ ಉಲ್ಲಂಘನೆಯನ್ನು ಕಂಪನಿಯು ಮಾಡಿದ್ದಲ್ಲಿ ಮತ್ತು ಉಲ್ಲಂಘನೆಯು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಒಪ್ಪಿಗೆಯೊಂದಿಗೆ ಅಥವಾ ಪರೋಕ್ಷ ಒಪ್ಪಿಗೆಯೊಂದಿಗೆ ನಡೆದಿದೆ ಎಂದು ಸಾಬೀತಾಗಿದ್ದರೆ ಅಥವಾ ಅವರ ಯಾವುದೇ ನಿರ್ಲಕ್ಷ್ಯಕ್ಕೆ ಕಾರಣವಾಗಬಹುದೆಂದು ಸಾಬೀತಾಗಿದ್ದಲ್ಲಿ, ಅಂತಹ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನೂ ಸಹ ಉಲ್ಲಂಘನೆಯ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ಶಿಕ್ಷೆಗೆ ಗುರಿಯಾಗಲಿದ್ದಾರೆ.





## ಸರ್ಕಾರ ರೈತರ ಜೊತೆ ಚೆಲ್ಲಾಟ ನಿಲ್ಲಿಸಿ, 100 ಕ್ವಿಂಟಾಲ್ ಮೆಕ್ಕೆಜೋಳ ಖರೀದಿಸಲಿ

### ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆಯೂ ಚರ್ಚೆಯಾಗಬೇಕು: ಬೊಮ್ಮಾಯಿ

• ಉದಯವಾಹಿನಿ, ಹಾವೇರಿ

ರಾಜ್ಯ ಸರ್ಕಾರ ಕೂಡಲೇ ಪ್ರತಿಯೊಬ್ಬ ರೈತರಿಂದ ಕನಿಷ್ಠ ನೂರು ಕ್ವಿಂಟಾಲ್ ಮೆಕ್ಕೆ ಜೋಳ ಖರೀದಿ ಮಾಡಬೇಕು ಮತ್ತು ಎಂಎಸ್ ಪಿಗೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರ ಕೊಡಬೇಕು ಎನ್ನುವ ರೈತರ ಬೇಡಿಕೆಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಸರ್ಕಾರ ರೈತರ ಜೊತೆ ಚೆಲ್ಲಾಟ ಆಡುತ್ತಿದೆ. ರೈತರ ಮೂಗಿಗೆ ತುಪ್ಪ ಸವರುತ್ತಿದೆ. ರೈತರು ಈ ವರ್ಷ ದಾಖಲೆ ಪ್ರಮಾಣದಲ್ಲಿ ಮೆಕ್ಕೆಜೋಳ ಬೆಳೆದಿದ್ದಾರೆ. ಹಾವೇರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದಾರೆ. ಒಬ್ಬ ರೈತರಿಂದ ಕೇವಲ 20 ಕ್ವಿಂಟಾಲ್ ತೆಗೆದುಕೊಳ್ಳುತ್ತೇವೆ ಎನ್ನುವುದು ಮೂಗಿಗೆ ತುಪ್ಪ ಹಚ್ಚುವ ಕೆಲಸ ಇದರಿಂದ ರೈತರಿಗೆ ಏನೂ ಅನುಕೂಲ ಆಗುವುದಿಲ್ಲ. ಮಾರುಕಟ್ಟೆಯಲ್ಲಿ ದರವೂ ಏರುವುದಿಲ್ಲ ಎಂದು ಮಾಜಿ ಸಿಎಂ ಬೊಮ್ಮಾಯಿ ಅವರು ಹೇಳಿದರು.


**25 ಲಕ್ಷ ಮೆಟ್ರಿಕ್ ಟನ್ ಖರೀದಿ ಮಾಡಿ**

ರಾಜ್ಯದಲ್ಲಿ 54 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಬೆಳೆದಿದ್ದು, ಅದರಲ್ಲಿ ಕನಿಷ್ಟ 25 ಲಕ್ಷ ಮೆಟ್ರಿಕ್ ಟನ್ ಖರೀದಿ ಮಾಡಬೇಕು ಆಗ ಬೇಡಿಕೆ ಹೆಚ್ಚಾಗುತ್ತದೆ. ಸರ್ಕಾರ ಅಷ್ಟು ಖರೀದಿ ಮಾಡದಿರುವುದರಿಂದ ರೈತರು ಆಕ್ರೋಶಗೊಂಡಿದ್ದಾರೆ ಎಂದು ಹೇಳಿದರು.

ಎರಡನೆಯ ಬೇಡಿಕೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಖರೀದಿ ಕೇಂದ್ರ ತೆಗೆಯಬೇಕು.

ಎಂಎಸ್‌ಪಿ ಜೊತೆಗೆ ರಾಜ್ಯ ಸರ್ಕಾರ ತನ್ನ ಅನುದಾನವನ್ನೂ ಸೇರಿಸಿ ಕೊಡಬೇಕು ಎನ್ನುವುದು ರೈತರ ಬೇಡಿಕೆ. ಖರೀದಿ ಕೇಂದ್ರವೂ ಕೂಡ ಸರಿಯಾಗಿ ಆರಂಭವಾಗಿಲ್ಲ. ಹಾವೇರಿಯಲ್ಲಿ ಇನ್ನೂ ಯಾವುದೇ ಪ್ರಕ್ರಿಯೆ ನಡೆದಿಲ್ಲ. ಹೀಗಾಗಿ ರೈತರು ರೊಚ್ಚಿಗೆದ್ದು ರಸ್ತೆ ತಡೆ ಮಾಡುತ್ತಿದ್ದಾರೆ. ಈಗಲಾದರೂ ಸರ್ಕಾರ ಕಣ್ಣು ತೆರೆದು ಪ್ರತಿಯೊಬ್ಬ ರೈತರಿಂದ





ಕನಿಷ್ಠ ನೂರು ಕ್ವಿಂಟಾಲ್ ಮೆಕ್ಕೆ ಜೋಳ ಖರೀದಿ ಮಾಡಬೇಕು ಮತ್ತು ಎಂಎಸ್ ಪಿಗೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರ ಕೊಡಬೇಕು ಎನ್ನುವ ರೈತರ ಬೇಡಿಕೆಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

**ಉತ್ತರ ಕರ್ನಾಟಕ ಸಮಸ್ಯೆಗಳ ಚರ್ಚೆಯಾಗಬೇಕು**

ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗುತ್ತಿಲ್ಲ ಎನ್ನುವ ಕುರಿತು ಕೇಳಿದ ಪ್ರಶ್ನೆಗೆ ಈ ಬಾರಿ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ಆಗುತ್ತಿರುವ ಅನ್ಯಾಯ, ಯಾವುದೇ ಮೂಲಬೂತ ಸೌಕರ್ಯ ಆಗುತ್ತಿಲ್ಲ, ರಸ್ತೆ ಹದಗೆಟ್ಟು ಹೋಗಿವೆ, ನೀರಾವರಿ ಯೋಜನೆಗಳು ಸ್ಥಗಿತಗೊಂಡಿವೆ.

ಅಲ್ಲದೇ ಕಬ್ಬು ಮತ್ತು ಮೆಕ್ಕೆಜೋಳ ಉತ್ತರ ಕರ್ನಾಟಕ ಭಾಗದಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಇವೆಲ್ಲ ವಿಷಯವನ್ನು ಸಮಗ್ರವಾಗಿ ಚರ್ಚೆ ಮಾಡಿ ಸರ್ಕಾರ ಪರಿಹಾರ ಕೊಡಬೇಕು. ಬೆಳೆ ಹಾನಿ ಪರಿಹಾರದಲ್ಲೂ ದೊಡ್ಡ ಅನ್ಯಾಯ ಆಗುತ್ತಿದೆ ಇದರ ಬಗ್ಗೆ ರೈತರು ದೊಡ್ಡ ಮಟ್ಟದ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಎಲ್ಲ ವಿಷಯಗಳು ಚರ್ಚೆಯಾಗಬೇಕು ಎನ್ನುವುದು ನಮ್ಮ ಆಶಯ ಎಂದು ಹೇಳಿದರು.

## ಪೋಷಕರ ವಾರ್ಷಿಕ ಆದಾಯ ಮಿತಿ ಮೀರಿದ್ದರೆ ಮೀಸಲಾತಿ ಪಡೆಯಲು ಅನರ್ಹ

### ● ಹಿಂದುಳಿದ ವರ್ಗದ ಅಭ್ಯರ್ಥಿಗಳ ಪೋಷಕರ ಆದಾಯ ನಿಗದಿತ ಮಿತಿ ಮೀರಿದರೆ, ಅವರು ಕೆನೆ ಪದರಕ್ಕೆ ಸೇರುತ್ತಾರೆ

• ಉದಯವಾಹಿನಿ, ಬೆಂಗಳೂರು

ಹಿಂದುಳಿದ ವರ್ಗದ ಅಭ್ಯರ್ಥಿಯೊಬ್ಬರಿಗೆ ಮೀಸಲಾತಿ ಪ್ರಮಾಣ ಪತ್ರ ನೀಡಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ.

ಪೋಷಕರ ವಾರ್ಷಿಕ ಆದಾಯ ನಿಗದಿತ ಮಿತಿ ಮೀರಿದ್ದು, ಅವರು 'ಕೆನೆ ಪದರ'ಕ್ಕೆ ಸೇರುತ್ತಾರೆ. ಇದರಿಂದಾಗಿ ಮೀಸಲಾತಿ ಸೌಲಭ್ಯ ಪಡೆಯಲು ಅನರ್ಹರಾಗುತ್ತಾರೆ ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಮಹತ್ವದ ತೀರ್ಪು ನೀಡಿದೆ.

ಕೆಪಿಟಿಸಿಎಲ್ ಸಹಾಯಕ ಇಂಜಿನಿಯರ್ ಹುದ್ದೆಗೆ ಪ್ರವರ್ಗ 2ಎ (ಕುರುಬ ಜಾತಿ) ಅಡಿಯಲ್ಲಿ ಆಯ್ಕೆಯಾಗಿದ್ದ ರಾಘವೇಂದ್ರ ಚಂದ್ರಣ್ಣನವರ್ ಅವರಿಗೆ ಮೀಸಲಾತಿ ಪ್ರಮಾಣಪತ್ರ ನೀಡುವಂತೆ ಏಕಸದಸ್ಯ ಪೀಠ ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗಿಯ ಪೀಠ ವಿಚಾರಣೆ ಮಾಡಿ ಸರ್ಕಾರದ ಮೇಲ್ಮನವಿಯನ್ನು ಮಾನ್ಯ ಮಾಡಿದೆ. ಈ ತೀರ್ಪಿನಿಂದಾಗಿ ಏಕಸದಸ್ಯ ಪೀಠದ ಆದೇಶ ರದ್ದಾಗಿದೆ ಎಂದು ಬಾರ್ ಅಂಡ್ ಬೆಂಚ್ ವರದಿ ಮಾಡಿದೆ.






**ವಿಭಾಗೀಯ ಪೀಠದ ತೀರ್ಪು ಏನು ಹೇಳುತ್ತದೆ?**

**ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ ಎಂ ಪೂಣಚ್ಚ ಅವರಿದ್ದ ವಿಭಾಗೀಯ ಪೀಠ, ಅಭ್ಯರ್ಥಿಯ ಪೋಷಕರ ವೇತನ ಸೇರಿದಂತೆ ಎಲ್ಲಾ ಮೂಲಗಳಿಂದ ಬರುವ ಆದಾಯವನ್ನು ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ. ಒಂದು ವೇಳೆ ಈ ಆದಾಯ ನಿಗದಿತ ಮಿತಿಯನ್ನು ಮೀರಿದರೆ, ಮತ್ತು ಅಭ್ಯರ್ಥಿ ಆದಾಯ ತೆರಿಗೆ ಪಾವತಿದಾರರಾಗಿದ್ದರೆ, ಆಗ 'ಕೆನೆ ಪದರ' ನಿಯಮ ಅನ್ವಯಿಸುತ್ತದೆ. ಇದರಿಂದಾಗಿ ಅಭ್ಯರ್ಥಿಯು ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ಪಡೆಯಲು ಅರ್ಹರಾಗಿರುವುದಿಲ್ಲ ಎಂದು ನ್ಯಾಯಾಲಯ ತೀರ್ಪು ನೀಡಿದೆ. ಈ ತೀರ್ಪು, ಮೀಸಲಾತಿ ಸೌಲಭ್ಯ ಪಡೆಯುವಲ್ಲಿ ಆದಾಯದ ಮಹತ್ವವನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ.**

**ಪ್ರಕರಣದ ಹಿನ್ನೆಲೆ ಏನು?;** ಧಾರವಾಡದ ರಾಘವೇಂದ್ರ ಚಂದ್ರಣ್ಣನವರ್ ಅವರು ಕೆಪಿಟಿಸಿಎಲ್ ಸಹಾಯಕ ಇಂಜಿನಿಯರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಅವರು ಪ್ರವರ್ಗ– 2ಎ (ಕುರುಬ) ಅಡಿಯಲ್ಲಿ ಆಯ್ಕೆಯಾಗಿದ್ದರು. ಮೀಸಲಾತಿ ಸೌಲಭ್ಯ ಪಡೆಯಲು, ಅವರು ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನೆ ಸಮಿತಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ರಾಘವೇಂದ್ರ ಅವರ ಪೋಷಕರ ವಾರ್ಷಿಕ ಆದಾಯ, ಪ್ರವರ್ಗ– 2ಎ ಗೆ ನಿಗದಿಪಡಿಸಲಾದ 8 ಲಕ್ಷ ರೂ. ಮಿತಿಯನ್ನು ಮೀರಿದ್ದರಿಂದ, ಅವರು ಹಿಂದುಳಿದ ವರ್ಗಗಳಡಿ ಮೀಸಲಾತಿ ಪಡೆಯಲು ಅರ್ಹರಲ್ಲ ಎಂದು ಸಮಿತಿ ಮಾರ್ಚ್ 6, 2024 ರಂದು ಅವರ ಅರ್ಜಿಯನ್ನು ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ರಾಘವೇಂದ್ರ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಅಕ್ಟೋಬರ್ 28, 2024 ರಂದು, ಏಕಸದಸ್ಯ ನ್ಯಾಯಪೀಠ ರಾಘವೇಂದ್ರ ಅವರು ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿಗೆ ಅರ್ಹರು ಎಂದು ತೀರ್ಪು ನೀಡಿತ್ತು. ಅಲ್ಲದೆ, ಎರಡು ವಾರಗಳೊಳಗೆ ಜಾತಿ ಸಿಂಧುತ್ವ ಪ್ರಮಾಣಪತ್ರ ವಿತರಿಸುವಂತೆ ಆದೇಶಿಸಿತ್ತು. ಆದರೆ, ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಇದರ ಜೊತೆಗೆ, ಹೈಕೋರ್ಟ್ ಆದೇಶವನ್ನು ಪಾಲಿಸದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ರಾಘವೇಂದ್ರ ಅವರು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು.

**ಈ ದಿನದ ದರ** ಪೆಟ್ರೋಲ್: 103.49 ₹/L ಡೀಸೆಲ್ : 91.64 ₹/L ಬಂಗಾರ: ₹13,015/Gram24ct ₹11,930/Gram22ct ಬೆಳ್ಳಿ: ₹190.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ವಚನ ಶಿಷ್ಟಾಚಾರ

ವಚನ ಮಾತು. ಅದಕ್ಕೆ ಲಗಾಮಿರಬೇಕು. ಅದುವೇ ವಚನ ಸಂಹಿತೆ. ಮಾತೆಂಬುದು ಜ್ಯೋತಿರ್ಲಿಂಗ ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು ಅಯ್ಯಾ ಎಂದರೆ ಸ್ವರ್ಗ ಮುಂತಾದ ಬಸವಾದಿ ಶರಣರ ವಚನಗಳು ಮಾತಿಗೆ ಮೂಗುದಾರ ಹಾಕಿವೆ. ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಂ ಅಪ್ರಿಯಂ = ಸತ್ಯ ಪ್ರಿಯ ಆಡಬೇಕು. ಅಪ್ರಿಯವಾದ ಸತ್ಯ ಆಡಬಾರದು. ಸತ್ಯಂ ಶಿವಂ ಸುಂದರಂ = ಸತ್ಯ ಮಂಗಳ ಸುಂದರವಾಗಿಲಿ. ಜಿಹ್ವಾಗ್ರೇ ಮರಣಂ ಧ್ರುವಂ = ನಾಲಿಗೆಯ ತುದಿಯಲ್ಲಿಯೇ ಇದೆ ಮರಣ ಎನ್ನುತ್ತವೆ ಸಂಸ್ಕೃತೋಕ್ತಿಗಳು. ಈ ಹಿನ್ನೆಲೆಯಲ್ಲಿ ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನಬಾರವನೆತ್ತುವೆ, ಆಗಮದ ಮೂಗ ಕೊಯ್ಯುವೆ ಎಂಬಂಥ, ವೇದವನೋದುವರೆಲ್ಲ ಬಂಜೆಯ ಮಕ್ಕಳು, ಶಾಸ್ತ್ರವನೋದುವರೆಲ್ಲ ಸೂಳೆಯ ಮಕ್ಕಳು ಎಂಬಂಥ ಬಸವ ಕಾಡಸಿದ್ಧೇಶ್ವರ ಅಂಬಿಗರ ಚೌಡಯ್ಯ ಮುಂತಾದವರ ವಚನಗಳು ಅಸಾಂವಿಧಾನಿಕ ಪದಗಳುಳ್ಳ ಅಶಿಷ್ಟ ವಚನಗಳು. ಸತ್ಯ ಪ್ರಿಯ ನ್ಯಾಯದೂರಗಳು. ಮಾತೃ ದೇವೋ ಭವ = ತಾಯಿ ದೇವರು ಎಂಬಂಥ ಉಪನಿಷತ್ತುಗಳು ನಿಂದ್ಯ ಎಂತು? ಅಥವಾ ಇಂಥ ವಚನಗಳು ಕುಹಕಿಗಳು ರಚಿಸಿ ಸೇರಿಸಿದವಿರಬೇಕು.

# ನಮ್ಮ ಮೆಟ್ರೋ ಗುಲಾಬಿ ಮಾರ್ಗದ ರೈಲು ರೆಡಿ! ಡಿ.11 ಅನಾವರಣ

## ಮೆಟ್ರೋ ಗುಲಾಬಿ ಮಾರ್ಗದಲ್ಲಿ ಸಂಚಾರಕ್ಕೆಂದು ಪ್ರೊಟೊಟೈಪ್ ರೈಲು ಸಿದ್ಧ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಗುಲಾಬಿ ಮಾರ್ಗದಲ್ಲಿ ಸಂಚಾರಕ್ಕೆಂದು ಪ್ರೊಟೊಟೈಪ್ ರೈಲನ್ನು ಸಿದ್ಧಪಡಿಸಲಾಗಿದೆ. ರೈಲಿನ ಅನಾವರಣ ಡಿಸೆಂಬರ್ 11 ನಡೆಯಲಿದೆ. ಗುಲಾಬಿ ಮಾರ್ಗಕ್ಕೆ ಅಗತ್ಯವಿರುವ ರೈಲುಗಳನ್ನು ಬಿಇಎಂಎಲ್ ಸಿದ್ಧಪಡಿಸುತ್ತಿದೆ. ನವೆಂಬರ್ ಅಂತ್ಯಕ್ಕೆ ರೈಲಿನ ಮಾದರಿ ಸಿದ್ಧವಾಗಿದ್ದು, ಕಳೆದ ಮಧ್ಯಾಹ್ನ ಅನಾವರಣಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಅದೇ ಸಮಯದಲ್ಲಿ ನಮ್ಮ ಮೆಟ್ರೋ ನೀಲಿ ಮಾರ್ಗದ ಕಾಮಗಾರಿಗಳನ್ನು ಪರಿಶೀಲಿಸಲು ನಿರ್ಧರಿಸಿದ್ದರಿಂದ, ಕಾರ್ಯಕ್ರಮವನ್ನು ಡಿಸೆಂಬರ್ 11 ರ ಗುರುವಾರಕ್ಕೆ ಮರು ನಿಗದಿಪಡಿಸಲಾಗಿದೆ.



ಈ ಪ್ರೊಟೊಟೈಪ್ ರೈಲು ಜೂನ್ 2025 ರಲ್ಲಿ ತಲುಪಬೇಕಿತ್ತು. ಆದರೆ, ಕೆಲವು ಪ್ರಮುಖ ಉಪಕರಣಗಳ ಕೊರತೆ ಮತ್ತು ಟೈಪ್ ಟೆಸ್ಟ್‌ಗಳಲ್ಲಿ ಆದ ವಿಳಂಬದಿಂದಾಗಿ ಇದು ತಡವಾಗಿದೆ. ಪ್ರೊಟೊಟೈಪ್ ರೈಲು ಬಂದ ನಂತರ, ಬಿಎಂಆರ್‌ಸಿಎಲ್ ಹೊಸ ರೈಲುಗಳಿಗೆ ಅಗತ್ಯವಿರುವ ಅನುಮತಿಗಳನ್ನು ಪಡೆಯುತ್ತದೆ ಎಂದು ಮಾಡಿದೆ.

**ಸಂಚಾರ ಆರಂಭ ಯಾವಾಗ?**

**ನಮ್ಮ ಮೆಟ್ರೋ ಗುಲಾಬಿ ಮಾರ್ಗ ಆರಂಭ ಯಾವಾಗ** ಕಾಳೇನ ಅಗ್ರಹಾರ – ನಾಗವಾರ ನಡುವಿನ ಗುಲಾಬಿ ಮಾರ್ಗವು 2 ಮಾದರಿಯಲ್ಲಿದ್ದು, ಒಂದು ಭೂಗತ ಹಾಗೂ ಮತ್ತೊಂದು ಎತ್ತರಿಸಿದ ಮಾರ್ಗ. ಈ ಪೈಕಿ ಕಾಳೇನ ಅಗ್ರಹಾರದಿಂದ – ತಾವರೆಕೆರೆವರೆಗೆಗಿನ ಎತ್ತರಿಸಿದ ಮಾರ್ಗ ಮೇ 2026 ರಲ್ಲಿ ಕಾರ್ಯಾರಂಭಿಸುವ ನಿರೀಕ್ಷೆಯಿದೆ. ಕಾಳೇನ ಅಗ್ರಹಾರ, ಹುಳಿಮಾವು, ಐಐಎಂ ಬೆಂಗಳೂರು, ಜೆಪಿ ನಗರ 4ನೇ ಹಂತ, ಜಯದೇವ ಮತ್ತು ತಾವರೆಕೆರೆ ಮೆಟ್ರೋ ನಿಲ್ದಾಣಗಳ ನಡುವೆ ಮೊದಲ ರೈಲು ಸಂಚಾರ ಆರಂಭವಾಗಲಿದೆ. ಸಂಪೂರ್ಣ ಮಾರ್ಗವು 2026 ಡಿ. ವೇಳೆಗೆ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

### ನೀಲಿ ಮಾರ್ಗ ಆರಂಭಕ್ಕೆ ಡೆಡ್‌ಲೈನ್ ಕೊಟ್ಟ ಸರ್ಕಾರ

**ಕೆ.ಆರ್.ಪುರದಿಂದ ಸಿಲ್ಕ್ ಬೋರ್ಡ್‌ವರೆಗಿನ ಮೆಟ್ರೋ ಮಾರ್ಗವನ್ನು 2026ರ ಡಿಸೆಂಬರ್ ಹಾಗೂ ಕೆ.ಆರ್.ಪುರದಿಂದ ಹೆಬ್ಬಾಳದವರೆಗಿನ ಮಾರ್ಗವನ್ನು 2027ರ ಡಿಸೆಂಬರ್ ಹಾಗೂ ಹೆಬ್ಬಾಳದಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಮಾರ್ಗವನ್ನು 2027ರ ಜೂನ್ ವೇಳೆಗೆ ಮುಗಿಸಲು ರಾಜ್ಯ ಸರ್ಕಾರವು ಕಾಮಗಾರಿ ಗುತ್ತಿಗೆ ಪಡೆದ ಕಂಪನಿಗಳಿಗೆ ಗಡುವು ನೀಡಿದೆ. ''ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೋ ಮಾರ್ಗದ ಕಾಮಗಾರಿಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕಿದೆ. ಈ ಸಂಬಂಧ ಗುತ್ತಿಗೆದಾರರೊಂದಿಗೆ ಚರ್ಚಿಸಲಾಗಿದೆ. ಗುತ್ತಿಗೆ ಸಂಸ್ಥೆಯು ಸಬೂಬು ಹೇಳುತ್ತಿದ್ದು, ಆದಷ್ಟು ಬೇಗ ಕಾಮಗಾರಿ ಮುಗಿಸಲು ಸೂಚಿಸಿದ್ದೇನೆ, ಎಂದು ಡಿಕೆ ಶಿವಕುಮಾರ್ ಹೇಳಿದರು. 58 ಕಿ.ಮೀ. ಉದ್ದದ ಮೆಟ್ರೊ ಮಾರ್ಗ ನಿರ್ಮಾಣಕ್ಕೆ 15 ಸಾವಿರ ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಸಿಲ್ಕ್ ಬೋರ್ಡ್ ನಿಂದ ವಿಮಾನ ನಿಲ್ದಾಣದವರೆಗಿನ ಮಾರ್ಗದಲ್ಲಿ 30 ನಿಲ್ದಾಣಗಳು ನಿರ್ಮಾಣವಾಗಲಿವೆ, ಎಂದರು. ಈ ಮಾರ್ಗದಲ್ಲಿ 5 ರಿಂದ 10 ನಿಲ್ದಾಣಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುತ್ತಿದ್ದಂತೆಯೇ, ಈ ನಿಲ್ದಾಣಗಳ ನಡುವೆ ರೈಲು ಸಂಚಾರ ಆರಂಭಿಸಲು ಚಿಂತನೆ ನಡೆಸಲಾಗಿದೆ, ಎಂದು ಡಿಸಿಎಂ ತಿಳಿಸಿದರು.**

## ಶ್ರೀನಿವಾಸಾಚಾರ್ಯರಿಂದ ಭಾಗವತ ಸಾರೋದ್ಧಾರ ಧಾರ್ಮಿಕ ಪ್ರವಚನ

• ಉದಯವಾಹಿನಿ, ಬೆಂಗಳೂರು



ಶ್ರೀ ಸೀತಾರಾಮ ಮಂದಿರದ ವತಿಯಿಂದ ಡಿಸೆಂಬರ್ 8 ರಿಂದ 13ರ ವರೆಗೆ ಪ್ರತಿದಿನ ಸಂಜೆ 6-45ಕ್ಕೆ ಮ||ಶಾ||ಸಂ|| ಶ್ರೀ ಹೊಳವನಹಳ್ಳಿ ಶ್ರೀನಿವಾಸಾಚಾರ್ಯರಿಂದ ಭಾಗವತ ಸಾರೋದ್ಧಾರ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

**ಸ್ಥಳ:** ಶ್ರೀ ಸೀತಾರಾಮ ಮಂದಿರ (ರಾಘವೇಂದ್ರ ಸ್ವಾಮಿಗಳ ಮಠದ ಪಕ್ಕ), ಬೆಮೆಲ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು-560098

## ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕ್ಷಯ ಪರೀಕ್ಷಾ ಯಂತ್ರ: ದಿನೇಶ್ ಗುಂಡೂರಾವ್ ಚಾಲನೆ

• ಉದಯವಾಹಿನಿ, ಬೆಂಗಳೂರು

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಕ್ಷಯ ಪರೀಕ್ಷಾ ಯಂತ್ರಕ್ಕೆ (ಸಿಬಿಎನ್ ಎಎಟಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಸಿಂಜೆಂಟ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಲ್ಲಿ 1.5 ಕೋಟಿ ಮೊತ್ತದಲ್ಲಿ 7 ಯಂತ್ರಗಳನ್ನು ನೀಡಿದೆ. 3 ಯಂತ್ರಗಳನ್ನು ವಿಜಯನಗರ ಜಿಲ್ಲೆಗೆ, 3 ಯಂತ್ರಗಳನ್ನು ಕೋಲಾರ ಜಿಲ್ಲೆಗೆ ನೀಡಲಾಗಿದ್ದು, ಒಂದನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ನೀಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ನಿಖರ ಫಲಿತಾಂಶ ನೀಡುವ ಈ ಯಂತ್ರಗಳಿಂದ ಕ್ಷಯ ರೋಗವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಸಾಧ್ಯ. ಮೈಕ್ರೋಸ್ಕೋಪಿಕ್ ಪರೀಕ್ಷೆಯಲ್ಲಿ ಕೆಲವೊಮ್ಮೆ ಆರಂಭಿಕ ಹಂತದಲ್ಲಿ ರೋಗ ಪತ್ತೆ ಸಾಧ್ಯವಾಗದೆ ರೋಗಿಗೆ ಸಮಸ್ಯೆ ಆಗುತ್ತಿತ್ತು. ಈ ವಿಧಾನದಲ್ಲಿ 10,000 ಎಂಎಲ್ ಬೆಸಿಲಿಯನ್ ಇದ್ದರೆ ಮಾತ್ರ ರೋಗವನ್ನು ಗುರುತಿಸಬಹುದು. ಅದಕ್ಕೂ ಕಡಿಮೆ ಇದ್ದಾಗ ಗುರುತಿಸುವುದು ಕಷ್ಟ ಆಗುತ್ತಿತ್ತು. ಸಿಬಿಎನ್‌ಎಎಟಿಯಲ್ಲಿ 137ಎಂಎಲ್ ಇದ್ದಾಗಲೂ ಪತ್ತೆ ಹಚ್ಚಬಹುದಾಗಿದೆ. ಕೇವಲ 90 ನಿಮಿಷದಲ್ಲಿ ಕ್ಷಯ ರೋಗಾಣು ಪತ್ತೆ ಹಚ್ಚಲು ಸಾಧ್ಯ' ಎಂದು ಹೇಳಿದರು.

## ರೂ. 686 ಕೋಟಿ ಮೌಲ್ಯದ 21 ಎಕರೆ ಜಮೀನು ಒತ್ತುವರಿ ತೆರವು

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ 686.25 ಕೋಟಿ ಮೌಲ್ಯದ ಒಟ್ಟು 21 ಎಕರೆ 37.08 ಗುಂಟೆ ಸರ್ಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ನೇತೃತ್ವದಲ್ಲಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಯಿತು. ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಖರಾಬು, ಗೋಮಾಳ, ಸರ್ಕಾರಿ, ರಾಜಕಾಲುವೆ, ಬಾವಿ, ಗುಂಡುತೋಪು, ಸರ್ಕಾರಿ ಗುಟ್ಟೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಹೂಡಿ ಗ್ರಾಮದಲ್ಲಿ 4.08 ಗುಂಟೆ, ಬಿದರಹಳ್ಳಿ ಹೋಬಳಿಯ ಮಾರಗೊಂಡನಹಳ್ಳಿ ಗ್ರಾಮದಲ್ಲಿ 0.17 ಗುಂಟೆ, ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿಯ ವಣಕನಹಳ್ಳಿ ಗ್ರಾಮದಲ್ಲಿ 0.10 ಗುಂಟೆ, ಅತ್ತಿಬೆಲೆ ಹೋಬಳಿಯ ಇಂಡ್ಲಬೆಲೆ ಗ್ರಾಮದಲ್ಲಿ ರಾಜಕಾಲುವೆ 0.06 ಗುಂಟೆ, ಚಂದಾಪುರ ಗ್ರಾಮದ ವಿಸ್ತೀರ್ಣ 0.22 ಗುಂಟೆ, ಸರ್ಜಾಪುರ ಹೋಬಳಿಯ ಮುತ್ತನಲ್ಲೂರು ಅಮಾನಿಕೆರೆ ಗ್ರಾಮದಲ್ಲಿ 0.13 ಗುಂಟೆ, ನಾರಾಯಣಘಟ್ಟ ಗ್ರಾಮದಲ್ಲಿ 3 ಎಕರೆ ತೆರವುಗೊಳಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ರಘುವನಹಳ್ಳಿ ಗ್ರಾಮದಲ್ಲಿ 0.11 ಗುಂಟೆ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ರಾಮಪಾಳ್ಯ ಗ್ರಾಮದಲ್ಲಿ 1 ಎಕರೆ 0.19 ಗುಂಟೆ, ಯಶವಂತಪುರ ಹೋಬಳಿಯ ಚಿಕ್ಕಬಾಣಾವರ ಗ್ರಾಮದಲ್ಲಿ 0.29 ಗುಂಟೆ, ಯಲಹಂಕ ತಾಲ್ಲೂಕಿನ ಯಲಹಂಕ ಹೋಬಳಿಯ ಚೊಕ್ಕನಹಳ್ಳಿ ಗ್ರಾಮದಲ್ಲಿ 14ಎಕರೆ 0.26 ಗುಂಟೆ ತೆರವುಗೊಳಿಸಲಾಗಿದೆ.

## ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಹಿತ್ಯ ಸಂಭ್ರಮ

• ಉದಯವಾಹಿನಿ, ಬೆಂಗಳೂರು

ವರ್ಷದ ಬಹುತೇಕ ದಿನಗಳು ಪ್ರತಿಭಟನೆಗಳಿಗೆ ವೇದಿಕೆಯಾಗುತ್ತಿದ್ದ ಸ್ವಾತಂತ್ರ್ಯ ಉದ್ಯಾನವು ಸಾಹಿತ್ಯ ಸಂಭ್ರಮಕ್ಕೆ ಸಾಕ್ಷಿಯಾದರೆ, ಕೈದಿಗಳು, ಹೋರಾಟಗಾರರು ಮಲಗುತ್ತಿದ್ದ ಸ್ಥಳಗಳು ಗಹನವಾದ ಚರ್ಚೆಗಳಿಗೆ ವೇದಿಕೆಯಾಗಿದ್ದವು.ಎರಡು ದಿನಗಳ ಬೆಂಗಳೂರು ಸಾಹಿತ್ಯ ಉತ್ಸವದ 14ನೇ ಆವೃತ್ತಿಗೆ ಶನಿವಾರ ಚಾಲನೆ ದೊರೆಯಿತು. ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರ ಓಡಾಟ ಇಡೀ ಉದ್ಯಾನಕ್ಕೆ ಹೊಸ ಮೆರಗು ನೀಡಿತ್ತು.

ಹಿಂದೆ ಕೈದಿಗಳು ಮಲಗುತ್ತಿದ್ದ ಕೊಠಡಿಗಳೂ ವಿಚಾರಗೋಷ್ಠಿಗೆ ವೇದಿಕೆಯಾಗಿದ್ದವು. ಪ್ರಮುಖವಾಗಿ ನಾಲ್ಕು ವೇದಿಕೆಗಳಲ್ಲಿ ನಡೆದ ವಿಚಾರಗೋಷ್ಠಿಗಳು ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳನ್ನು ಕೇಂದ್ರೀಕರಿಸಿದ್ದವು. ಉತ್ಸವದ ಗೋಷ್ಠಿಗಳ ಮಾಹಿತಿ ಹೊಂದಿರುವ ಕರಪತ್ರಗಳೊಂದಿಗೆ ತಮ್ಮಿಷ್ಟದ ಗೋಷ್ಠಿಗಳನ್ನು ಆಲಿಸಲು ಬಂದಿದ್ದ ಕೆಲ ಸಾಹಿತ್ಯಾಸಕ್ತರು ನಿರಾಶರಾದ ಪ್ರಸಂಗವೂ ನಡೆಯಿತು. ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾದ ಕಾರಣ ವಿಷಯ ತಜ್ಞರಲ್ಲಿ ಕೆಲವರು ಗೈರಾಗಿದ್ದರು.

ಇದರಿಂದಾಗಿ ಬೇರೆ ವಿಷಯಗಳ ಮೇಲೆ ಗೋಷ್ಠಿಗಳು ನಡೆದವು. ತಮ್ಮಿಷ್ಟದ ಬರಹಗಾರರ ಮಾತುಗಳನ್ನು ಆಲಿಸಿದ ಅಭಿಮಾನಿ ಬಳಗ, ಪುಸ್ತಕಗಳಿಗೆ ಅವರ ಹಸ್ತಾಕ್ಷರಗಳನ್ನು ಪಡೆದು ಸಂಭ್ರಮಿಸಿತು. ಮಕ್ಕಳಿಗಾಗಿಯೇ ವಯೋಮಿತಿ ಅನುಸಾರ ಮೂರು ವೇದಿಕೆಗಳನ್ನು ಸೃಷ್ಟಿಸಲಾಗಿತ್ತು. ಅಮರ ಚಿತ್ರಕಥಾ ರಸಪ್ರಶ್ನೆ, ಮನರಂಜನೆಯ ಕಾರ್ಯಕ್ರಮಗಳನ್ನೂ ಮಕ್ಕಳಿಗಾಗಿ ರೂಪಿಸಲಾಗಿತ್ತು.

## ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿ


• ಉದಯವಾಹಿನಿ, ಕೆ.ಆರ್.ಪುರ

ಅಸ್ಪೃಶ್ಯತೆ, ಅಸಮಾನತೆ, ತಾರತಮ್ಯದ ವಿರುದ್ಧ ಹೋರಾಡಿದ ಮಹಾನ್ ಮಾನವತಾವಾದಿ ಬಾಬಾ ಸಹೇಬ್ ಅಂಬೇಡ್ಕರ್ ಸದಾ ಚಿರಾಯು ಎಂದು ಮಹದೇವಪುರ ಟಾಸ್ಕ್ ಫೋರ್ಸ್ ಆರೋಗ್ಯ ವಿಪತ್ತು ಸಮಿತಿಯ ಅಧ್ಯಕ್ಷರಾದ ಗುಟ್ಟ ಮರಪ್ಪ ತಿಳಿಸಿದರು.

ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ಸಮೀಪದ ಅಂಬೇಡ್ಕರ್ ನಗರ ಗುಟ್ಟದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ ಮಹಾಪರಿನಿರ್ವಾಣ ದಿನದಲ್ಲಿ ಮತನಾಡಿದರು.

ಬಾಬಾ ಸಾಹೇಬರು ಅಸಮಾನತೆಯೇ ಮೇಲೈಸುತ್ತಿದ್ದ ಕಾಲದಲ್ಲಿ ತಾನು ಅನುಭವಿಸಿದ ನೋವು, ಯಾತನೆಗಳು ಮುಂದಿನ ಜನಾಂಗಕ್ಕೆ ಸಿಗಬಾರದು ಅನ್ನುವ ದೃಷ್ಟಿಯಿಂದ ನಿರಂತರವಾಗಿ ಅಧ್ಯಯನ ಮಾಡಿ, ಅಸ್ಪೃಶ್ಯತೆ, ಅಸಮಾನತೆ, ತಾರತಮ್ಯದ ವಿರುದ್ಧ ಹೋರಾಡಿ, ಪ್ರತಿಯೊಬ್ಬರ ಹಕ್ಕುಗಳಿಗಾಗಿ ನ್ಯಾಯ ಮಂಡನೆ ಮಾಡಿದವರು ಎಂದರು

ಅಂಬೇಡ್ಕರ್ ಅವರು ಭಾರತದ ಸಂವಿಧಾನಶಿಲ್ಪಿ ಮಾತ್ರವಲ್ಲದೇ, ನ್ಯಾಯ ಶಾಸ್ತ್ರಜ್ಞರಾಗಿ, ಸುಧಾರಕರಾಗಿ, ಅರ್ಥಶಾಸ್ತ್ರಜ್ಞರಾಗಿ, ಸಮಾಜ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ, ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ದಿಟ್ಟತನದಿಂದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ನಮ್ಮ ನಾಯಕರದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಮಾರ್ಗದರ್ಶನದಲ್ಲಿ ಪ್ರತಿ ವರ್ಷ ಅಂಬೇಡ್ಕರ್ ಗುಟ್ಟದಲ್ಲಿ ವಿಶೇಷ ಜನಪರ ಜನಸೇವಾ ಹಾಗೂ ದಲಿತಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ ಎಂದು ನುಡಿದರು. ಇದೇವೇಳೆ ಅಂಬೇಡ್ಕರ್ ಅವರ ಪುತ್ಥಳಿಗೆ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಪ್ರಸಾದ ವಿತರಣೆ ಮಾಡಿದರು. ಶಿಕ್ಷಕರಾದ ಸೋಣ್ಣಪ್ಪ, ಸ್ಥಳೀಯ ಯುವಮುಖಂಡ ರವಿ ಸೇರಿದಂತೆ ಮತ್ತಿತರರು


## ಜಿಬಿಎ ಪಾಲಿಕೆ ಕಟ್ಟಡಕ್ಕೆ ನೀಲಿ-ಹಸಿರು ಪರಿಕಲ್ಪನೆ

• ಉದಯವಾಹಿನಿ, ಬೆಂಗಳೂರು

ನಾಲ್ಕು ನಗರ ಪಾಲಿಕೆಗಳ ಹೊಸ ಕಟ್ಟಡಗಳನ್ನು ನೀಲಿ ಹಸಿರು ಕಟ್ಟಡ ಪರಿಕಲ್ಪನೆಯಲ್ಲಿ ನಿರ್ಮಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಿಬಿಎ ನಿರ್ಧರಿಸಿದೆ.

ನೀರಿನ ನಿರ್ವಹಣೆ ಮತ್ತು ಪ್ರಕೃತಿಗೆ ಹಾನಿಕಾರಕವಾಗದಂತೆ ಸುಸ್ಥಿರ ರೀತಿಯಲ್ಲಿ, ಪರಿಸರಸ್ನೇಹಿಯಾಗಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.ಹೊಸದಾಗಿ ರಚನೆಯಾಗಿರುವ 5 ನಗರ ಪಾಲಿಕೆಗಳಲ್ಲಿ ಕೇಂದ್ರ ನಗರ ಪಾಲಿಕೆ, ಜಿಬಿಎ ಕೇಂದ್ರ ಕಚೇರಿ ಆವರಣದಲ್ಲಿ ಅನೆಕ್ಸ್ -3 ಕಟ್ಟಡವನ್ನು ನೀಡಲಾಗುತ್ತಿದೆ.

ಇನ್ನುಳಿದ ನಾಲ್ಕು ನಗರ ಪಾಲಿಕೆಗಳಿಗೆ ಹೊಸದಾಗಿ ಕಟ್ಟಡಗಳನ್ನು ಏಕ ರೂಪದಲ್ಲಿ ನಿರ್ಮಿಸುವ ಉದ್ದೇಶದಿಂದ, ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಹೊಸ ನಗರ ಪಾಲಿಕೆಗಳ ಕಟ್ಟಡ ವಿನ್ಯಾಸ, ಲೊಗೆಗಳನ್ನು ನಾಗರಿಕರು, ಯುವ ವಾಸ್ತುಶಿಲ್ಪಿಗಳಿಂದ ಆಹ್ವಾನಿಸುವುದಾಗಿ ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದ್ದರು. ಆದರೆ, ಅದು ಕಾರ್ಯಗತವಾಗಲಿಲ್ಲ. ಅಂತಿಮವಾಗಿ, ಜಿಬಿಎ ನೀಲಿ ಹಸಿರು



ಉದಯವಾಹಿನಿ ಚಿತ್ರ

ಪರಿಕಲ್ಪನೆಯಲ್ಲಿ ಕಟ್ಟಡಗಳನ್ನು ನಿರ್ಮಿಸಲು ವಿನ್ಯಾಸ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಒಳಗೊಂಡ ಕಟ್ಟಡ ನಕ್ಷೆ- ವಿಸ್ತೃತ ಯೋಜನಾ ವರದಿ ತಯಾರಿಸಲು ಟೆಂಡರ್ ಆಹ್ವಾನಿಸಿದೆ.

ನೀಲಿ: ಸುಸ್ಥಿರ ನೀರು ನಿರ್ವಹಣೆಯ ಯೋಜನೆಗಳತ್ತ ಗುರಿ ಹೊಂದಬೇಕು. ಇದರಲ್ಲಿ ಮಳೆ ನೀರು ಸಂಗ್ರಹ, ಅದರ ಮರು ಬಳಕೆಯ ವ್ಯವಸ್ಥೆಗಳಿರಬೇಕು. ಒಳಚರಂಡಿ ನೀರನ್ನು ಹಿಡಿದಿಟ್ಟು, ಅದನ್ನು ಸಂಸ್ಕರಿಸಿ ಅಂತರ್ಜಲ ಮರುಪೂರಣಗೊಳಿಸುವ ಜೊತೆಗೆ ಪ್ರವಾಹ ನಿಯಂತ್ರಕವನ್ನಾಗಿಸುವ ವ್ಯವಸ್ಥೆ ರೂಪಿಸಬೇಕು. ತ್ಯಾಜ್ಯ ನೀರು ಸಂಸ್ಕರಣೆ, ಅದರ ಬಳಕೆಗಾಗಿ ಕಟ್ಟಡದ ಆವರಣದಲ್ಲೇ ಗ್ರೇ ವಾಟರ್ ಸಂಸ್ಕರಣೆ ಘಟಕವಿರಬೇಕು. ಅದನ್ನು ಉದ್ಯಾನ ಸೇರಿದಂತೆ ಇತರೆ ಉಪಯೋಗಕ್ಕೆ ಬಳಸಬೇಕು. ಬ್ಲೂ-ರೂಫ್‌ಗಳನ್ನು ಸ್ಥಾಪಿಸುವ ಮೂಲಕ ಮಳೆ ನೀರನ್ನು ತಾತ್ಕಾಲಿಕವಾಗಿ ಸಂಗ್ರಹಿಸಿ, ಒಳಚರಂಡಿ ವ್ಯವಸ್ಥೆಗೆ ಬಿಡುವ ಮುನ್ನ ಕೊಳ ಅಥವಾ ಇತರೆ ಸಂಗ್ರಹ ಘಟಕಗಳಲ್ಲಿ ಸಂಗ್ರಹಿಸಬೇಕು.

### ಗಿಡ ಮರಗಳನ್ನು ಬೆಳೆಸಿ

**ಹಸಿರು ಚಾವಣಿಗಳನ್ನು ಅಳವಡಿಸಿ, ಬಾಷ್ಪೀಕರಣದ ಮೂಲಕ ಕಟ್ಟಡವನ್ನು ತಂಪಾಗಿಸುವ, ಜೀವವೈವಿಧ್ಯವನ್ನು ವೃದ್ಧಿಸುವ ಜೀವಂತ ಗೋಡೆಗಳನ್ನು ನಿರ್ಮಿಸಬೇಕು. ಕಾರ್ಬನ್ ಕಡಿತಗೊಳಿಸಲು, ವಾಯುಗುಣಮಟ್ಟ ಉತ್ತಮವಾಗಿಸಲು ನಗರ ಅರಣೀಕರಣ ರಸ್ತೆಗೆ ಹೊಂದಿಕೊಂಡ ಗಿಡ ಮರಗಳನ್ನು ಬೆಳೆಸಬೇಕು. ನೈಸರ್ಗಿಕವಾಗಿ ನೀರನ್ನು ಸಂಸ್ಕರಿಸುವ ಜೌಗು ಪ್ರದೇಶ, ಸಸ್ಯಕ್ಷೇತ್ರವನ್ನು ನಿರ್ಮಿಸಬೇಕು. ಬರ ಸಹಿಷ್ಣು ಸ್ಥಳೀಯ ಸಸ್ಯಗಳನ್ನು ನೆಟ್ಟು ಕೃತಕ ನೀರಾವರಿಯ ಅಗತ್ಯ ಪೂರೈಸಬೇಕು. ಸೌರಶಕ್ತಿ ಉತ್ಪಾದನೆಯ ಪ್ಯಾನಲ್‌ಗಳನ್ನು ಅಳವಡಿಸಬೇಕು.**

# ಏರ್ಪೋರ್ಟ್‌ನಲ್ಲಿ ಭಾನುವಾರವೂ 61 ಇಂಡಿಗೋ ವಿಮಾನಗಳು ರದ್ದು

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನಗಳ ಹಾರಾಟದಲ್ಲಿನ ವ್ಯತ್ಯಯ ಇಂದೂ ಸಹ ಮುಂದುವರೆದಿದೆ ತಾಂತ್ರಿಕ ಕಾರಣಗಳಿಂದ ಕೆಂಪೇಗೌಡ ಏರ್ಪೋರ್ಟ್‌ನಿಂದ ನಿರ್ಗಮಿಸಬೇಕಿದ್ದ ಬರೋಬ್ಬರಿ 61 ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ದೆಹಲಿ, ಹೈದರಾಬಾದ್, ಇಂದೋರ್, ರಾಯಪುರ್, ಕೊಲ್ಕತ್ತಾ, ಮಂಗಳೂರು, ಕೊಚ್ಚಿ, ಶ್ರೀನಗರ, ಭೂಪಾಲ್ ಸೇರಿದಂತೆ ದೇಶದ ಹಲವು ನಗರಗಳಿಗೆ ತೆರಳಬೇಕಿದ್ದ ವಿಮಾನಗಳು ಕ್ಯಾನ್ಸಲ್ ಆಗಿವೆ.

**ಸಹಜ ಸ್ಥಿತಿಯತ್ತ ಏರ್ಪೋರ್ಟ್:** ಕಳೆದ ಐದು ದಿನಗಳಿಂದ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ವಿಮಾನ ನಿಲ್ದಾಣವು ಇದೀಗ ಸಹಜ ಸ್ಥಿತಿಗೆ ಮರಳುತ್ತಿದೆ. ಏರ್ಪೋರ್ಟ್ ಆಡಳಿತ ಮಂಡಳಿ ಕೈಗೊಂಡ ಮುಂಜಾಗ್ರತಾ ಕ್ರಮಗಳಿಂದಾಗಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ.

ರದ್ದಾದ ವಿಮಾನಗಳ ಮಾಹಿತಿಯನ್ನು ಏರ್‌ಲೈನ್ಸ್ ಸಿಬ್ಬಂದಿಯು ಮೊದಲೇ ಸಂದೇಶದ ಮೂಲಕ ಪ್ರಯಾಣಿಕರಿಗೆ ತಲುಪಿಸಿದ್ದಾರೆ. ರದ್ದಾದ ವಿಮಾನಗಳ ಪ್ರಯಾಣಿಕರು ಏರ್ಪೋರ್ಟ್‌ಗೆ ಬಾರದಂತೆ ಸಂದೇಶ ನೀಡಿದ ಹಿನ್ನೆಲೆಯಲ್ಲಿ, ಏರ್ಪೋರ್ಟ್‌ನಲ್ಲಿ ಜನಸಂದಣಿ ಇಳಿಮುಖವಾಗಿದೆ. ವಿಶೇಷವಾಗಿ ಇಂಡಿಗೋ ಕೌಂಟರ್ ಮುಂದೆಯೂ ಜನರ ಸಂಖ್ಯೆ ಕಡಿಮೆಯಾಗಿದೆ.



ಉದಯವಾಹಿನಿ ಚಿತ್ರ

**ಹೆಚ್ಚುವರಿ ಸಿಬ್ಬಂದಿ ನಿಯೋಜನೆ:** ಹಲವು ವಿಮಾನಗಳು ರದ್ದಾಗಿದ್ದರೆ, ಮುಂದುವರೆದ ಕೆಲ ಇಂಡಿಗೋ ವಿಮಾನಗಳ ಹಾರಾಟದಲ್ಲಿ ವಿಳಂಬ ಉಂಟಾಗಿದೆ. ವಿಮಾನಗಳು ವಿಳಂಬವಾದ ಹಿನ್ನೆಲೆಯಲ್ಲಿ ಕೆಲ ಪ್ರಯಾಣಿಕರು ಏರ್ಪೋರ್ಟ್‌ನಲ್ಲಿ ಕಾದು ಕುಳಿತಿದ್ದಾರೆ. ಪ್ರಯಾಣಿಕರಿಗೆ ಫ್ಲೈಟ್‌ಗಳ ಬಗ್ಗೆ ಸೂಕ್ತ ಮಾಹಿತಿ ನೀಡಲು ಮತ್ತು ಗೊಂದಲ ನಿವಾರಿಸಲು ಏರ್ಪೋರ್ಟ್ ಆಡಳಿತ ಮಂಡಳಿಯು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿದೆ. ಒಟ್ಟಾರೆಯಾಗಿ, ಕ್ಯಾನ್ಸಲ್ ಆದ ವಿಮಾನಗಳ ಮಾಹಿತಿಯನ್ನು ಮೊದಲೇ ನೀಡುತ್ತಿರುವುದರಿಂದ, ದೇವನಹಳ್ಳಿ ಬಳಿಯ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒತ್ತಡ ಕಡಿಮೆಯಾಗಿ ಸಹಜ ವಾತಾವರಣ ನಿರ್ಮಾಣವಾಗುತ್ತಿದೆ. ಇಂಡಿಗೋ ತನ್ನ ತಪ್ಪೊಪ್ಪಿಕೊಂಡಿದ್ದು, ಫೆಬ್ರವರಿ 10, 2026ರ ವೇಳೆಗೆ ಪರಿಸ್ಥಿತಿ ಸಂಪೂರ್ಣ ಹತೋಟಿಗೆ ಬರಲಿದೆ ಎಂದು ಹೇಳಿದೆ.

## ವಾಯುಮಾಲಿನ್ಯ ನಿಯಂತ್ರಣಕ್ಕೆ ತಜ್ಞರ ಸಮಿತಿ ರಚನೆಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ವಾಯುಮಾಲಿನ್ಯ ನಿಯಂತ್ರಣಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕ್ರಮ ಕೈಗೊಂಡಿದ್ದು, ಇದಕ್ಕೆ ತಜ್ಞರ ಸಮಿತಿ ರಚನೆಗೆ ಸೂಚನೆ ನೀಡಿದ್ದಾರೆಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ರಾಷ್ಟ್ರದ ಉದ್ಯಾನನಗರಿ, ಸಿಲಿಕಾನ್ ಸಿಟಿ ಎಂದೇ ಖ್ಯಾತಿ ಪಡೆದಿರುವ ಬೆಂಗಳೂರಿನಲ್ಲಿ ವಾಯುಮಾಲಿನ್ಯವು ಅಪಾಯಕಾರಿ ಮಟ್ಟಕ್ಕೆ ಏರುತ್ತಿರುವ ಕುರಿತು ಗೂಳಿಗೌಡರು ಮಾಡಿದ ಮನವಿಗೆ ಡಿಸಿಎಂ ಸ್ಪಂದಿಸಿದ್ದು, ತುರ್ತು ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ್ದಾರೆ. ದೆಹಲಿಯಂತೆಯೇ ಬೆಂಗಳೂರು ಸಹ ಭವಿಷ್ಯದಲ್ಲಿ ತೀವ್ರ ಮಾಲಿನ್ಯದ ಬಿಕ್ಕಟ್ಟನ್ನು ಎದುರಿಸುವ ಸಾಧ್ಯತೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ದಿನೇಶ್ ಗೂಳಿಗೌಡ ಅವರು ಡಿಸಿಎಂ ಅವರಿಗೆ ಪತ್ರ ಬರೆದಿದ್ದರು.

ಪತ್ರಕ್ಕೆ ಧನಾತಕವಾಗಿ ಪ್ರತಿಕ್ರಿಯಿಸಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಮುಖ್ಯ ಕಾರ್ಯದರ್ಶಿಗಳ ಮೂಲಕ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಿದ್ದು, ಬೆಂಗಳೂರಿನ ವಾಯು ಮಾಲಿನ್ಯದ ಅಪಾಯವನ್ನು ತಡೆಗಟ್ಟಲು ತುರ್ತು ಮಾರ್ಗೋಪಾಯಗಳನ್ನು ಕಂಡುಹಿಡಿಯಲು ತಜ್ಞರ ತಂಡವನ್ನು ರಚಿಸುವಂತೆ ಆದೇಶಿಸಿದ್ದಾರೆ. ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ ಸ್ಫೋಟ ನಗರದಲ್ಲಿ 1,23,24,919 ನೋಂದಾಯಿತ ಮೋಟರ್ ವಾಹನಗಳಿವೆ. ಇವುಗಳಿಂದ ಉಂಟಾಗುವ ಮಾಲಿನ್ಯದಿಂದಾಗಿ ಮಕ್ಕಳು, ಹಿರಿಯರು ಉಸಿರಾಟದ ತೊಂದರೆಗಳು, ಅಲರ್ಜಿಗಳು, ಅಸ್ತಮಾ ಮತ್ತು ಹೃದಯ ಸಂಬಂಧಿ ರೋಗಗಳಿಗೆ ತುತ್ತಾಗುತ್ತಿದ್ದಾರೆ.

ಈ ಹಿನ್ನಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜಧಾನಿ ಬೆಂಗಳೂರಿನ ವಾಯು ಮಾಲಿನ್ಯ ನಿಯಂತ್ರಿಸಲು ತಜ್ಞರ ಸಮಿತಿಗೆ ರಚನೆಗೆ ಸೂಚನೆ ನೀಡಿದ್ದಾರೆ.



ಉದಯವಾಹಿನಿ ಚಿತ್ರ

### ಅಭಿವೃದ್ಧಿಪಡಿಸಬೇಕೆಂದು ಮನವಿ

**ಪರಿಸರ ವಿಜ್ಞಾನಿಗಳು, ಸಂಚಾರ ತಜ್ಞರು, ಸಾರ್ವಜನಿಕ ಆರೋಗ್ಯ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ತಕ್ಷಣವೇ ರಚಿಸಬೇಕು, ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ ಸಮಗ್ರ ಸ್ವಚ್ಛ-ವಾಯು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಬೇಕೆಂದು ಮನವಿ ಮಾಡಲಾಗಿತ್ತು.**

## ಜಯದೇವ ಸಂಸ್ಥೆಗೆ 4ನೇ ಬಾರಿ ಎನ್‌ಎಬಿಎಚ್ ಮಾನ್ಯತೆ

• ಉದಯವಾಹಿನಿ, ಬೆಂಗಳೂರು

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ನಾಲ್ಕನೆ ಬಾರಿಗೆ ಎನ್‌ಎಬಿಎಚ್ (ಆಸ್ಪತ್ರೆಗಳು ಮತ್ತು ಆರೋಗ್ಯ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ) ಮಾನ್ಯತೆ ಪಡೆದಿದೆ. ಹೆಚ್ಚು ಬಾರಿ ಈ ಮನ್ನಣೆ ಪಡೆದ ರಾಜ್ಯದ ಏಕೈಕ ಸರ್ಕಾರಿ ಸ್ವಾಯತ್ತ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಸ್ಪತ್ರೆ ಒದಗಿಸುವ ಗುಣಮಟ್ಟದ ಚಿಕಿತ್ಸೆ, ಆರೈಕೆ ಹಾಗೂ ವೈದ್ಯಕೀಯ ಸೌಲಭ್ಯಗಳ ಆಧಾರದ ಮೇಲೆ ಈ ಮಾನ್ಯತೆ ನೀಡಲಾಗುತ್ತದೆ.

ಭಾರತದ ಗುಣಮಟ್ಟ ಮಂಡಳಿಯ ಗುಣಮಟ್ಟ ತಜ್ಞರ ತಂಡವು ಕಳೆದ ಜುಲೈನಲ್ಲಿ ಸಂಸ್ಥೆಗೆ ಭೇಟಿ ನೀಡಿತ್ತು. ವೈದ್ಯಕೀಯ ಸೇವೆ, ಸೌಲಭ್ಯಗಳ ಪರಿಶೀಲನೆ ನಡೆಸಿತ್ತು. ಸ್ವಚ್ಛತೆ, ರೋಗಿಗಳ ಮೇಲಿನ ನಿಗಾ ವ್ಯವಸ್ಥೆ, ಕಡತಗಳ ನಿರ್ವಹಣೆ, ರೋಗಿಗಳ ಆರೈಕೆ ಮತ್ತು ಚಿಕಿತ್ಸಾ ವಿಧಾನಗಳು, ಹೊರರೋಗಿಗಳ ವಿಭಾಗ, ಒಳರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ ಒಳಗೊಂಡು ಎಲ್ಲಾ ವಿಭಾಗಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಿತ್ತು.





ಉದಯವಾಹಿನಿ ಚಿತ್ರ

ಎಲ್ಲಾ ವಿಭಾಗಗಳಲ್ಲಿ ನಿಗದಿತ ಮಾನದಂಡ ಹೊಂದಿದ್ದರಿಂದ ಈ ಮಾನ್ಯತೆ ದೊರೆತಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ತಿಳಿಸಿದ್ದಾರೆ. ಪ್ರತಿ ಮೂರು ವರ್ಷಕ್ಕೊಮ್ಮೆ ನೀಡುವ ಈ ಮಾನ್ಯತಾ ಪ್ರಮಾಣ ಪತ್ರವನ್ನು 2015ರಿಂದಲೂ ಸತತವಾಗಿ ಸಂಸ್ಥೆ ಪಡೆಯುತ್ತಿದೆ. ಎಲ್ಲರಿಗೂ ಕಡಿಮೆ ಮತ್ತು ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ನಿತ್ಯ 1,800ಕ್ಕೂ ಅಧಿಕ ಮಂದಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ ಎಂದು ಹೇಳಿದ್ದಾರೆ.

# ಬೆಂಗಳೂರಿನ ವಾಯು ಮಾಲಿನ್ಯ ನಿಯಂತ್ರಣಕ್ಕೆ ಕ್ರಮ

## ದಿನೇಶ್ ಗೂಳಿಗೌಡ ಮಾಡಿದ ಮನವಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಕ್ಷಣವೇ ಸ್ಪಂದನೆ

• ಉದಯವಾಹಿನಿ, ಬೆಂಗಳೂರು

ಉದ್ಯಾನ ನಗರಿ, ಸಿಲಿಕಾನ್ ಸಿಟಿ ಎಂದು ಖ್ಯಾತಿ ಪಡೆದಿದ್ದ ಬೆಂಗಳೂರಿನ ವಾಯು ಮಾಲಿನ್ಯ ಅಪಾಯಕಾರಿ ಮಟ್ಟಕ್ಕೆ ಏರುತ್ತಿರುವ ಕುರಿತು ವಿಧಾನ ಪರಿಷತ್ ಶಾಸಕರೂ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ದಿನೇಶ್ ಗೂಳಿಗೌಡ ಅವರು ಮಾಡಿದ ಮನವಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಕ್ಷಣವೇ ಸ್ಪಂದಿಸಿದ್ದು, ಈ ವಿಷಯದ ಕುರಿತು ತುರ್ತು ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ್ದಾರೆ. ದೆಹಲಿಯಂತೆಯೇ ಬೆಂಗಳೂರು ಸಹ ಭವಿಷ್ಯದಲ್ಲಿ ತೀವ್ರ ಮಾಲಿನ್ಯದ ಬಿಕ್ಕಟ್ಟನ್ನು ಎದುರಿಸುವ ಸಾಧ್ಯತೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ದಿನೇಶ್ ಗೂಳಿಗೌಡ ಅವರು ಡಿಸಿಎಂ ಅವರಿಗೆ ಪತ್ರ ಬರೆದಿದ್ದರು. ಪತ್ರಕ್ಕೆ ಧನಾತ್ಮಕವಾಗಿ ಪ್ರತಿಕ್ರಿಯಿಸಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಮುಖ್ಯ ಕಾರ್ಯದರ್ಶಿಗಳ ಮೂಲಕ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಿದ್ದು, ಬೆಂಗಳೂರಿನ ವಾಯು ಮಾಲಿನ್ಯದ ಅಪಾಯವನ್ನು ತಡೆಗಟ್ಟಲು ತುರ್ತು ಮಾರ್ಗೋಪಾಯಗಳನ್ನು ಕಂಡುಹಿಡಿಯಲು ತಜ್ಞರ ತಂಡವನ್ನು ರಚಿಸುವಂತೆ ಆದೇಶಿಸಿದ್ದಾರೆ.



**ಶಾಸಕ ದಿನೇಶ್ ಗೂಳಿಗೌಡರ ಮನವಿಯ ಮುಖ್ಯಾಂಶಗಳು:** ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ ಸ್ಫೋಟ ನಗರದಲ್ಲಿ 1,23,24,919 ನೋಂದಾಯಿತ ಮೋಟರ್ ವಾಹನಗಳಿವೆ. ಜನಸಂಖ್ಯೆ ಸುಮಾರು 1.47 ಕೋಟಿ, ವಾಹನಗಳ ಅನುಪಾತವು ಸರಿಸುಮಾರು ಪ್ರತಿ ನಾಗರಿಕರಿಗೆ ಒಂದು ವಾಹನ ಎಂಬಂತಾಗಿದೆ.

**ನಿರಂತರ ನೋಂದಣಿ ಹೆಚ್ಚಳ:** ಪ್ರತಿದಿನ ಸರಾಸರಿ 2,563 ಹೊಸ ವಾಹನಗಳು ಬೆಂಗಳೂರಿನಲ್ಲಿ ನೋಂದಣಿಯಾಗುತ್ತಿವೆ. ಇವುಗಳಲ್ಲಿ 84 ಲಕ್ಷಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಾಗಿವೆ.

### ತಜ್ಞರ ಸಮಿತಿಯ ಕರ್ತವ್ಯಗಳು ಮತ್ತು ಧ್ಯೇಯೋದ್ದೇಶಗಳು

**ಮುಂದಿನ ದಶಕದಲ್ಲಿ ಬೆಂಗಳೂರಿನ ಮಾಲಿನ್ಯದ ಪಥವನ್ನು ನಿರ್ಣಯಿಸುವುದು. ತುರ್ತು ಮತ್ತು ದೀರ್ಘಕಾಲೀನ ಮಾಲಿನ್ಯ ತಗ್ಗಿಸುವ ಕ್ರಮಗಳನ್ನು ಶಿಫಾರಸು ಮಾಡುವುದು. ವಾಹನ ಹೊರಸೂಸುವಿಕೆಯ ನಿಯಮಗಳು ಮತ್ತು ಅವುಗಳ ಜಾರಿಯನ್ನು ಬಲಪಡಿಸುವುದು. ಹೊಸ ವಾಹನ ನೋಂದಣಿ ಮತ್ತು ಸಂಚಾರ ದಟ್ಟಣೆಯನ್ನು ನಿರ್ವಹಿಸುವ ತಂತ್ರಗಳನ್ನು ರೂಪಿಸುವುದು. ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ ಸಮಗ್ರ ಸ್ವಚ್ಛ-ವಾಯು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಬೇಕೆಂದು ಮನವಿ ಮಾಡಿದ್ದರು.**

**ವಾಯು ಗುಣಮಟ್ಟದ ಸೂಚ್ಯಂಕ:** ಬೆಂಗಳೂರಿನ ಪ್ರಸ್ತುತ ವಾಯು ಗುಣಮಟ್ಟ ಸೂಚ್ಯಂಕ 50ನ್ನು ಮೀರಿ 70 ಮಧ್ಯಮ ವರ್ಗದಲ್ಲಿದೆ. ಆದರೆ ಮುಂದಿನ 5-10 ವರ್ಷಗಳಲ್ಲಿ ನಗರವು 'ತೀವ್ರ' ಮಾಲಿನ್ಯದ ಮಟ್ಟ ತಲುಪಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

**ತಜ್ಞರ ಸಮಿತಿ ರಚನೆಗೆ ಡಿಸಿಎಂ ಡಿಕೆಶಿ ಸೂಚನೆ**

**ಆರೋಗ್ಯದ ಮೇಲೆ ಗಂಭೀರ ಪರಿಣಾಮ:** ಮಾಲಿನ್ಯದಿಂದಾಗಿ ಮಕ್ಕಳು, ಹಿರಿಯರು ಉಸಿರಾಟದ ತೊಂದರೆಗಳು, ಅಲರ್ಜಿಗಳು, ಅಸ್ತಮಾ ಮತ್ತು ಹೃದಯ ಸಂಬಂಧಿ ರೋಗಗಳಿಗೆ ತುತ್ತಾಗುತ್ತಿದ್ದಾರೆ.

**ತುರ್ತು ಸಮಿತಿ ರಚನೆಗೆ ಬೇಡಿಕೆ:** ಪರಿಸರ ವಿಜ್ಞಾನಿಗಳು, ಸಂಚಾರ ತಜ್ಞರು, ಸಾರ್ವಜನಿಕ ಆರೋಗ್ಯ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ತಕ್ಷಣವೇ ರಚಿಸಬೇಕು.

## ಅಂತರಾಳದಿಂದ.. EDITORIAL

# ದ್ವೇಷಭಾಷಣ ತಡೆಗೆ ಕಾನೂನು

## ದಿಟ್ಟ ನಡೆ, ಎಚ್ಚರವೂ ಅಗತ್ಯ



ಈಗ ಕರ್ನಾಟಕ ಸರ್ಕಾರ ರೂಪಿಸಿರುವ ಮಸೂದೆಯು ಇಂತಹ ಕ್ರಿಮಿನಲ್ ಅಪರಾಧಗಳನ್ನು ತಡೆಯಲು ಸಮಗ್ರವಾದ ಚೌಕಟ್ಟೊಂದನ್ನು ಹಾಕಿಕೊಟ್ಟಿದೆ. ಆದರೆ, ಕೆಲವು ಸಾಂವಿಧಾನಿಕ ಮಿತಿಗಳನ್ನು ಈ ಮಸೂದೆಯಲ್ಲಿ ಅಡಕವಾಗಿಸದೆ ಇದ್ದಲ್ಲಿ ಮಸೂದೆಯು ತಪ್ಪಾಗಿ ಬಳಕೆಯಾಗುವ ಅಪಾಯಗಳೂ ಇವೆ.ಈ ಮಸೂದೆಯು ಸ್ಪಷ್ಟವಾದ ಹಾಗೂ ವಿಸ್ತ್ರತವಾದ ವ್ಯಾಖ್ಯಾನಗಳನ್ನು ಒಳಗೊಂಡಿದೆ. ದ್ವೇಷ ಭಾಷಣ' ಎನ್ನುವುದರ ಅರ್ಥವು, ಮಾತಿನ ಮೂಲಕ, ಬರಹದ ಮೂಲಕ, ಚಿತ್ರಗಳ ಮೂಲಕ, ವಿದ್ಯುನ್ಮಾನ ವೇದಿಕೆ ಬಳಕೆಯ ಮೂಲಕ ಗಾಸಿಗೊಳಿಸುವ, ಸೌಹಾರ್ದ ಕದಡುವ, ವ್ಯಕ್ತಿಯ ಅಥವಾ ಗುಂಪೊಂದರ ವಿರುದ್ಧ ದ್ವೇಷ ಮೂಡಿಸುವಂತಹ ಸಂದೇಶ ರವಾನಿಸುವುದು ಎಂಬುದಾಗುತ್ತದೆ. ಹೀಗೆ ದ್ವೇಷ ಮೂಡಿಸುವ ಯತ್ನವು ಧರ್ಮ, ಜಾತಿ, ಜನಾಂಗ, ಭಾಷೆ, ಲಿಂಗ, ಲೈಂಗಿಕ ಅಭಿವ್ಯಕ್ತಿ. ಅಂಗವೈಕಲ್ಯ, ಹುಟ್ಟಿದ ಸ್ಥಳ, ಪಂಗಡವನ್ನು ಆಧರಿಸಿ ನಡೆದಾಗ ಅದು ಅಪರಾಧ ಎಂದು ಮಸೂದೆಯು ಹೇಳುತ್ತದೆ. ಇಂತಹ ಭಾಷಣಗಳ ಪ್ರಸರಣ ಹಾಗೂ ಉತ್ತೇಜನ ನೀಡುವುದು 'ದ್ವೇಷಾಪರಾಧ' ಆಗುತ್ತದೆ ಎಂದು ಮಸೂದೆಯು ಹೇಳುತ್ತದೆ. ಈ ಅಪರಾಧಗಳಿಗೆ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಏಳು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ. ಮತ್ತೆ ಮತ್ತೆ ಇದೇ ಅಪರಾಧ ಎಸಗುವವರನ್ನು ಗರಿಷ್ಠ 10 ವರ್ಷಗಳವರೆಗೆ ಜೈಲುವಾಸಕ್ಕೆ ಗುರಿಪಡಿಸಬಹುದಾಗಿದೆ. ಇವು ಗಂಭೀರ ಸ್ವರೂಪದ ಅಪರಾಧ ಕೃತ್ಯಗಳು ಎಂದು ಪರಿಗಣಿತವಾಗುತ್ತವೆ. ಇವು ಜಾಮೀನು ರಹಿತವಾಗಿರಲಿವೆ. ಇಂತಹ ಅಪರಾಧ ಕೃತ್ಯಗಳಿಂದ ಸಂತ್ರಸ್ತರಾದವರಿಗೆ ಪರಿಹಾರ ನೀಡಲು ನ್ಯಾಯಾಲಯಗಳಿಗೆ ಅವಕಾಶ ಇರಲಿದೆ.

ಈ ಮಸೂದೆಯು ಈಗಾಗಲೇ ಜಾರಿಯಲ್ಲಿರುವ ಕೇಂದ್ರದ ಕೆಲವು ಕಾನೂನುಗಳಿಗಿಂತ ಹೆಚ್ಚು ವ್ಯಾಪ್ತಿಯನ್ನು ಹೊಂದಿರಲಿದೆ. ದ್ವೇಷ ಹರಡುವ ಅಪರಾಧವನ್ನು ಈ ಹಿಂದಿನ ಭಾರತೀಯ ದಂಡ ಸಂಹಿತೆಯು ಗುರುತಿಸಿದ್ದ ಬಗೆಯಲ್ಲೇ ಭಾರತೀಯ ನ್ಯಾಯ ಸಂಹಿತೆಯ (ಬಿಎನ್ ಎಸ್) ಕೆಲವು ಸೆಕ್ಷನ್‌ಗಳೂ ಗುರುತಿಸಿವೆ. ಆದರೆ, ಅದನ್ನೊಂದು ಪ್ರತ್ಯೇಕ ಅಪರಾಧವನ್ನಾಗಿ ವ್ಯಾಖ್ಯಾನಿಸುವ ಕೆಲಸವನ್ನು ಬಿಎನ್‌ಎಸ್ ಮಾಡಿಲ್ಲ, ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಮಸೂದೆಯು ಆ ಕೆಲಸ ಮಾಡಿದೆ. ದಂಡದ ಮೊತ್ತವನ್ನು ಹೆಚ್ಚಿಸಿದೆ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿದೆ. ಮುಖ್ಯವಾಗಿ, ಈ ಮಸೂದೆಯು ಡಿಜಿಟಲ್ ಮಧ್ಯವರ್ತಿಗಳನ್ನು ನಿಯಂತ್ರಣಕ್ಕೆ ಒಳಪಡಿಸುತ್ತದೆ. ನಿಯೋಜಿತ ಅಧಿಕಾರಿಗೆ ಆನ್‌ಲೈನ್ ವಿಷಯ ವಸ್ತುವನ್ನು ತೆಗೆಯಲು ಅಥವಾ ತಡೆಹಿಡಿಯಲು ಅಧಿಕಾರ ನೀಡುತ್ತದೆ. ಈ ಬಗೆಯ ಅವಕಾಶವು ಬಿಎನ್‌ಎಸ್‌ನಲ್ಲಿ ಇಲ್ಲ. ಆದರೆ, ಈ ವಿಶೇಷ ಅಧಿಕಾರವೇ ಮಸೂದೆಯು ದುರ್ಬಳಕೆ ಆಗಬಹುದು ಎಂಬ ಕಳವಳಕ್ಕೆ ಕಾರಣವಾಗಿದೆ. ಮಸೂದೆಯು ನೀಡಿರುವ ವ್ಯಾಖ್ಯಾನವು 'ವೈರತ್ವ' ಅಥವಾ ಗಾಸಿಗೊಳಿಸುವುದು ಎಂಬ ಪದಗಳನ್ನು ಆಧರಿಸಿದೆ. ಈ ಪದಗಳನ್ನು ವಿಶಾಲ ಅರ್ಥದಲ್ಲಿ ವ್ಯಾಖ್ಯಾನಿಸಬಹುದು. ಅತ್ಯುತ್ಸಾಹದಲ್ಲಿ ಇರುವ, ಪಕ್ಷಪಾತಿಯಾದ ಆಡಳಿತ ವ್ಯವಸ್ಥೆಯೊಂದರ ಕೈಗೆ ಇಂತಹ ಪದಗಳನ್ನು ವ್ಯಾಖ್ಯಾನಿಸುವ ಅಧಿಕಾರ ದೊರೆತಾಗ ಅದು ತನ್ನ ಟೀಕಾಕಾರರ, ಪತ್ರಕರ್ತರ ಅಥವಾ ರಾಜಕೀಯ ವಿರೋಧಿಗಳ ದನಿ ಅಡಗಿಸಲು ಬಳಸಬಹುದು. ಈ ಅಪರಾಧಗಳನ್ನು ಜಾಮೀನುರಹಿತ ಎಂದು ಗುರುತಿಸಿರುವ ಪರಿಣಾಮವಾಗಿ,ಆರೋಪಿಯ ಸ್ಥಾನದಲ್ಲಿರುವ ವ್ಯಕ್ತಿಗೆ ವಿಚಾರಣೆಗೆ ಮೊದಲೇ ಒಂದಿಷ್ಟು ಶಿಕ್ಷೆ ಆಗುವಂತೆ ಮಾಡಿಬಿಡಬಹುದು.

ಕಾನೂನಿನ ಪ್ರಕ್ರಿಯೆಯೇ ಒಂದು ಶಿಕ್ಷೆಯಂತೆ ಆಗಬಹುದು ಎಂಬುದನ್ನು ಇದುವರೆಗಿನ ಹಲವು ಅನುಭವಗಳು ಹೇಳುತ್ತಿವೆ. ಕೇದಾರನಾಥ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಒಂದು ತತ್ತ್ವವನ್ನು ಹೇಳಿದೆ: ಅಭಿವ್ಯಕ್ತಿಯು ಹಿಂಸೆಗೆ ಪ್ರಚೋದನೆ ನೀಡುವಂತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ತಕ್ಷಣದ ಅಪಾಯ ತಂದೊಡ್ಡುವಂತೆ ಇದ್ದರೆ ಮಾತ್ರ ಅಭಿವ್ಯಕ್ತಿಗೆ ನಿರ್ಬಂಧಗಳನ್ನು ಹೇರಬಹುದು; ಯಾರಿಗೋ ಕಸಿವಿಸಿ ಉಂಟುಮಾಡುತ್ತದೆ. ಯಾರದೋ ಅತೃಪ್ತಿಗೆ ಕಾರಣವಾಗುತ್ತದೆ ಎಂಬ ಕಾರಣ ನೀಡಿ ಅಭಿವ್ಯಕ್ತಿಗೆ ನಿರ್ಬಂಧ ವಿಧಿಸಲಾಗದು ಎಂದು ಕೋರ್ಟ್ ಹೇಳಿದೆ. ಸರ್ಕಾರಗಳು ದ್ವೇಷ ಭಾಷಣವನ್ನು ತಡೆಯುವ ಉದ್ದೇಶದಿಂದ ತರುವ ಯಾವುದೇ ಕಾನೂನು ಈ ನಿಯಮಕ್ಕೆ ಅನುಗುಣವಾಗಿ ಇರಬೇಕಾಗುತ್ತದೆ. ದ್ವೇಷ ಭಾಷಣದ ಅಪಾಯಗಳನ್ನು ತಡೆಯಲು ಕಾನೂನು ರೂಪಿಸಿದ ಸರ್ಕಾರದ ಕ್ರಮ ಸರಿಯಾಗಿಯೇ ಇದೆ.

> **ಸಾರ್ವಜನಿಕ ವೇದಿಕೆಗಳ ಮೂಲಕ ಆಡುವ ಹಲವು ಮಾತುಗಳಲ್ಲಿ ದ್ವೇಷಭಾವನೆ. ಪೂರ್ವಗ್ರಹಗಳು ತುಂಬಿರುವ ಕಾಲಘಟ್ಟದಲ್ಲಿ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ ಪ್ರತಿಬಂಧಕ ಮಸೂದೆ 2025ನ್ನು ಜಾರಿಗೆ ತರುವ ರಾಜ್ಯ ಸರ್ಕಾರದ ನಿರ್ಧಾರ ಬಹು ದಿಟ್ಟವಾದ ನಡೆ. ಹಾಗೆಯೇ ವಿವಾದಾತ್ಮಕ ಆದುದೂ ಹೌದು. ಆಧುನಿಕ ಕಾಲಘಟ್ಟದ ದ್ವೇಷ ಭಾಷಣಗಳನ್ನು, ಅದರಲ್ಲೂ ಮುಖ್ಯವಾಗಿ ಆನ್‌ಲೈನ್ ವೇದಿಕೆಗಳ ಮೂಲಕ ಆಡುವ ನಂಜಿನ ಮಾತುಗಳನ್ನು ತಡೆಯಲು ಈಗಿರುವ ಕಾನೂನು ಅಸ್ತ್ರಗಳು ಸಾಕಾಗುತ್ತಿಲ್ಲ ಎಂದು ರಾಜ್ಯ ಸರ್ಕಾರಗಳು ಹೇಳುತ್ತಿವೆ.**

# ಮುಧೋಳ ಕಲ್ಯಾಣ ಚಾಲುಕ್ಯ ತ್ರಿಲಿಂಗ ಬಸವೇಶ್ವರನ ಜಾತ್ರೆ


**ವಿಶೇಷ ವರದಿ ಹುಸೇನ್ ಮೊತೇಖಾನ್**




**ಯಲಬುರ್ಗಾ:** ಕಲ್ಯಾಣ ಚಾಲುಕ್ಯ ತ್ರೈಲೋಕ್ಯ ಮಲ್ಲನ ಐದನೆಯ ವರ್ಷದ ಭಾವ ಸಂವತ್ಸರದ ಸೋಮವಾರ ಉತ್ತರಾಯಣ ಸಂಕ್ರಾಂತಿ ವೃತ್ತಿಪಾತ 871 ವರ್ಷಗಳ ಇತಿಹಾಸ ಹೊಂದಿರುವ (ಪೂರ್ೈಸಿದೆ ) ಅಂದರೆ ಕ್ರಿ.ಶ. 25-12-1154 ರಲ್ಲಿ ನಿರ್ಮಿಸಲಾಗಿದೆ ಎಂದು ಶೀಲಾ ಶಾಸನಗಳ ಮೂಲಕ ತಿಳಿದು ಬಂದಿದೆ. ಇಲ್ಲಿರುವ ಆದಿ ದೇವರಾದ ಶ್ರೀ ತ್ರಿಲಿಂಗ ಬಸವೇಶ್ವರ ಹೆಸರೇ ಸೂಚಿಸುವಂತೆ ಈ ದೇವಸ್ಥಾನದಲ್ಲಿ ನಂದಿಯ ಎದುರಿಗೆ ಒಂದು ಶಿವಲಿಂಗ ಮತ್ತು ಎಡ-ಬಲ ಪಾರ್ಶ್ವಗಳಲ್ಲಿ ಒಂದೊಂದು ಲಿಂಗಗಳು ಒಟ್ಟು ಮೂರು ಶಿವ ಲಿಂಗಗಳಿವೆ. ಈ ರೀತಿ ಲಿಂಗಗಳಿರುವ ದೇವಸ್ಥಾನಗಳನ್ನು ತ್ರಿಕುಟಾಚಲ ಎಂದು ಇತಿಹಾಸದ ತಜ್ಞರು ಅಭಿಪ್ರಾಯಪಡುತ್ತಾರೆ.

ತಾಲ್ಲೂಕ ಕೇಂದ್ರ ದಿಂದ ಕೇವಲ ಏಳು ಕಿ.ಮೀ ಅಂತರದಲ್ಲಿರುವ ಮುಧೋಳ ಗ್ರಾಮದಲ್ಲಿ ವಿವಿಧ ರೀತಿಯ ದೇವಾಲಯಗಳ, ಶೀಲಾ ಶಾಸನ ಹಾಗೂ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿರುವ. ಪ್ರಾಚೀನ ಕಾಲದಲ್ಲಿ ಅನೇಕ ವಿದ್ಯಾಕೇಂದ್ರಗಳನ್ನು ಹೊಂದಿದ್ದ ಅಗ್ರಹಾರ ಎಂದೇ ಕರೆಸಿಕೊಂಡಿದ್ದ, ಈ ಮುಧೋಳ ಗ್ರಾಮವು ಈಗ ತಿರುಳನ್ನಡ ನಾಡಿನ ಹೃದಯ ಭಾಗದಂತಿರುವ ಹಿಂದೆ ಮುದುವೊಳಲು ಎಂಬ ಗ್ರಾಮ ಈಗ ಮುಧೋಳ ಗ್ರಾಮ ಎಂದು ಸುದೀರ್ಘ ಇತಿಹಾಸವನ್ನು ಹೊಂದಿದೆ.

ಈ ಗ್ರಾಮದ ಹಿಂದೆ ಒಂದು ಮಹಾ ಅಗ್ರಹಾರವಾಗಿತ್ತು, ಐದು ನೂರು ಜನ ವ್ಯಾಪಾರಸ್ಥರು ಐಯ್ಯಾವೊಳೆ ಐನೂರ ಗವರೇಶವರ ದೇವಾಲಯ ಎಂದರೆ ಇಂದಿನ ಕಾಲದಲ್ಲಿ ಶ್ರೀ ತ್ರಿಲಿಂಗ ಬಸವೇಶ್ವರ ದೇವಾಲಯ ಎಂದರ್ಥ ಈ ದೇವಾಲಯವನ್ನು ನಿರ್ಮಿಸಿದರು. ಪ್ರತಿಯೊಂದು ಶಿವಲಿಂಗ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ, ಅಂತರಾಳದಲ್ಲಿ ನಂದಿ ಇದ್ದು ನಂದಿಯ ಸುತ್ತಲೂ ಪ್ರದಕ್ಷಿಣಾ ಪತನವಿದೆ, ಹೀಗೆ ಈ ಗ್ರಾಮದ ವಿಶಿಷ್ಟ ದೇವಸ್ಥಾನದ ತೇರು ಕೂಡ ವಿನೂತನ ಮಾದರಿಯಾಗಿದೆ ಈ ತೇರು ಒಟ್ಟು 94 ವರ್ಷಗಳ ಕಾಲ ಪೂರೈಸಿದೆ, ಈ ತೇರನ್ನು ಕಂಚಿನ ಬಟ್ಟಲ ತೇರು ಎನ್ನುತ್ತಾರೆ. ಸಣ್ಣ ಪುಟ್ಟ ಉತ್ಸವಗಳಲ್ಲಿ ಎಳೆಯಲಾಗದ ಈ ಉಚ್ಚಯ ಮಾದರಿ ತೇರಿ ನಂತಿದೆ. ಈ ತೇರು ಕ್ರಿ, ಶ, 11-12-1930 ಮತ್ತು 95 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಬಗ್ಗೆ ಕಳಸದಲ್ಲಿ ನಮೂದಿಸಿರುವ ದಿನಾಂಕದಿಂದ ತಿಳಿದು ಬಂದಿರುತ್ತದೆ. ಸರಿ ಸುಮಾರು ಈ ತೇರು ಇರುವ ಎತ್ತರ 25 ಅಡಿ ಎತ್ತರವಾಗಿದ್ದು, ಈ ತೇರು ಸೂಕ್ಷ್ಮ ಕಲಾತ್ಮಕ ಕೆತ್ತನೆಯಿಂದ ಕೂಡಿದ್ದು ಬೃಹದಾಕಾರ ವಾಗಿರುವ ನಾಲ್ಕು ಕಲ್ಲಿನ ಚಕ್ರಗಳ ಮೇಲೆ ಚಲಿಸುತ್ತದೆ.





ಈ ಮುಧೋಳ ಗ್ರಾಮದ ಜಾತ್ರೆ ಪ್ರತಿ ವರ್ಷವೂ ಕಾರ್ತಿಕ ಮಾಸದ ಮೊದಲನೇ ಸೋಮವಾರದಿಂದ ಆರಂಭಗೊಂಡು 7ನೇ ಸೋಮವಾರದಂದು ಶ್ರೀ ತ್ರಿಲಿಂಗ ಬಸವೇಶ್ವರ ಕಾರ್ತಿಕೋತ್ಸವ ಮತ್ತು ಮರುದಿನ ಮಂಗಳವಾರ ಸಂಜೆ ಮಾರ್ಗಶಿರ ಮಾಸದ ಹೊಸ್ತಿಲ ಹುಣ್ಣಿಮೆಯ ಒಂದೆರಡು ದಿನಗಳ ಹಂತರದಲ್ಲಿ ಈ ರಥೋತ್ಸವ ಸಾವಿರಾರು ಜನಗಳ ಮದ್ದೆ ರಥೋತ್ಸವ ನೆರವೇರುತ್ತದೆ.

> **ಯಲಬುರ್ಗಾ ತಾಲ್ಲೂಕಿನ ಮುಧೋಳ ದಲ್ಲಿರುವ ಐತಿಹಾಸಿಕ ಶ್ರೀ ತ್ರಿಲಿಂಗ ಬಸವೇಶ್ವರ ದೇವಸ್ಥಾನದ ಬೆಳ್ಳಿ ಕಳಸದ ಮಹಾ ರಥೋತ್ಸವ ನಾಳೆ ಮಂಗಳವಾರ ಸಂಜೆ ಜರುಗಲಿದೆ. -ವಿಶೇಷ ವರದಿ : ಹುಸೇನ್ ಮೊತೇಖಾನ್**

ಮುಧೋಳ ಗ್ರಾಮವು ಐತಿಹಾಸಿಕ ಶಿಲ್ಪಕಲೆಗಳ ನಾಡು. ಈ ಗ್ರಾಮದಲ್ಲಿರುವ ತ್ರಿಲಿಂಗೇಶ್ವರ ದೇಗುಲವು ಐತಿಹಾಸಿಕ, ಪುರಾತನ ಪುಣ್ಯ ಕ್ಷೇತ್ರ ತಾಣವಾಗಿದೆ, ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಈ ಮುಧೋಳ ಗ್ರಾಮವನ್ನ ವೈರಿಗಳು ಮುತ್ತಿಗೆ ಹಾಕಿದಾಗ ಮ್ಯಾದಾರ ಚಂದ ಊರಿನ ರಕ್ಷಣೆಗಾಗಿ ಹೋರಾಡಿ ಪ್ರಾಣ ತೆತ್ತನು. ಅಂತಹ ಭವ್ಯ ಇತಿಹಾಸ ಹೊಂದಿದೆ. ಇಲ್ಲಿಯ ತ್ರೀಲಿಂಗ ಬಸವೇಶ್ವರ ದೇವಸ್ಥಾನವು ಕಲ್ಯಾಣಿ ಚಾಲುಕ್ಯರ ಶೈಲಿಯ ಪುರಾತನ ದೇಗುಲವು ಅತ್ಯಾಕರ್ಷಣೆಯಿಂದ ಕೂಡಿದೆ. ಗ್ರಾಮದಲ್ಲಿರುವ ಮಲ್ಲಿಕಾರ್ಜುನ ದೇವಾಲಯ, ಕಾಡಸಿದ್ಧೇಶ್ವರ ದೇಗುಲದ ಶಿಲ್ಪಕಲೆಗಳು ಇಂದಿಗೂ ತನ್ನ ಇತಿಹಾಸವನ್ನು ಸಾರುತ್ತಿವೆ.

ಪ್ರಸಕ್ತ ವರ್ಷ 28-11-2025 ಶುಕ್ರವಾರದಿಂದ ದ್ಯಾಂಪೂರ ಶ್ರೀ ಕಲ್ಲಿನಾಥ ಕವಿಗಳ ವಿರಚಿತ-11 ದಿನಗಳ ಇಟಗಿ ಶ್ರೀ ಭೀಮಾಶಂಕರಿ ಪುರಾಣವು ಪ್ರಾರಂಭಗೊಂಡು ದಿನಾಂಕ : 08-12-2025 ಸೋಮವಾರದಂದು ಮಹಾಮಂಗಲಗೊಳ್ಳುವುದು. ಹಾಗೂ ಡಿ. 08 ರಂದು ಕಾರ್ತಿಕೋತ್ಸವ, ಡಿ. 09 ರಂದು ಸಾಯಂಕಾಲ 5-00 ಘಂಟೆಗೆ ನಂದಿಕೋಲ ಪಲ್ಲಕ್ಕಿ ಹಾಗೂ ಸಕಲ ವಾದ್ಯವೃಂದಗಳೊಂದಿಗೆ ಬೆಳ್ಳಿ ಕಳಸದ ಮಹಾ ರಥೋತ್ಸವ ಅದ್ದೂರಿಯಿಂದ ಜರುಗುವುದು. ಮುಧೋಳ ಗ್ರಾಮದ ಹಾಗೂ ಸುತ್ತ ಮುತ್ತಲಿನ ಗ್ರಾಮಗಳ ಸಕಲ ಸದ್ಭಕ್ತರು ಆಗಮಿಸಿ, ತನು, ಮನ, ಧನದಿಂದ ಸೇವೆ ಸಲ್ಲಿಸಿ ಶ್ರೀ ತ್ರಿಲಿಂಗಬಸವೇಶ್ವರ ಕೃಪೆಗೆ ಪಾತ್ರ ರಾಗಬೇಕಾಗಿ ವಿನಂತಿಸಿದರು. ಸಂಪ್ರದಾಯದಂತೆ ಭಕ್ತಿ ಭಾವ ಹರ್ಷದೊಂದಿಗೆ ನೆರವೇರುವುದು. ಈ ಜಾತ್ರೆಯಲ್ಲಿ ಮಕ್ಕಳು ಪರಂಪರೆ ಪಾಲನೆಯೊಂದಿಗೆ ಜಾತ್ರೆಯ ಮನರಂಜನೆಯನ್ನು ಸವಿಯಲು ಸಡಗರ ಸಂಭ್ರಮದಿಂದ ಭಾಗವಹಿಸುವ ಹೆಂಗೆಳೆಯರ ಭಕ್ತಿಭಾವ ಹರ್ಷದೊಂದಿಗೆ ಮರೆಯದ ಅಜ್ಜ-ಅಜ್ಜಿಯರು ಕೂಡ ಪಾಲ್ಗೊಳ್ಳುವ ಜಾತ್ರೆ ಇದು ಒಟ್ಟಾರೆ ಹಬ್ಬದ ವಾತಾವರಣದಂತೆ ಕಾಣುವ ಈ ಐತಿಹಾಸಿಕ ತಾಣದಲ್ಲಿ ಭಕ್ತರ ಸಮೂಹವೇ ಸಂಭ್ರಮಾಚರಣೆಯ ಮೂಲಕ ಜಾತ್ರೆ ಮಾಡುತ್ತಾರೆ.

# ರಾತ್ರಿ ಪದೇ ಪದೆ ಎಚ್ಚರವಾಗುತ್ತಾ?

## ಉತ್ತಮ, ಶಾಂತಿಯುತ ನಿದ್ದೆಗಾಗಿ ಈ ಮಂತ್ರ ಪಠಿಸಿ



ಇತ್ತೀಚಿನ ದಿನಗಳಲ್ಲಿ ಇಂದಿನ ವೇಗದ ಜೀವನದಲ್ಲಿ ಹೆಚ್ಚಿನ ಜನರು ನಿದ್ರಾಹೀನತೆಯ ಸಮಸ್ಯೆಯನ್ನ ಎದುರಿಸುತ್ತಾರೆ. ಕೆಲವರಿಗೆ ಇಷ್ಟವಿದ್ದರೂ ನೆಮ್ಮದಿಯ ನಿದ್ದೆ ಬರುವುದಿಲ್ಲ. ಇದರಿಂದಾಗಿ ಅವರು ಪ್ರತಿದಿನ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಉತ್ತಮ ಆರೋಗ್ಯಕ್ಕೆ ಸಾಕಷ್ಟು ನಿದ್ದೆ ಮಾಡುವುದು ಕೂಡ ಬಹಳ ಮುಖ್ಯ ಇಂತಹ ಅನೇಕ ಪವಾಡ ಮಂತ್ರಗಳನ್ನ ಧಾರ್ಮಿಕ ಗ್ರಂಥಗಳು ಮತ್ತು ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ, ಇವುಗಳನ್ನು ಮಲಗುವ ಮೊದಲು ಪಠಿಸಿದರೆ, ಶಾಂತಿಯುತ ನಿದ್ರೆಯನ್ನ ನೀಡುತ್ತದೆ, ಒಳ್ಳೆಯ ಕನಸುಗಳು ಒತ್ತಡವನ್ನ ನಿವಾರಿಸುತ್ತವೆ.

**ಮಂತ್ರ-1:** ದೇವಿ ಸರ್ವಭೂತೇಷು ನಿದ್ರಾ ರೂಪೇಣ ಸಂಸ್ಕೃತ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ಪ್ರಯಾಣ ಅರ್ಥ - ಮೂರು ಬಾರಿ ಎಲ್ಲಾ ಜೀವಿಗಳಲ್ಲಿ ವಿಶ್ರಾಂತಿ ಮತ್ತು ನಿದ್ರೆಯ ರೂಪ ದಲ್ಲಿ ನೆಲೆಸಿರುವ ದೇವಿಗೆ ನಮಸ್ಕಾರಗಳು.

**ಮಂತ್ರ-2:** ಅಗಸ್ತೀರ್ಮಾಧವಶ್ಯವ ಮುಚುಕುಂದೋ ಮಹಾಬಲ: ಕಪಿಲೋ ಮುನಿರಾಸ್ತಿಕ: ಪಂಚೈತೇ ಸುಖಾಯಿಂ:' ಅರ್ಥ- ಋಷಿಗಳು ಆಗಸ, ಮುಚು ಕುಂದ, ಕಪಿಲ ಮುನಿ ಸೇರಿದಂತೆ ಪ್ರಯಾಣ ಪಂಚ ಭೋಗಗಳಿಂದ ಮಲಗುವ ರೀತಿ, ಹಾಗೆಯೇ ನಾನು ಕೂಡ ನಿದ್ರೆಯ ಸಮಯದಲ್ಲಿ ಶಾಂತಿಯನ್ನು ಅನುಭವಿಸಬೇಕು.

**ಮಂತ್ರ-3:** ರಾಮಂ ಸ್ಕಂದಂ ಹನುಮಂತಂ ವನ ತೇಯಂ ವೃಕೋದರಂ - ಆಟೋಜೋನ್ ಶಯನೇ ಯಃ ಸ್ಮರೇನ್ನಿತ್ಯಂ ದುಸ್ವಪ್ನಸ್ತಸ್ಯ ನಶ್ಯತಿ ಮನೋರಂಜನೆ ಅರ್ಥ- ಮಲಗಿರುವಾಗ ಶ್ರೀರಾಮ, ಕಾರ್ತಿಕೇಯ, ಹನುಮಂತ, ಗರುಡ, ಭೀಮರನ್ನು ಸ್ಮರಿಸಿದರೆ ಕೆಟ್ಟ ಕನಸುಗಳು ನಾಶವಾಗುತ್ತವೆ.

**ಮಂತ್ರ-4:** ನಿದ್ರಾಂ ಭಗವತಿ ವಿಷ್ಣೋ, ಅತುಲ್ ತೇಜಸ್: ಪ್ರಭೋ: ನಮಾಮಿ. ಅರ್ಥ-ಆಳವಾದ ನಿದ್ರೆಗೆ ಹೋಗಲು ಮಂತ್ರವನ್ನು ಪಠಿಸಲಾಗುತ್ತದೆ. **- ಆಟೋಜೋನ್ ಮಂತ್ರಗಳನ್ನು ಪಠಿಸುವ ಪ್ರಯೋಜನಗಳು:** ನಂಬಿಕೆಗಳ ಪ್ರಕಾರ, ನೀವು ಹಾಸಿಗೆಯ ಮೇಲೆ ಮಲಗಿದಾಗ, ಶಾಂತ ಮನಸ್ಸಿನಿಂದ ಈ ಮಂತ್ರಗಳಲ್ಲಿ ಯಾವುದಾದರೂ ಒಂದನ್ನು ಜಪಿಸಿ. ಮಂತ್ರಗಳ ಪ್ರಭಾವದಿಂದಾಗಿ, ಒಬ್ಬ ವ್ಯಕ್ತಿಯು ಮನಸ್ಸಿನಲ್ಲಿ ಶಾಂತಿಯನ್ನ ಅನುಭವಿಸುತ್ತಾನೆ ಮತ್ತು ಒತ್ತಡವೂ ದೂರ ಹೋಗುತ್ತದೆ.

ಈ ಮಂತ್ರದ ಸಕಾರಾತ್ಮಕ ಪರಿಣಾಮವು ಶಾಂತಿಯುತ ನಿದ್ರೆಗೆ ಕಾರಣವಾಗುತ್ತದೆ ಮತ್ತು ದುಃಸ್ವಪ್ನಗಳನ್ನು ತಡೆಯುತ್ತದೆ. ಇದರೊಂದಿಗೆ, ಮರುದಿನ ಬೆಳಿಗ್ಗೆ ನೀವು ಉಲ್ಲಾಸವನ್ನು ಅನುಭವಿಸುವಿರಿ ಮತ್ತು ನಿಮ್ಮ ನಿದ್ರೆಗೆ ಯಾವುದೇ ಅಡ್ಡಿಯಾಗುವುದಿಲ್ಲ.

# ಮಸಾಲೆ ರುಬ್ಬದೆ ಮಾಡಿ ಬೀಟ್ರೂಟ್ ಬಿರಿಯಾನಿ; 10 ನಿಮಿಷ ಸಾಕು!



### ಬೀಟ್ರೂಟ್ ಬಿರಿಯಾನಿ ಮಾಡಲು ಯಾವೆಲ್ಲಾ ವಸ್ತುಗಳು ಬೇಕು?

- ಬೀಟ್ರೂಟ್
- ಅಕ್ಕಿ (15 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿಡಬೇಕು)
- ಮೊಸರು
- ಟೊಮೆಟೊ
- ಖಾರದ ಪುಡಿ
- ಶುಂಠಿ ಬೆಳ್ಳುಳ್ಳಿ ಪೇಸ್ಟ್
- ಹಸಿ ಮೆಣಸಿನಕಾಯಿ
- ಪುದೀನ
- ಕೊತ್ತಂಬರಿ ಸೊಪ್ಪು
- ಈರುಳ್ಳಿ ಲವಂಗ
- ಪಲಾವ್ ಎಲೆ
- ದಾಲ್ಚಿನ್ನಿ
- ಏಲಕ್ಕಿ
- ಕಲ್ಲು ಮೊಗ್ಗು
- ಬಿರಿಯಾನಿ ಪುಡಿ
- ತುಪ್ಪ
- ಅಡುಗೆ ಎಣ್ಣೆ

ನೀವು ಊಟಕ್ಕೆ ಬಹಳ ರುಚಿ ರುಚಿಯಾದ ಹಲವು ರೀತಿ ಖಾದ್ಯಗಳ ಮಾಡುತ್ತೀರಿ. ನಾನ್ ವೆಜ್ ಪ್ರಿಯರು ಒಂದಿಷ್ಟು ಖಾದ್ಯಗಳ ಮಾಡಿದ್ರೆ, ವೆಜ್ ಪ್ರಿಯರು ಸಹ ರುಚಿ ರುಚಿಯಾದ ಖಾದ್ಯಗಳ ಮಾಡಿ ಸವಿಯೋದು ನೋಡಬಹುದು. ಹಾಗೆ ವೆಜ್ ಖಾದ್ಯಗಳ ಪಟ್ಟಿಯಲ್ಲಿ ವೆಜ್ ಬಿರಿಯಾನಿ ಅಂದ್ರೆ, ಎಲ್ಲರಿಗೂ ಇಷ್ಟವಾಗುತ್ತೆ. ಬಿರಿಯಾನಿಯ ಹೆಸರು ಕೇಳಿದ್ರೆ ನಿಮ್ಮ ಬಾಯಲ್ಲಿ ನೀರು ಬರಬಹುದು. ಇನ್ನು ವೆಜ್ ಬಿರಿಯಾನಿಯಲ್ಲಿ ಹಲವು ಬಗೆಗಳಿವೆ. ಒಂದೊಂದು ಬಗೆಯು ಒಂದೊಂದು ರೀತಿಯ ರುಚಿ ಹೊಂದಿರಲಿದೆ. ಹಾಗೆ ಈ ರುಚಿಯ ಖಾದ್ಯಗಳನ್ನು ಮನೆಯಲ್ಲಿ ಮಾಡಿ ಸವಿಯೋದು ಅಂದ್ರೆ ಎಲ್ಲಾರು ಇಷ್ಟಪಡುತ್ತಾರೆ. ಆದ್ರೆ ವೆಜ್ ಬಿರಿಯಾನಿಯಲ್ಲಿ ಹಲವು ಬಗೆ ಇದ್ದರೂ ನಾವಿಂದು ಹೊಸ ರೀತಿಯ ವೆಜ್ ಬಿರಿಯಾನಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ.

ಅದ್ರಲ್ಲೂ ವೆಜ್ ಬಿರಿಯಾನಿಯಲ್ಲಿ ಬೀಟ್ರೂಟ್ ಬಳಸಿ ಮಾಡುವಂತಹ ಈ ಬಿರಿಯಾನಿ ರುಚಿಯಲ್ಲಿ ಮಾತ್ರವಲ್ಲ ಮಾಡೋದು ಕೂಡ ಬಹಳ ಸುಲಭ. ಈ ರುಚಿ ಒಮ್ಮೆ ನೀವು ಸವಿದರೆ ಪದೇ ಪದೇ ಮಾಡಿ ಸವಿಯೋದು ಖಚಿತ. ಹಾಗೆ ಈ ಬೀಟ್ರೂಟ್ ರುಚಿಯ ಬಿರಿಯಾನಿ ಮನೆಯಲ್ಲಿ ಎಲ್ಲಾರು ಇಷ್ಟಪಡುವ ಬಿರಿಯಾನಿ ಆಗೋದು ಖಚಿತ. ಹಾಗಾದ್ರೆ ಈ ಬೀಟ್ರೂಟ್ ಬಿರಿಯಾನಿ ಮಾಡುವುದು ಹೇಗೆ? ಮಾಡಲು ಎಷ್ಟು ಸಮಯಬೇಕು? ಯಾವೆಲ್ಲಾ ವಸ್ತುಗಳು ಬೇಕಾಗುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳೋಣ.

**ಉಪ್ಪು ಬೀಟ್ರೂಟ್ ಬಿರಿಯಾನಿ ಮಾಡುವ ವಿಧಾನವೇನು?:** ಮೊದಲು ಒಲೆ ಮೇಲೆ ಕುಕ್ಕರ್ ಇಟ್ಟು ಅದಕ್ಕೆ ತುಪ್ಪ ಮತ್ತು ಎಣ್ಣೆ ಎರಡನ್ನೂ ಹಾಕಿಕೊಂಡು ಬಿಸಿ ಮಾಡಿ. ನಂತರ ಇದಕ್ಕೆ ಚಕ್ಕೆ ಲವಂಗ, ಪಲಾವ್ ಎಲೆ, ಕಲ್ಲುಹೂವು, ಹಾಗೆ ಕತ್ತರಿಸಿಕೊಂಡ ಈರುಳ್ಳಿ ಹಾಕಿಕೊಂಡು ಫ್ರೈ ಮಾಡಿಕೊಳ್ಳಿ. 2 ನಿಮಿಷ ಫ್ರೈ ಮಾಡಿಕೊಂಡ ಬಳಿಕ ಇದಕ್ಕೆ ಹಸಿ ಮೆಣಸು, ಪುದಿನ ಹಾಗೂ ಕೊತ್ತಂಬರಿ ಸೊಪ್ಪು ಹಾಕಿಕೊಂಡು ಮಿಕ್ಸ್ ಮಾಡಿ. ನಂತರ ಶುಂಠಿ ಬೆಳ್ಳುಳ್ಳಿ ಪೇಸ್ಟ್ ಖಾರದ ಪುಡಿ, ಕತ್ತರಿಸಿಕೊಂಡಿದ್ದ ಟೊಮೆಟೋವನ್ನು ಸಹ ಹಾಕಿಕೊಂಡು, ಉಪ್ಪು ಹಾಕಿ ಫ್ರೈ ಆಗಲು ಬಿಡಿ. ಈಗ ಒಂದು ಸಣ್ಣ ಬೀಟ್ರೋಟ್ ಅನ್ನು ಸಣ್ಣದಾಗಿ ಕತ್ತರಿಸಿಕೊಂಡು ಇದಕ್ಕೆ ಹಾಕಿಕೊಳ್ಳಿ. 2 ನಿಮಿಷ ಬಿಟ್ಟು ಇದಕ್ಕೆ 2 ಸ್ಪೂನ್ ಮೊಸರು ಹಾಗೆ ಬಿರಿಯಾನಿ ಪೌಡರ್ ಸಹ ಹಾಕಿಕೊಳ್ಳಿ. ಹಾಗೆ ಮತ್ತೊಂದು ನಿಮಿಷ ಫ್ರೈ ಮಾಡಿದ ಬಳಿಕ ಈಗ ಮೊದಲು ತೊಳೆದು ನೆನೆಸಿಟ್ಟಿದ್ದ 1 ಕಪ್ ಅಕ್ಕಿಯ ಅಳತೆಯಲ್ಲಿ 2 ಕಪ್ ನೀರು ಹಾಕಿಕೊಳ್ಳಿ. ಈಗ ಕುದಿಬರಲು ಬಿಡಿ. ಕುದಿ ಬರಲು ಆರಂಭಿಸಿದಾಗ ಅಕ್ಕಿಯನ್ನು ಸಹ ಇದಕ್ಕೆ ಹಾಕಿಕೊಂಡು ಮಿಕ್ಸ್ ಮಾಡಿ ಕುದಿಬರಲು ಬಿಡಿ. ಕುದಿಯಲು ಆರಂಭಿಸಿದಾಗ ಕುಕ್ಕರ್ ಮುಚ್ಚಳ ಮುಚ್ಚಿ. ನಂತರ 2 ಸೀಟಿ ಹೊಡೆಯಲು ಬಿಡಿ. ನಂತರ ಮುಚ್ಚಳ ತೆಗೆದು ಮಿಕ್ಸ್ ಮಾಡಿಕೊಂಡರೆ ನಿಮ್ಮ ಮುಂದೆ ಬೀಟ್ರೂಟ್ ಬಿರಿಯಾನಿ ಸಿದ್ದವಾಗುತ್ತೆ. ನೀವು ಕೂಡ ಈ ರುಚಿಯ ಬಿರಿಯಾನಿ ಮಾಡಿ ನೋಡಿ.

# ರಾಮಾಯಣ



**ಶ್ರೀ ರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿದ್ದು**

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಈ ಪ್ರಕಾರದಲ್ಲಿ ರಾಮಲಕ್ಷ್ಮಣರಿಂದ ಶಾಸ್ತ್ರೋಕ್ತ ಪ್ರಕಾರವಾಗಿ ಸಂಸ್ಕರಿಸಲ್ಪಟ್ಟ ಜಟಾಯುವು ಉತ್ತಮವಾದ ಗತಿಯನ್ನು ಪಡೆದನು. ಆ ಬಳಿಕ ರಾಮಲಕ್ಷ್ಮಣರು ಸೀತಾದೇವಿಯನ್ನು ಹುಡುಕುತ್ತ ವಿಷ್ಣುವೂ ದೇವೇಂದ್ರನೂ ಸ್ವರ್ಗಲೋಕದಲ್ಲಿ ಸಂಚರಿಸುವಂತೆ ಆ ವನದಲ್ಲಿ ಸಂಚರಿಸುತ್ತಿದ್ದರು.

**ರಾಮಲಕ್ಷ್ಮಣರು ಕಬಂಧನಿಗೆ ಸಿಕ್ಕಿದ್ದು**

ಅನಂತರ ರಾಮಲಕ್ಷ್ಮಣರು ದಂಡಕಾರಣ್ಯದಿಂದ ತೆಂಕಲಾಗಿ ನಡೆದು ಮರ ಗಿಡ ಬಳ್ಳಿಗಳಿಂದಿಟ್ಟಣಿಸಿ ಸಂಚರಿಸುವುದಕ್ಕೆ ಅಸಾಧ್ಯವಾಗಿ ಭಯಂಕರವಾದ ಆ ಅರಣ್ಯವನ್ನು ದಾಟಿ ಜನಸ್ಥಾನದಿಂದ ಮುಂದೆ ಮೂರು ಹರಿದಾರಿ ನಡೆದು ನಾನಾವರ್ಣಗಳಾದ ಪುಷ್ಪಗಳುಳ್ಳ ವೃಕ್ಷಗಳಿಂದಲೂ ಮೃಗಪಕ್ಷಿಗಳಿಂದಲೂ ಇಟ್ಟಣಿಸಿದ್ದಾಗಿ ಕಾರ್ಮುಗಿಲು ಕವಿದಂತೆ ಅಂಧಕಾರವುಳ್ಳ ಕ್ರೌಂಚಾರಣ್ಯವನ್ನು ಪ್ರವೇಶಿಸಿದರು.

ಆ ವನದಲ್ಲಿ ಸೀತಾದೇವಿಯನ್ನು ಹುಡುಕಿ ಕಾಣದೆ ಅತ್ಯಂತ ದುಃಖಿತರಾಗಿ ಅಲ್ಲಿಂದ ಮುಂದೆ ಮೂರು ಹರಿದಾರಿ ನಡೆದು ಮತಂಗ ಮುನೀಶ್ವರನ ಆಶ್ರಮದ ಸಮೀಪದಲ್ಲಿ ನಾನಾ ದುಷ್ಟಮೃಗಗಳಿಂದಲೂ ಪಕ್ಷಿಗಳಿಂದಲೂ ಇಟ್ಟಣಿಸಿ ಬಹು ಘೋರವಾಗಿದ್ದ ಒಂದು ವನದಲ್ಲಿ ಪಾತಾಳಲೋಕಕ್ಕೆ ಸಮಾನವಾಗಿ ಗಾಢಾಂಧಕಾರವುಳ್ಳ ಒಂದು ಗುಹೆಯ ಸಮೀಪದಲ್ಲಿ ಆಯೋಮುಖಿಯೆಂಬ ಒಬ್ಬ ರಾಕ್ಷಸಿಯನ್ನು ಕಂಡರು. ಆ ರಾಕ್ಷಸಿಯು ಬಹಳ ದೊಡ್ಡದಾದ ಶರೀರವುಳ್ಳವಳು ವಿಕಾರವಾದ ಕಣ್ಣುಗಳುಳ್ಳವಳು ; ಕುದ್ರ ಪ್ರಾಣಿಗಳಿಗೆ ಭಯವನ್ನುಂಟುಮಾಡುವವಳು. ಪೇಯವಾದ ರೌದ್ರಸ್ವರೂಪವುಳ್ಳವಳು. ತೇಲಾಡುವ ಹೊಟ್ಟೆಯುಳ್ಳವಳು. ಮಹಾತೀಕ್ಷ್ಣವಾದ ಕೋರೆ ದಾಡೆಗಳುಳ್ಳವಳು, ಗಜಚರ್ಮದಂತೆ ಕಠಿಣವಾದ ಚರ್ಮವುಳ್ಳವಳು.

ಅವಳು ತಲೆಗೂದಲನ್ನು ಕೆದರಿ ಕೊಂಡು ಮೃಗಗಳನ್ನು ಹಿಡಿದು ತಿನ್ನುತ್ತಿದ್ದಳು. ಆ ರಾಕ್ಷಸಿಯು ರಾಮ ಲಕ್ಷ್ಮಣರು ಹೋಗುವುದನ್ನು ಕಂಡು ಮುಂದುಗಡೆಯಲ್ಲಿ ದಾರಿಯನ್ನು ಸವರಿಕೊಂಡು ಹೋಗುತ್ತಿದ್ದ ಲಕ್ಷ್ಮಣನ ಸಮೀಪಕ್ಕೆ ಬಂದು ಆತನನ್ನು ಕುರಿತು ಎಲೈ ಪುರುಷನೇ, ನಾವಿಬ್ಬರೂ ರಮಿಸಿಕೊಂಡಿರೋಣ, ಬಾ, ನಾನು ಮಾಡಿದ ಪುಣ್ಯದಿಂದ ನಿನ್ನಂಥ ಪುರುಷನನ್ನು ಪಡೆದೆನು. ನೀನು ಈ ವನಮಧ್ಯದಲ್ಲಿರುವ ಮನೋಹರವಾದ ಪರ್ವತದ ತಪ್ಪಲುಗಳಲ್ಲಿಯೂ ನದಿಗಳ ಮಳಲೊಟ್ಟುಗಳಲ್ಲಿಯೂ ನನ್ನೊಡನೆ ಕ್ರೀಡಿಸಿಕೊಂಡಿರು. ನನ್ನ ಹೆಸರು ಅಯೋಮುಖಿ ನಮ್ಮ ಆಯುಸ್ಸನ್ನು ಆನಂದದಿಂದ ಕಳೆಯೋಣ ಎಂದು ಹೇಳುತ್ತ ಲಕ್ಷ್ಮಣನನ್ನು ಹಿಡಿದುಕೊಂಡಳು.

ಆ ಮಾತನ್ನು ಕೇಳಿ ಲಕ್ಷ್ಮಣನು ಅತ್ಯಂತ ಕೋಪಯುಕ್ತನಾಗಿ ಖಡ್ಗವನ್ನು ತೆಗೆದುಕೊಂಡು ಅಯೋಮುಖಿಯ ಕಿವಿಮೂಗುಗಳನ್ನು ಕೊಯ್ದು ಹಾಕಲು ಆಕೆಯು ತಾನು ಬಂದ ದಾರಿಗೊಂಡು ಭಯಂಕರವಾದ ಧ್ವನಿಯಿಂದ ಮೊರೆಯಿಡುತ್ತ ಓಡಿಹೋದಳು. ಆಮೇಲೆ ರಾಮಲಕ್ಷ್ಮಣರು ಆ ವನದಲ್ಲಿ ಸಂಚರಿಸುತ್ತಿರುವ ಸಮಯದಲ್ಲಿ ಲಕ್ಷ್ಮಣನು ಕೈಮುಗಿದುಕೊಂಡು ತೇಜಸ್ವಿಯಾದ ಶ್ರೀರಾಮನನ್ನು ಕುರಿತು ಶ್ರೀರಾಮ್ಮ ನನ್ನ ಎಡಭುಜವು ಹಾರುತ್ತಿದೆ. **ಮುಂದುವರಿಯುವುದು...**

# ಹಾಸನ ದೇವಾಲಯಗಳ ವೈಭವಯಾನ


**ವಿಶ್ವಾಸ್.ಡಿ.ಗೌಡ**

**.........ಮುಂದುವರೆದ ಭಾಗ**



**ಅರಸೀಕೆರೆ ತಾಲ್ಲೂಕು :** ಹೊಯ್ಸಳ ವೀರಬಲ್ಲಾಳನ ಉಪರಾಜಧಾನಿಯಾಗಿದ್ದ ಈ ಊರಿನ ಈಶಾನ್ಯದಲ್ಲಿ ಸುಂದರವಾದ ಪ್ರಸಿದ್ಧ ಶಿವಾಲಯವಿದೆ. ಇದರ ಹೊರಗೋಡೆಯಲ್ಲಿ ಸಪ್ತಮಾತೃಕೆಯರು, ವಿಷ್ಣುಚತುರ್ವಿಂಶತಿ ಹಾಗೂ ಇತರ ವಿವಿಧ ದೇವತಾಮೂರ್ತಿಗಳಿವೆ.

ನವರಂಗದ ಸ್ತಂಭಗಳು, ದೇವಕೋಷ್ಠಗಳು, ಭಾವಣಿ, ತೊಲೆಗಳು, ಭುವನೇಶ್ವರಿಮುಂತಾದಲ್ಲೆಲ್ಲ ಆಕರ್ಷಕ ಕೆತ್ತನೆಗಳಿವೆ. ಗರ್ಭಗೃಹಕ್ಕೆ ಭೂಮಿಜ ಪ್ರಕಾರವನ್ನು ಹೋಲುವ ಶಿಖರವಿದೆ. ದೇವಾಲಯದ ಮುಂಬದಿಯಲ್ಲಿ ಹೊಯ್ಸಳ ವಾಸ್ತುನಿರ್ಮಾಣಗಳಲ್ಲೇ ವಿಶೇಷವೆನಿಸುವ ನಕ್ಷತ್ರಾಕಾರದ ಅಧಿಷ್ಠಾನ, ಗುಮ್ಮಟಾಕಾರದ ಬೃಹತ್ ಭಾವಣಿಗಳನ್ನು ಹೊಂದಿರುವ ಸ್ತಂಭಮಂಟಪವು ಕೂಡ ಇಲ್ಲಿನ ಮುಖ್ಯ ಆಕರ್ಷಣೆಯಾಗಿದೆ. ಈ ಶಿವಾಲಯಕ್ಕೆ ಅಂಟಿದಂತೆ ಎರಡು ಗರ್ಭಗೃಹಗಳುಳ್ಳ ಇನ್ನೊಂದು ಶಿವಾಲಯವಿದೆ.ಊರಿನ ಸಂತೆಪೇಟೆಯಲ್ಲಿ ಸುಂದರ ಶಿಲ್ಪಾಲಂಕಾರಗಳುಳ್ಳ ಹೊಯ್ಸಳ ದಂಡನಾಯಕ ರೇಚಿಮಯ್ಯನ ಸಹಸ್ರಕೂಟ ಜಿನಾಲಯವಿದೆ.




ಇವಲ್ಲದೆ ಈ ಊರಿನಲ್ಲಿ ಅನೇಕ ದೇವಾಲಯಗಳು ನಾಶವಾಗಿದ್ದು ಈಗ ಮಳೆಮಲ್ಲೇಶ್ವರ, ವೀರಬಲ್ಲಾಳೇಶ್ವರ, ಬಸವೇಶ್ವರ ಮುಂತಾದ ದೇವಾಲಯಗಳು ಉಳಿದಿವೆ.

ಈ ಊರಿನಲ್ಲಿ ಇಲ್ಲಿ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮದ ಸಮಾಧಿ ಹಾಗೂ ಆಶ್ರಮ ಇವೆ. ಸಮೀಪದಲ್ಲಿ ಯಾದಾಪುರದಲ್ಲಿ ಜೇನುಕಲ್ಲು ಸಿದ್ಧೇಶ್ವರ ಕೇತ್ರವು ಪ್ರಸಿದ್ಧ ಯಾತ್ರಾಸ್ಥಳವೇ ಆಗಿದೆ.

**ಚಿಕ್ಕ ತಿರುಪತಿ :** ಅರಸೀಕೆರೆಗೆ 5 ಕಿ.ಮೀ ದೂರದಲ್ಲಿ ಇರುವ ಗಿರಿಕೇತ್ರ, ಹಾಗೂ ವಿಜಯನಗರ ನಾಯಕರ ಕಾಲದಲ್ಲಿ ತಿರುಪತಿಯಂತೆ ಇಲ್ಲೂ ಬೆಟ್ಟದ ಮೇಲೆ ಹಾಗೂ ಬುಡದಲ್ಲಿ ದೇವಾಲಯಗಳು, ಪುಷ್ಕರಿಣಿ ಮುಂತಾದವು ಇವೆ. ನಿರ್ಮಿಸಲಾಗಿದೆ. ಶಾಸನಗಳಲ್ಲಿ 'ಅಮರಗಿರಿ ತಿರುಪತಿ' ಎಂದೂ ಕರೆಯಲ್ಪಟ್ಟಿದೆ. ಕೆಳ ದೇವಾಲಯದ ವೆಂಕಟರಮಣ ಸ್ವಾಮಿಯು ಹೆಚ್ಚುಪ್ರಸಿದ್ಧವಾಗಿದೆ.ಬೆಟ್ಟವು ಉನ್ನತವಾಗಿದ್ದು, ಮೇಲಿನ ತನಕ ಮೆಟ್ಟಿಲುಗಳಿವೆ. ವಿಹಾರ-ಪ್ರವಾಸಯೋಗ್ಯ, ರಮ್ಯ ಗಿರಿತಾಣವಾಗಿದೆ.

**........... ಮುಂದುವರೆಯುತ್ತದೆ**



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಜೀವನ ಮತ್ತು ಕೆಲಸದೆಡೆಗೆ ಪ್ರತಿಭಾಶಾಲಿಗಳೂ ಮತ್ತು ಪರಿಪೂರ್ಣರೂ ಆಗಿರಿ. ಉತ್ತಮವಾದ ಹೃದಯದೊಂದಿಗೆ ಇತರರಿಗೆ ಸಹಾಯ ಮಾಡುವ ಹಾಗೂ ಮಾರ್ಗದರ್ಶನ ಮಾಡುವ ಬಯಕೆ ಹೊಂದಿರಿ.

**ವೃಷಭ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ಮಿಥುನ** ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು, ಆದರೆ ಅದು ನಿಜವಲ್ಲ , ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

**ಕರ್ಕಾಟಕ** ಮಕ್ಕಳು ಮತ್ತು ಕುಟುಂಬ ನಿಮ್ಮ ಕೇಂದ್ರಬಿಂದುವಾಗಿರುತ್ತದೆ. ನಿಮ್ಮ ಪ್ರೀತಿಪಾತ್ರರು ಸ್ವಲ್ಪ ಕಿರಿಕಿರಿಗೊಂಡಂತೆ ತೋರುತ್ತದೆ, ಇದು ನಿಮ್ಮ ಮನಸ್ಸಿನ ಮೇಲೆ ಒತ್ತಡವನ್ನು ಹಚ್ಚಿಸುತ್ತದೆ.

**ಸಿಂಹ** ಇಂದಿನ ದಿನದಲ್ಲಿ ನೀವು ತುಂಬಾ ಕಾರ್ಯನಿರತರಾಗಿರುತ್ತೀರಿ ಆದರೆ ಸಂಜೆಯ ಸಮಯದಲ್ಲಿ ನೀವು ಇಷ್ಟಪಡುವ ಕೆಲಸಗಳಿಗಾಗಿಯೂ ನಿಮ್ಮ ಹತ್ತಿರ ಸಾಕಷ್ಟು ಸಮಯ ಉಳಿದಿರುತ್ತದೆ.

**ಕನ್ಯಾ** ಒಂದು ಹಂತವನ್ನು ದಾಟಿ ನಿಮ್ಮನ್ನು ದಂಡಿಸಬೇಡಿ ಮತ್ತು ಸರಿಯಾದ ವಿಶ್ರಾಂತಿ ತೆಗೆದುಕೊಳ್ಳಿ. ವಿವಾಹಿತರು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ತುಲಾ** ಸಂಪರ್ಕಗಳು ಮತ್ತು ಚರ್ಚೆಗಳು ಚೆನ್ನಾಗಿ ನಡೆಯದಿದ್ದಲ್ಲಿ ನೀವು ನಿಮ್ಮ ಶಾಂತತೆ ಕಳೆದುಕೊಳ್ಳಬಹುದು ಮತ್ತು ಏನಾದರೂ ಹೇಳಬಹುದು ನಂತರ ನೀವು ಇವುಗಳ ಬಗ್ಗೆ ವಿಷಾದಿಸುತ್ತೀರಿ.

**ವೃಶ್ಚಿಕ** ರಹಸ್ಯ ಪ್ರಣಯಗಳು ನಿಮ್ಮ ಖ್ಯಾತಿಯನ್ನು ನಾಶಮಾಡಬಹುದು. ಹಿರಿಯನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಮನೆಯ ಕಿರಿಯ ಸದಸ್ಯರೊಂದಿಗೆ ಉದ್ಯಾನವನ ಅಥವಾ ಶಾಪಿಂಗ್ ಮಾಲ್‌ಗೆ ಹೋಗಬಹುದು.

**ಧನಸ್ಸು** ಆರೋಗ್ಯ ಚೆನ್ನಾಗಿರುತ್ತದೆ. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

**ಮಕರ** ಒತ್ತಡದ ಕೆಲಸದ ವೇಳಾಪಟ್ಟಿ ಸಹನೆಯನ್ನು ಕೆಣಕಬಹುದು. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ.

**ಕುಂಭ** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು –ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ, ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ

**ಮೀನ** ಮಕ್ಕಳ ಸಂಗದಲ್ಲಿ ಶಾಂತಿ ಪಡೆಯಿರಿ. ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು.

### ಒಪ್ಪಿಗೆ ಪತ್ರದ ನಿಯಮಗಳನ್ನು ಇನ್ನಷ್ಟು ಸರಳೀಕರಣಗೊಳಿಸಬೇಕು ಎಂಬುದು ಪಡಿತರ ಅಂಗಡಿಕಾರರ ಆಗ್ರಹ

# ಮನೆ ಬಾಗಿಲಿಗೇ ಬಂತು ರೇಷನ್: ಅನ್ನ ಸುವಿಧಾ ಯೋಜನೆಗೆ ಉತ್ತಮ ಸ್ಪಂದನೆ

• **ಉದಯವಾಹಿನಿ ಹಾವೇರಿ**

ಎಪ್ಪತ್ತೈದು ವರ್ಷಕ್ಕೂ ಮೇಲ್ಪಟ್ಟವರು ಮಾತ್ರ ಇರುವ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಕಾರ್ಡ್‌ದಾರರ ಕುಟುಂಬಗಳಿಗೆ ಮನೆ ಬಾಗಿಲಿಗೆ ರೇಶನ್ ವಿತರಿಸುವ ಅನ್ನ ಸುವಿಧಾ ಯೋಜನೆಗೆ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. 7 ಸಾವಿರಕ್ಕೂ ಹೆಚ್ಚು ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಈ ಪೈಕಿ ಮೊದಲ ತಿಂಗಳಲ್ಲೇ 400ಕ್ಕೂ ಹೆಚ್ಚು ಫಲಾನುಭವಿಗಳಿಂದ ಒಪ್ಪಿಗೆ ಪತ್ರ ಪಡೆಯಲಾಗಿದೆ.

ವಯೋವೃದ್ಧರು ರೇಶನ್ ಅಂಗಡಿಗೆ ತೆರಳಿ ಸರದಿ ನಿಂತು ಪಡಿತರ ಪಡೆಯುವುದು ಕಷ್ಟವಾಗುತ್ತಿದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಸರ್ವರ್ ಸಮಸ್ಯೆಯಿಂದ ಕೆಲವೊಮ್ಮೆ ಪಡಿತರಕ್ಕಾಗಿ ದಿನವಿಡೀ ಕಾಯುವ ಅನಿವಾರ್ಯತೆ ಎದುರಾಗುತ್ತಿದೆ. ಅಲ್ಲದೇ ಕಿಲೋಮೀಟರ್‌ಗಟ್ಟಲೆ ದೂರವಿರುವ ಪಡಿತರ ಅಂಗಡಿಗೆ ತಲುಪುವುದೇ ವಯೋವೃದ್ಧರಿಗೆ ಸವಾಲಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಸರಕಾರ ಕಳೆದ ಬಜೆಟ್‌ನಲ್ಲಿ ಅನ್ನ ಸುವಿಧಾ ಯೋಜನೆ ಘೋಷಣೆ ಮಾಡಿತ್ತು. ಯೋಜನೆಯಡಿ 75 ವರ್ಷ ಮೇಲ್ಪಟ್ಟ ವೃದ್ಧರು ಮಾತ್ರ ಇರುವ ಕುಟುಂಬಗಳಿಗೆ ಸಂಬಂಧಪಟ್ಟ ಪಡಿತರ ಅಂಗಡಿಯವರು ಮನೆ ಬಾಗಿಲಿಗೇ ತೆರಳಿ ಪಡಿತರ ವಿತರಣೆ ಮಾಡಲಿದ್ದಾರೆ.

**ಉತ್ತಮ ಸ್ಪಂದನೆ:** ಜಿಲ್ಲೆಯಲ್ಲಿ 75 ವರ್ಷಕ್ಕೂ ಮೇಲ್ಪಟ್ಟ ಅಂತ್ಯೋದಯ ಮತ್ತು ಬಿಪಿಎಲ್ ಸೇರಿ ಒಟ್ಟು 7211 ಪಡಿತರ ಕಾರ್ಡ್‌ದಾರ ಫಲಾನುಭವಿಗಳನ್ನು ಗುರುತಿಸಲಾಗಿದೆ. ಈ ಪೈಕಿ 447 ಫಲಾನುಭವಿಗಳು ಈಗಾಗಲೇ ಒಪ್ಪಿಗೆ ಪತ್ರ ನೀಡಿದ್ದಾರೆ. ಪಡಿತರ ಸಂಗ್ರಹ ಇರುವ ಅಂಗಡಿಕಾರರು ಪಡಿತರ ವಿತರಣೆ ಆರಂಭಿಸಿದ್ದಾರೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿ ಮಾಹಿತಿ ನೀಡಿದ್ದಾರೆ.

**ಅಂಗಡಿಕಾರರಿಗೆ ಕಿರಿಕಿರಿ:** ಅನ್ನ ಸುವಿಧಾ ಯೋಜನೆಯ ಫಲಾನುಭವಿಗಳಿಂದ ಆಯಾ ಪಡಿತರ ಅಂಗಡಿಕಾರರೇ ಒಪ್ಪಿಗೆ ಪತ್ರ ಪಡೆಯಬೇಕಿದೆ. ಇದು ಒಂದು ಸಲ ಕೈಗೊಳ್ಳುವ ಕೆಲಸವಲ್ಲ, ಬದಲಿಗೆ ಪ್ರತಿ ತಿಂಗಳೂ ಆರಂಭದ ಐದು ದಿನ ಒಪ್ಪಿಗೆ ಪತ್ರಕ್ಕಾಗಿ ಓಡಾಡಬೇಕು. ಫಲಾನುಭವಿಗಳು ಮನೆಯಲ್ಲಿ ಇಲ್ಲದಿದ್ದರೆ ಒಂದೇ ಮನೆಗೆ 2–3 ಸಲ ತಿರುಗಾಡುವ ಅನಿವಾರ್ಯತೆಯೂ ಉಂಟಾಗಲಿದೆ. ಈ ಹಿನ್ನೆಲೆಯಲ್ಲಿ ಒಪ್ಪಿಗೆ ಪತ್ರದ ನಿಯಮಗಳನ್ನು ಇನ್ನಷ್ಟು ಸರಳೀಕರಣಗೊಳಿಸಬೇಕು ಎಂಬುದು ಪಡಿತರ ಅಂಗಡಿಕಾರರ ಆಗ್ರಹವಾಗಿದೆ.

ಜಿಲ್ಲೆಯಲ್ಲಿಅನ್ನ ಸುವಿಧಾ ಯೋಜನೆಯಡಿ 7 ಸಾವಿರಕ್ಕೂ ಹೆಚ್ಚು ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಇವರಲ್ಲಿ447 ಫಲಾನುಭವಿಗಳಿಂದ ಒಪ್ಪಿಗೆ ಪಡೆಯಲಾಗಿದೆ. 75 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮಾತ್ರ ಇರುವ ಕುಟುಂಬಗಳ ಅರ್ಹ ಪಡಿತರ ಕಾರ್ಡ್‌ದಾರರು ಈ ಯೋಜನೆ ಲಾಭ ಪಡೆದುಕೊಳ್ಳಬೇಕು ಎಂದಿದ್ದಾರೆ ಮಂಜುನಾಥ ಡಿ.ಜೆ. ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆ, ಹಾವೇರಿ.

**ತಾಲ್ಲೂಕು ಫಲಾನುಭವಿಗಳು**

- ಬ್ಯಾಡಗಿ 681
- ಹಾನಗಲ್ 1268
- ಹಾವೇರಿ 1429
- ಹಿರೇಕೆರೂರು 668
- ರಾಣೇಬೆನ್ನೂರ 1144
- ಸವಣೂರು 674
- ಶಿಗ್ಗಾವಿ 800
- ರಟ್ಟಿಹಳ್ಳಿ 547
- ಒಟ್ಟು 7211



ಉದಯವಾಹಿನಿ ಚಿತ್ರ

- ಜಿಲ್ಲೆಯಲ್ಲಿ7 ಸಾವಿರಕ್ಕೂ ಹೆಚ್ಚು ಫಲಾನುಭವಿಗಳ ಗುರುತು
- 75 ವರ್ಷ ಮೇಲ್ಪಟ್ಟ ವೃದ್ಧರು ಮಾತ್ರ ಇರುವ ಕುಟುಂಬಗಳಿಗೆ ಸಂಬಂಧಪಟ್ಟ ಪಡಿತರ ಅಂಗಡಿಯವರು ಮನೆ ಬಾಗಿಲಿಗೇ ತೆರಳಿ ಪಡಿತರ ವಿತರಣೆ ಮಾಡಲಿದ್ದಾರೆ.
- ಜಿಲ್ಲೆಯಲ್ಲಿ ಅನ್ನ ಸುವಿಧಾ ಯೋಜನೆಯಡಿ 7 ಸಾವಿರಕ್ಕೂ ಹೆಚ್ಚು ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಇವರಲ್ಲಿ447 ಫಲಾನುಭವಿಗಳಿಂದ ಒಪ್ಪಿಗೆ ಪಡೆಯಲಾಗಿದೆ.

**ಯೋಜನೆ ಅನುಷ್ಠಾನ**

**ಯೋಜನೆಯಡಿ ರಾಜ್ಯಾದ್ಯಂತ ಒಟ್ಟು 2,58,154 ಫಲಾನುಭವಿಗಳನ್ನು ಗುರುತಿಸಲಾಗಿದೆ. ಪಡಿತರ ಅಂಗಡಿಯವರಿಗೆ ಸಾಮಾನ್ಯವಾಗಿ ಕೊಡುವ ಕಮಿಷನ್ ಜತೆಗೆ ಪ್ರತಿ ಮನೆಗೆ ಪಡಿತರ ವಿತರಣೆಗೆ 50 ರೂ. ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ15.48 ಕೋಟಿ ರೂ. ಗೂ ಹೆಚ್ಚು ಅನುದಾನ ಕಾಯ್ದಿರಿಸಲಾಗಿದೆ. ಕಳೆದ ಅಕ್ಟೋಬರ್‌ನಿಂದ ಯೊಜನೆ ಅನುಷ್ಠಾನ ಪ್ರಕ್ರಿಯೆ ಪ್ರಾರಂಭಗೊಂಡಿದೆ. ಪಡಿತರ ಅಂಗಡಿಕಾರರು ಪ್ರತಿ ಫಲಾನುಭವಿಗಳ ಮನೆಗೆ ತೆರಳಿ ಅವರಿಂದ ಮನೆ ಬಾಗಿಲಿಗೇ ಪಡಿತರ ವಿತರಿಸುವ ನಿಟ್ಟಿನಲ್ಲಿ ಒಪ್ಪಿಗೆ ಪತ್ರ ಪಡೆಯಬೇಕಿದ್ದು, ಪ್ರತಿ ತಿಂಗಳು 1–5 ನೇ ತಾರೀಖಿನ ಒಳಗೆ ಈ ಪ್ರಕ್ರಿಯೆ ಮುಗಿಸಬೇಕಿದೆ. ಬಳಿಕ 6–15ನೇ ತಾರೀಖಿನ ಒಳಗೆ ಪಡಿತರ ವಿತರಣೆ ಮಾಡಬೇಕಿದೆ.**



## ಅನ್ಯಾಯ, ದೌರ್ಜನ್ಯ, ವಿರುದ್ಧ ನಮ್ಮ ಹೋರಾಟ: ಗೋನಾಲ್

• **ಉದಯವಾಹಿನಿ ಕೆಂಭಾವಿ**

ಬಡವರ ನೊಂದವರ ಹಾಗೂ ದಲಿತರ ಧ್ವನಿಯಾಗಿ ನಾವು ಎಲ್ಲರೂ ಸೇರಿ ಕೆಲಸ ಮಾಡಬೇಕು, ಪಟ್ಟಣದಲ್ಲಿ ಹಲವು ಭಾಗಗಳಲ್ಲಿ ಕುಂದು ಕೊರತೆಗಳಿದ್ದು ಅವುಗಳನ್ನು ಬಗೆಹರಿಸುವಲ್ಲಿ ನಮ್ಮ ಸಂಘಟನೆ ಶ್ರಮಿಸುವುದು. ನಮ್ಮ ದಲಿತ ಸಮುದಾಯದ ಮೇಲೆ ಇಂದಿಗೂ ನಡೆಯುತ್ತಿರುವ ಶೋಷಣೆಗಳು, ಅನ್ಯಾಯ, ದೌರ್ಜನ್ಯಗಳ ವಿರುದ್ಧ ನಮ್ಮ ಸಂಘಟನೆ ಖಂಡಿಸಲಿದೆ. ಹೋಬಳಿ ಪ್ರತಿ ಗ್ರಾಮ ಮಟ್ಟದಲ್ಲಿ ನಮ್ಮ ಸಂಘಟನೆಯ ಘಟಕಗಳು ಶ್ರಮಿಸಲು ಸಿದ್ಧವಾಗಿವೆ ಎಂದು ಯಾದಗಿರಿ ಜಿಲ್ಲಾ ಸಂಚಾಲಕ ನಿಂಗಣ್ಣ ಎಮ್.ಗೋನಾಲ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪ್ರೊಫೆಸರ್ ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕದ ವತಿಯಿಂದ ಕೆಂಭಾವಿ ಹೋಬಳಿ ಮಟ್ಟದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ಕಾರ್ಯಕ್ರಮವನ್ನು ಬಾಬಾಸಾಹೇಬ್ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಲಾಯಿತು.

ಜಿಲ್ಲಾ ಸಂ.ಸಂಚಾಲಕರಾದ ಎಚ್. ಆರ್. ಬಡಿಗೇರ್ ಮಾತನಾಡಿ ಪ್ರೊಫೆಸರ್ ಬಿ. ಕೃಷ್ಣಪ್ಪ ರವರ ಆಶಯದಂತೆ ನಮ್ಮ ಸಂಘಟನೆ ಕಾರ್ಯ ನಿರ್ವಹಿಸಲಿದೆ ಜಿಲ್ಲೆಯ ಮೂಲೆ ಮೂಲೆಗೂ ನಮ್ಮ ಸಂಘಟನೆಯ ಸೈನಿಕರು ತಲುಪಿ ದಲಿತ ಪರ ಧ್ವನಿಯಾಗಿ ಶ್ರಮಿಸಲಿದ್ದಾರೆ. ಹೋಬಳಿ ಘಟಕಕ್ಕೆ ಬೇಕಾದ ನೈತಿಕ ಬೆಂಬಲ ಸದಾ ನೀಡುತ್ತೇವೆ.

ಪಟ್ಟಣದಲ್ಲಿ ಪ್ರೊಫೆಸರ್ ಬಿ.ಕೃಷ್ಣಪ್ಪ ರವರ ಕನಸು ನನಸಾಗುವ ನಿಟ್ಟಿನಲ್ಲಿ ಹೋಬಳಿ ಘಟಕ ಶ್ರಮಿಸಲಿ ಎಂದು ಹಾರೈಸಿದರು.ನಾಗರಾಜ್ ಗೋಗಿಕರ್, ನಿಂಗಪ್ಪ ಕಟ್ಟಿಮನಿ ಕನ್ನಳ್ಳಿ, ಪರಶುರಾಮ್ ಬೋನ್ಹಾಳ, ಮಲಪ್ಪ ಕೂಡಲಗಿ, ರವಿ ಮಾಳಳ್ಳಿಕರ್, ಶಿವು ಗುಡಿಮನಿ, ಸಾಯಬಣ್ಣ ಎಂಟಮನ್ ನಿರೂಪಿಸಿ, ವಂದಿಸಿದರು.



ಉದಯವಾಹಿನಿ ಚಿತ್ರ

**ಕೆಂಭಾವಿ ಹೋಬಳಿ ಘಟಕ ಪದಾಧಿಕಾರಿಗಳು**

**ಭೀಮರಾಯ. ಎಸ್.ಮಳಿಕೇರಿ (ಸಂಚಾಲಕರು) ಮಾಳಪ್ಪ. ಡಿ. ವಠಾರ, ದೇವು ಕರಡಕಲ್, ಪರಶುರಾಮ್ ಮಳಿಕೇರಿ (ಸಂ. ಸಂಚಾಲಕರು) ಶರಣು ದಳಪತಿ, ಮೌನೇಶ್ ಎವೂರ (ಖಜಾಂಚಿ) ಬಸವರಾಜ್ ಯಾಳಗಿ (ಸಲಹೆಗಾರ) ಶೇಖರ್ ಖಾನಾಪುರ (ಸಂ. ಸಂಚಾಲಕರು)**

## ಪಟ್ಟಣದ ಅಭಿವೃದ್ಧಿಗೆ ರೈತ ಸಂಘದಿಂದ ಮನವಿ


• **ಉದಯವಾಹಿನಿ ಕೊಲ್ಹಾರ**

ಪಟ್ಟಣದ ಬಸ್ ನಿಲ್ದಾಣ 1ರಲ್ಲಿ ಡಾಂಬರೀಕರಣ, ಧೂಳಿನ ನಿಯಂತ್ರಣ ಹಾಗೂ ಬಣ್ಣ ಹಚ್ಚುವ ಕೆಲಸ ಕೈಗೊಳ್ಳುವ ಕುರಿತು ಜಿಲ್ಲಾಧಿಕಾರಿಯವರಿಗೆ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಕಲ್ಲು ಸೊನ್ನದ ಹಾಗೂ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮನವಿ ಸಲ್ಲಿಸಿದರು.

ಕೊಲ್ಹಾರ ಪಟ್ಟಣದ ಬಸ್ ನಿಲ್ದಾಣದಲ್ಲಿ ಪ್ರತಿದಿನವೂ ಸುಮಾರು 300ಕ್ಕೂ ಹೆಚ್ಚು ಬಸ್‌ಗಳು ಸಂಚಾರಿಸುತ್ತಿವೆ. ಸುಮಾರು 15 ವರ್ಷಗಳ ಹಿಂದೆ ಡಾಂಬರೀಕರಣ ನಡೆದಿದ್ದು, ಅದಾದ ನಂತರ ಯಾವುದೇ ರೀತಿಯ ದುರಸ್ತಿ ಅಥವಾ ಪುನಃ ಡಾಂಬರೀಕರಣ ಕಾರ್ಯ ನಡೆದಿಲ್ಲ. ಹೀಗಾಗಿ ಬಸ್ ನಿಲ್ದಾಣದ ನೆಲವು ಸಂಪೂರ್ಣವಾಗಿ ಹಾಳಾಗಿದ್ದು, ಬಸ್‌ಗಳು ಮತ್ತು ಖಾಸಗಿ ವಾಹನಗಳು ಸಂಚರಿಸುವ ವೇಳೆ ಭಾರೀ ಧೂಳಿನ ಮಬ್ಬು ಉಂಟಾಗುತ್ತಿದೆ. ಬಸ್ ನಿಲ್ದಾಣದ ಪಕ್ಕದಲ್ಲೆ ಶಾಲೆ ಮತ್ತು ಕಾಲೇಜುಗಳಿದ್ದು, ಮಕ್ಕಳು ಬಸ್ಸಿಗಾಗಿ ನಿಲ್ದಾಣದಲ್ಲಿ ಕಾಯುವ ಸಂದರ್ಭದಲ್ಲಿ ಧೂಳಿನ ಪರಿಣಾಮದಿಂದ ತೊಂದರೆ ಅನುಭವಿಸುತ್ತಿದ್ದಾರೆ.

ಬಸ್ ನಿಲ್ದಾಣ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವವರು, ಅಂಗಡಿಗಾರರು ಹಾಗೂ ಬಸ್ ನಿಲ್ದಾಣದ ಕಾರ್ಯನಿರ್ವಾಹಕರು ಸಹ ಮಾಸ್ಕ್ ಧರಿಸಿಕೊಂಡೇ ಕೆಲಸ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಯಂದಿರಿಗೆ ಶಿಶುವಿಗೆ ಹಾಲುಣಿಸಲು ಪ್ರತ್ಯೇಕ ಕೊಠಡಿ ಅಗತ್ಯವಿದ್ದು, ಈ ಸೌಲಭ್ಯವೂ ಇಲ್ಲದಂತಾಗಿದೆ. ಅಲ್ಲದೆ ಬಸ್ ನಿಲ್ದಾಣದ ಕಟ್ಟಡಕ್ಕೆ ಸುಮಾರು 15 ವರ್ಷಗಳ ಹಿಂದೆ ಬಣ್ಣ ಹಚ್ಚಲಾಗಿದ್ದು, ಆ ಬಳಿಕ ಮತ್ತೆ ಯಾವುದೇ ಬಣ್ಣ ಹಚ್ಚುವ ಕಾರ್ಯ ನಡೆದಿಲ್ಲ. ಹೀಗಾಗಿ ಬಸ್ ನಿಲ್ದಾಣದ ಕಟ್ಟಡವು ಅಸಂದರ್ಶಕವಾಗಿ ಕಾಣುತ್ತಿದೆ ಎಂದು ಹೇಳಿದರು,



ಉದಯವಾಹಿನಿ ಚಿತ್ರ

## ಮಹಾಪರಿನಿರ್ವಾಣ ದಿನಾ ಆಚರಣೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕೆಂಭಾವಿ**

ಯಾಳಗಿ ಗ್ರಾಮದ ಡಾ ಬಿ ಆರ್ ಅಂಬೇಡ್ಕರ್ ನಗರದಲ್ಲಿ ಬಾಬಾಸಾಹೇಬರ 69ನೇ ಮಹಾಪರಿನಿರ್ವಾಣ ದಿನಾ ಆಚರಣೆಯನ್ನು ಮಾಡಲಾಯಿತು, ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಮಹಾದೇವಪ್ಪ ಜಲಾಪುರ, ಶರಣಪ್ಪ ಕಟ್ಟಿಮನಿ, ಬಸಪ್ಪ ಕದ್ನಲ್ಲಿ, ಶರಣಪ್ಪ ನಗನೂರ, ಸಿದ್ದು, ನಾಗರಡ್ಡಿ, ಖಂಡಪ್ಪ ದೊಡ್ಡಮನಿ, ಮಹಾಂತೇಶ್ ಯಾಳಗಿ, ರಾಜು ನಾಗರಡ್ಡಿ ಮಂಜು ಜಲಾಪುರ, ಸಂತೋಷ ಕಲ್ಲದೇವನಹಳ್ಳಿ ಇನ್ನು ಅನೇಕ ಯುವಕರು ಇದ್ದರು.

## ಪ್ರೀ ವೆಡ್ಡಿಂಗ್ ಶೂಟಿಂಗ್‌ಗೆ ಹೋದವರ ಚಿನ್ನಾಭರಣ ದೋಚಿ ಪರಾರಿ

• **ಉದಯವಾಹಿನಿ ಕಲಬುರಗಿ**

ಪ್ರೀ ವೆಡ್ಡಿಂಗ್ ಶೂಟಿಂಗ್‌ಗೆ ಹೋದ ವಧುವರರ ಚಿನ್ನದ ಆಭರಣಗಳನ್ನು ಮೂವರು ದುಷ್ಕರ್ಮಿಗಳು ದೋಚಿಕೊಂಡು ಹೋದ ಘಟನೆ ಜಾಪುರ ಬುದ್ಧವಿಹಾರ ಹಿಂದುಗಡೆ ಸಂಭವಿಸಿದೆ.

ಪ್ರೀ ವೆಡ್ಡಿಂಗ್ ಶೂಟಿಂಗ್‌ಗೆ ಜಾಪುರ ಬುದ್ಧವಿಹಾರ ಹಿಂದುಗಡೆ ಕಾರು ನಿಲ್ಲಿಸಿ ಶೂಟಿಂಗ್‌ನಲ್ಲಿ ನಿರತರಾದ ವಧು ಐಶ್ವರ್ಯ ಬಸವರಾಜ ಕೋಲಕುಂದಾ ಮತ್ತು ವರ ಕಿರಣಕುಮಾರ ಚಿಟ್ಟಾ ಅವರ ಚೈನು, ಉಂಗುರ ಸೇರಿದಂತೆ 1.2 ಲಕ್ಷ ರೂ ಮೌಲ್ಯದ 15 ಗ್ರಾಮ್ ಚಿನ್ನದ ಆಭರಣಗಳನ್ನು ಬೈಕ್ ಮೇಲೆ ಬಂದ 3 ಜನ ಚಾಕು ತೋರಿಸಿ ಬೆದರಿಸಿ ದೋಚಿ ಪರಾರಿಯಾಗಿದ್ದಾರೆ. ಕಲಬುರಗಿ ವಿಶ್ವವಿದ್ಯಾಲಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಳಿಗಾಲದ ಅಧಿವೇಶನ; ಸಕಲ ಸಿದ್ಧತೆ

• **ಉದಯವಾಹಿನಿ ಬೆಳಗಾವಿ**

ಚಳಿಗಾಲದ ಅಧಿವೇಶನಕ್ಕೆ ಕ್ಷಣಗಣನೆ ಆರಂಭವಾಗಿದ್ದು ಜಿಲ್ಲಾಡಳಿತದಲ್ಲಿ ಗಡಿಬಿಡಿ ಕೆಲಸಗಳು ಸಾಗಿವೆ. ವಸತಿ, ಊಟ, ನೀರು, ವಾಹನ, ಇಂಟರ್ನೆಟ್, ಸುರಕ್ಷತೆ ಸೇರಿದಂತೆ ಎಲ್ಲಾ ಸಿದ್ಧತೆಗಳು ಅಂತಿಮ ಹಂತ ತಲುಪಿವೆ. ವಿವಿಧ ಉಪ ಸಮಿತಿಗಳು ಕೂಡ ನಿರಂತರ ಸಭೆ–ಸಿದ್ಧತೆಗಳಲ್ಲೇ ಮುಳುಗಿದವು.

ದೆಹಲಿಯಲ್ಲಿ ಭಯೋತ್ಪಾದಕರು ಬಾಂಬ್ ಸ್ಫೋಟಿಸಿದ ಕಾರಣ ಈ ಬಾರಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ಕನಿಷ್ಠ 6,000ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದ್ದಾರೆ. ಆದರೆ, ಜಿಲ್ಲಾಧಿಕಾರಿ ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಪೊಲೀಸರ ಸಂಖ್ಯೆಯನ್ನು 8,000ಕ್ಕೆ ಹೆಚ್ಚಿಸಲಾಗುವುದು ಎಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ರೂ.21 ಕೋಟಿ ವೆಚ್ಚವನ್ನು ಇಡೀ ಅಧಿವೇಶನಕ್ಕೆ ನಿಗದಿ ಮಾಡಿದ್ದರೆ ಇದರಲ್ಲಿ ರೂ. 5 ಕೋಟಿಯನ್ನು ಕೇವಲ ಭದ್ರತೆಗಾಗಿ ನಿಗದಿ ಮಾಡಲಾಗಿದೆ.

ಮೊದಲ ತಂಡದ ಪೊಲೀಸ್ ಅಧಿಕಾರಿಗಳಿಗೆ ಕರ್ತವ್ಯ ನಿಯೋಜನೆ ಮಾಡಲಾಯಿತು. ಈಗಾಗಲೇ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಪೊಲೀಸರು ಬಂದು ವರದಿ ಮಾಡಿಕೊಳ್ಳುವ ಪ್ರಕ್ರಿಯೆ ಮುಂದುವರಿದಿದೆ.

## 2030 ರೊಳಗೆ 2.5 ಲಕ್ಷ ಮನೆಗಳಿಗೆ ಸಿ.ಎನ್.ಜಿ ಗ್ಯಾಸ್ ಸಂಪರ್ಕ ಗುರಿ: ಶಾಸಕ ಬಸನಗೌಡ ಪಾಟೀಲ ಯತ್ನಾಳ

• **ಉದಯವಾಹಿನಿ ವಿಜಯಪುರ**

ಮನೆಗಳಿಗೆ ನೇರವಾಗಿ ಸಿ.ಎನ್.ಜಿ ಸರಬರಾಜು ಮಾಡಿ, ನಗರವನ್ನು ಮಾಲಿನ್ಯ ಮುಕ್ತವಾಗಿಡುವ ಬಹಳ ದಿನಗಳ ಕನಸು ಥಿಂಕ್ ಗ್ಯಾಸ್ ಸಿ.ಎನ್.ಸಿ ಮೂಲಕ ನಡೆಯುತ್ತಿದೆ. 2030 ರೊಳಗೆ 2.5 ಲಕ್ಷ ಮನೆಗಳಿಗೆ ನೇರವಾಗಿ ಪಿ.ಎನ್.ಜಿ ಗ್ಯಾಸ್ ಸಂಪರ್ಕ ನೀಡುವ ಗುರಿ ಹೊಂದಲಾಗಿದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ರವರು ತಿಳಿಸಿದರು.

ನಗರದಲ್ಲಿ ಥಿಂಕ್ ಗ್ಯಾಸ್ ಸಿ.ಎನ್.ಜಿ ಸ್ಟೇಶನ್ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ವಿಜಯಪುರ ನಗರದಲ್ಲಿ 120 ಮನೆಗಳು ಮತ್ತು ಹಲವು ವಾಣಿಜ್ಯ ಸಂಸ್ಥೆಗಳು ನೈಸರ್ಗಿಕ ಅನಿಲದ ಪ್ರಯೋಜನ ಪಡೆಯುತ್ತಿವೆ. ಇದಕ್ಕಾಗಿ 25 ಕಿ.ಮೀ ಎಂ.ಡಿ.ಪಿ.ಇ ಲೈನ್ ಜೋಡಿಸಲಾಗಿದೆ ಎಂದರು.

ಈ ಮೊದಲು ವಿಜಯಪುರ ನಗರ ದೂಳಿನಿಂದ ಅಸ್ತಮಾ ವಿಪರಿತವಾಗಿತ್ತು.

ನನ್ನ ಅವಧಿಯಲ್ಲಿ ಗುಣಮಟ್ಟದ ರಸ್ತೆಗಳು, ಚರಂಡಿ ನಿರ್ಮಾಣ, ಗಿಡಗಳು ನೆಟ್ಟಿದ್ದರಿಂದ ದೇಶದಲ್ಲಿ ವಿಜಯಪುರ 3ನೇ ಉತ್ತಮ ಪರಿಸರ ನಗರವಾಗಿದೆ. ಮನೆ ಮನೆಗೆ ಗ್ಯಾಸ್ ಸಂಪರ್ಕದಿಂದ 2030 ರೊಳಗಾಗಿ ನಗರ ಶೇ 100 ರಷ್ಟು ಪರಿಸರ ಮಾಲಿನ್ಯದಿಂದ ಮುಕ್ತವಾಗಲಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

## ಡಾ. ಬಿ.ಆರ್. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ನಾಯಕ


• **ಉದಯವಾಹಿನಿ ಕೆಂಭಾವಿ**

ಡಾ. ಬಿ.ಆರ್. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ನಾಯಕರಾಗಿ ಭಾರತದಲ್ಲಿ ಅಸ್ಪೃಶ್ಯತೆ, ಜಾತಿ ತಾರತಮ್ಯ, ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಿದ ಸಾಮಾಜಿಕ ಸಮಾನತೆಯ ಹರಿಕಾರ ಮಹಾನ್ ವ್ಯಕ್ತಿ. ಎಂದು ಯಾದಗಿರಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮಹಿಪಾಲ ರೆಡ್ಡಿ ಡಿಗ್ಗಾವಿ ಹೇಳಿದರು.

ಪಟ್ಟಣದ ಮಹಾ ನಾಯಕ ಅಂಬೇಡ್ಕರ್ ವೃತ್ತದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 69ನೇ ಮಹಾಪರಿ ನಿರ್ವಹಣದ ದಿನದ ಪ್ರಯುಕ್ತ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ದಲಿತರಿಗಾಗಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಚಳವಳಿಗಳನ್ನು ನಡೆಸಿ, ಭಾರತದ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಾ ಮಾನವತವಾದಿಯಾಗಿ ಶೋಷಿತರ ಸಮಾನತೆ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಅಸ್ಪೃಶ್ಯತೆಯಂತಹ ದಹನೀಯ ಪದ್ಧತಿಗಳನ್ನು ನಿರ್ಮೂಲನಗೊಳಿಸಿದ ಮಹಾನ್ ನಾಯಕ. ಅವರ ಹೋರಾಟಗಳು ದಲಿತರಲ್ಲಿ ಜಾಗೃತಿ ಮೂಡಿಸಿ, ಭಾರತೀಯ ಸಂವಿಧಾನದ ಮೂಲಕ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದರು ಎಂದು ಹೇಳಿದರು.

ಕಾರ್ಯಕ್ರಮ ಉದ್ದೇಶಿಸಿ ಪುರಸಭೆ ಸದಸ್ಯರಾದ ರವಿಶಂಕರ್ ಸೊನ್ನದ, ಕಂದಾಯ ನಿರೀಕ್ಷಕರಾದ ರಾಜಸಾಬ್ ಕಂದಗಲ್, ಪಿಯು ಕಾಲೇಜಿನ ಪ್ರಾಚಾರ್ಯರಾದ ಅಶೋಕ್ ಕುಮಾರ್ ತಳಕೇರಿ ಮಾತನಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುರಸಭೆ ಅಧ್ಯಕ್ಷರಾದ ಶ್ರೀಮತಿ ಪ್ರಿಯ ರಾಮನಗೌಡ ಪೊಲೀಸ್ ಪಾಟೀಲ,ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮೀಬಾಯಿ ಕಂಬಾರ, ವಹಿಸಿಕೊಂಡರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕಾಂಗ್ರೆಸ್ ಯುವ ಮುಖಂಡ ಆದಿತ್ಯ ಗೌಡ ಪೊಲೀಸ್ ಪಾಟೀಲ್ , ಪುರಸಭೆ ಸದಸ್ಯ ಆರಿಫ್ ನಾನಾ ಖಾಜಿ, ಭೀಮನಗೌಡ ಮಲ್ಲಾಪುರ, ಪರಶುರಾಮ ಬಳಬಟ್ಟಿ, ಪುರಸಭೆಯ ಮುಖ್ಯ ಅಧಿಕಾರಿ MD,ಯೂಸುಫ, ಉಪ ತಹಶೀಲ್ದಾರ ಪ್ರವೀಣಕುಮಾರ ಸಜ್ಜನ, ಪ್ರಕಾಶ ಬಾಗಲಿ, ಕೆಬಿಜೆಎನ್ಎಲ್ ಅಧಿಕಾರಿ ಶಿವಶರಣಪ್ಪ ಮಾಳಳ್ಳಿಕರ್ ಇತರರು ಇದ್ದರು.



ಉದಯವಾಹಿನಿ ಚಿತ್ರ

**ಎಲ್ಲರಿಗೂ ಸಮಾನ ಹಕ್ಕು**

## ರಾಷ್ಟ್ರೀಯ ಆರೋಗ್ಯ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಿ : ಜಿಪಂ ಸಿಇಒ

• **ಉದಯವಾಹಿನಿ ವಿಜಯಪುರ**

ಜಿಲ್ಲೆಯಲ್ಲಿರುವ ಎಲ್ಲಾ ಗರ್ಭಿಣಿ ಮಹಿಳೆಯರ ಮಾಹಿತಿಯನ್ನು ಆರ್.ಸಿ.ಹೆಚ್. ತಂತ್ರಾಂಶದಲ್ಲಿ ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ನೋಂದಣಿ ಮಾಡಬೇಕು ಹಾಗೂ ನಿಯಮಿತವಾಗಿ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘದ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆ ವಹಿಸಿ, ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಯಾವುದೇ ಮಕ್ಕಳು ಪೊಲೀಯೋ ಸೇರಿದಂತೆ ವಿವಿಧ ರೋಗ ನಿರೋಧಕ ಲಸಿಕೆಗಳಿಂದ ವಂಚಿತವಾಗದಂತೆ ನೋಡಿಕೊಂಡು ಶೇ. ನೂರರಷ್ಟು ಪ್ರಗತಿ ಸಾಧಿಸುವಂತೆ ಅವರು ಸೂಚಿಸಿದರು.

ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದ ಪ್ರಗತಿ ಪರಿಶೀಲನೆ ನಡೆಸಿದ ಅವರು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳು ಒಂದೊಂದು ಗ್ರಾಮ ಪಂಚಾಯತಿಯನ್ನು ದತ್ತು ತೆಗೆದುಕೊಂಡು, ಆ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಳಪಡುವ ಹಳ್ಳಿಗಳಿಗೆ ನಿಯಮಿತವಾಗಿ ಭೇಟಿ ನೀಡಿ ಕ್ಷಯಮುಕ್ತ ಗ್ರಾಮ ಪಂಚಾಯತಿ ಮಾಡಲು ಹಾಗೂ ವಿವಿಧ ರಾಷ್ಟ್ರೀಯ ಆರೋಗ್ಯ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಅವರು ಸೂಚಿಸಿದ ಅವರು, ಸರಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುವಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ಜನರಿಗೆ ಸೇವಾ ಮನೋಭಾವದಿಂದ ಸೇವೆಯನ್ನು ಒದಗಿಸುವಂತೆ ಅವರು ಸೂಚಿಸಿದರು.




ಉದಯವಾಹಿನಿ ಚಿತ್ರ

# ವರದಿಗಾರಿಕೆ ಅಧಿಕಾರ ಅಲ್ಲ, ಇದೊಂದು ಮಹತ್ವದ ಜವಾಬ್ದಾರಿ: ಈಶ್ವರ ಖಂಡ್ರೆ

### ಸ್ವಾತಂತ್ರ್ಯ ಪೂರ್ವದಲ್ಲಿ ಅನ್ಯಾಯದ ವಿರುದ್ಧ ಪತ್ರಕರ್ತರಾಗಿ ಡಾ.ಅಂಬೇಡ್ಕರ್ ಅವರು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರು

• **ಉದಯವಾಹಿನಿ ಬೀದರ್**

ವರದಿಗಾರಿಕೆ ಅಧಿಕಾರ ಅಲ್ಲ. ಇದೊಂದು ಮಹತ್ವದ ಜವಾಬ್ದಾರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಅಭಿನಂದನಾ ಸಮಾರಂಭ ಹಾಗೂ ಭೀಮಣ್ಣ ಖಂಡ್ರೆ ಅವರ ಹೆಸರಿನಲ್ಲಿ ಸಚಿವ ಈಶ್ವರ ಖಂಡ್ರೆ ಅವರು ಸ್ಥಾಪಿಸಿತ್ತಿರುವ ದತ್ತಿ ನಿಧಿಯ ಚೆಕ್ ಹಸ್ತಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿಗಿಂತಲೂ ಪ್ರಸ್ತುತ ಮಾಧ್ಯಮ ಕ್ಷೇತ್ರದ ಜವಾಬ್ದಾರಿ ಹೆಚ್ಚಿದೆ. ಸೌಹಾರ್ದತೆ ಭಾರತ ಕಟ್ಟಬೇಕಾದರೆ ನೈಜ ವರದಿಗಳಿಗೆ ಆದ್ಯತೆ ನೀಡಬೇಕಾಗಿದೆ ಎಂದರು.

ಮಾಧ್ಯಮಗಳು ತಮ್ಮ ವರದಿಯಲ್ಲಿ ನೈಜತೆ ಮತ್ತು ಪಾರದರ್ಶಕತೆ ಕಾಪಾಡಿಕೊಂಡಾಗ ಮಾಧ್ಯಮರಂಗಕ್ಕೆ ಗೌರವ ಹೆಚ್ಚಲು ಸಾಧ್ಯವಾಗುತ್ತದೆ. ತಮ್ಮ ಸ್ಥಾನಮಾನಕ್ಕೆ ಧಕ್ಕೆ ಬರದಂತೆ ಪತ್ರಕರ್ತರು ಕಾರ್ಯ ನಿರ್ವಹಿಸುವುದು ಅಗತ್ಯವಾಗಿದೆ ಎಂದು ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಅನ್ಯಾಯದ ವಿರುದ್ಧ ಪತ್ರಕರ್ತರಾಗಿ ಡಾ.ಅಂಬೇಡ್ಕರ್ ಅವರು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರು. ಅವರ ಪರಿನಿಬ್ಬಾಣ ದಿನದಂದೇ ಅಭಿನಂದನಾ ಸಮಾರಂಭ ಹಾಗೂ ದತ್ತಿ ನಿಧಿ ಚೆಕ್ ಹಸ್ತಾಂತರ ಕಾರ್ಯಕ್ರಮ ಆಯೋಜಿಸಿದ್ದು ಉತ್ತಮ.

ಸಂಘದ ನೂತನ ಅಧ್ಯಕ್ಷ ಶಿವಾನಂದ ತಗಡೂರು ಸರಳ, ಸಜ್ಜನಿಕೆ ವ್ಯಕ್ತಿ. ಕೋವಿಡ್ ವೇಳೆ ಜೀವದ ಹಂಗು ತೊರೆದು ಪತ್ರಕರ್ತರ ಕೆಲಸ ಮಾಡಿದ್ದಾರೆ. ಕೊರೊನಾ ವೇಳೆ ಮಡಿದ ಪತ್ರಕರ್ತರ ಪರಿಹಾರ ಕೊಡಿಸುವಲ್ಲಿ ತಗಡೂರು ಸಾಕಷ್ಟು ಪ್ರಯತ್ನಿಸಿದ್ದರು. ಯಾವುದೇ ಚುನಾವಣೆ ಇಲ್ಲದೆ ಸಂಘದ ಬೀದರ್ ಜಿಲ್ಲಾ ಘಟಕಕ್ಕೆ ಆನಂದ ದೇವಪ್ಪ ಅವರನ್ನು ನೇಮಕ ಮಾಡಿದ್ದು ಸಂತಸ ತಂದಿದೆ ಎಂದು ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ,

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬೀದರ್ ಜಿಲ್ಲಾ ಘಟಕ ರಚನೆ ಸಂಬಂಧ ಅಡಾಕ್ ಸಮಿತಿ ರಚಿಸಿಸಿದ್ದು, ಈ ಸಮಿತಿಗೆ ಆನಂದ ದೇವಪ್ಪ ಅವರನ್ನು ಮುಖ್ಯಸ್ಥರನ್ನಾಗಿ ಹಾಗೂ ಸದಸ್ಯರಾಗಿ ಅಪ್ಪಾರಾವ ಸೌದಿ, ಶಿವಕುಮಾರ ಸ್ವಾಮಿ ಅವರನ್ನು ನೇಮಿಸಲಾಗಿದೆ ಎಂದು ಹೇಳಿದರು. ಬೀದರ್ ಜಿಲ್ಲೆಯ ಸಂಘದ ಸರ್ವ ಸದಸ್ಯರು ಒಗ್ಗಟ್ಟಿನಿಂದ ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ನೇಮಕ ಮಾಡಲಾಗಿದೆ ಎಂದರು. ಮೂರು ದಶಕಗಳ ಬಸ್ ಪಾಸ್ ಹೋರಾಟವನ್ನು ಸಿದ್ದರಾಮಯ್ಯ ಸರ್ಕಾರ ಜಾರಿಗೆ ತಂದಿದೆ. ಎಲ್ಲಾ ಪತ್ರಕರ್ತರು ಉಚಿತವಾಗಿ ಪ್ರಯಾಣ ಮಾಡಬಹುದು. ಪತ್ರಕರ್ತರಿಗೆ ಆರೋಗ್ಯ ಭಾಗ್ಯ ನೀಡುವ ನಿಟ್ಟಿನಲ್ಲಿ ಸಿಎಂ ಮಾಧ್ಯಮ ಸಂಜೀವಿನಿ ಯೋಜನೆ ಜಾರಿಗೆ ತಂದಿದೆ. ಮಾಧ್ಯಮಪಟ್ಟಿಯಲ್ಲಿ ಇರುವವರೆಗೆ ನಗದು ರಹಿತ ಚಿಕಿತ್ಸೆ ಸೌಲಭ್ಯ ಸಿಗಲಿದೆ. ಎಲ್ಲಾ ಪತ್ರಕರ್ತರಿಗೆ ಈ ಯೋಜನೆಯಡಿ ತರುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹಾಕಲಾಗಿದೆ ಎಂದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ. ಲೋಕೇಶ್, ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಡಾಕ ಕಮಿಟಿ ಮುಖ್ಯಸ್ಥ ಆನಂದ ದೇವಪ್ಪ, ಮಹಾನಗರ ಪಾಲಿಕೆ ಅಧ್ಯಕ್ಷ ಮಹ್ಮದ್ ಗೌಸೊದ್ದೀನ್ ಇತರರಿದ್ದರು.




ಉದಯವಾಹಿನಿ ಚಿತ್ರ

**ದತ್ತಿ ನಿಧಿಯ ಚೆಕ್ ಹಸ್ತಾಂತರ**

**ಮಾಧ್ಯಮ ಸಮಾಜದಲ್ಲಿ ಪರಿವರ್ತನೆ ತರುವಲ್ಲಿ ಅಪಾರ ಕೊಡುಗೆ ಇದೆ. ಮಹಾತ್ಮ ಗಾಂಧಿ ಡಾ.ಅಂಬೇಡ್ಕರ್ ಸೇರಿದಂತೆ ಹಲವರು ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ಸುಧಾರಣೆ ಮಾಡುವ ಕೆಲಸ ಮಾಧ್ಯಮ ಮಾಡುತ್ತಿದೆ. ಪತ್ರಕರ್ತರಿಗೆ ಸೂಕ್ತ ಭದ್ರತೆ, ರಕ್ಷಣೆ ಕೊಡುವ ಕೆಲಸ ಮಾಡಬೇಕಾಗಿದೆ. –ಈಶ್ವರ ಖಂಡ್ರೆ**

# ಇಂಡಿಗೋ ವಿಮಾನಗಳ ರದ್ದತಿಯಿಂದಾಗಿ ಪ್ರಯಾಣಿಕರಿಗೆ ತೀವ್ರ ತೊಂದರೆ

**ಹೊಸದಿಲ್ಲಿ:** ಇಂಡಿಗೋ ವಿಮಾನಗಳ ರದ್ದತಿಯಿಂದ ಉಂಟಾದ ಸಮಸ್ಯೆಗೆ ಪರಿಹಾರವಾಗಿ, ಭಾರತೀಯ ರೈಲ್ವೇಯು ಶನಿವಾರದಿಂದ ಮೂರು ದಿನಗಳ ಕಾಲ 89 ವಿಶೇಷ ರೈಲುಗಳನ್ನು ಓಡಿಸಿದೆ. ಈ ರೈಲುಗಳು ದೇಶದ ವಿವಿಧ ರೈಲ್ವೆ ವಲಯಗಳಲ್ಲಿ 100ಕ್ಕೂ ಹೆಚ್ಚು ಪ್ರವಾಸಗಳನ್ನು ಕೈಗೊಳ್ಳಲಿವೆ. ಪ್ರಯಾಣಿಕರ ಅನುಕೂಲಕ್ಕಾಗಿ ಕೇಂದ್ರ ರೈಲ್ವೇಯು ಗರಿಷ್ಠ 14 ವಿಶೇಷ ರೈಲುಗಳನ್ನು ನಿರ್ವಹಿಸಲಿದೆ. ಇದರಲ್ಲಿ ಪುಣೆ-ಬೆಂಗಳೂರು, ಪುಣೆ-ಹಜರತ್ ನಿಜಾಮುದ್ದೀನ್, ಲೋಕಮಾನ್ಯ ಟಿಳಕ್ ಟರ್ಮಿನಸ್ -ಮಡಗಾಂವ್, ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್ -ಹಜರತ್ ನಿಜಾಮುದ್ದೀನ್, ಎಲ್‌ಟಿಟಿ-ಲಕ್ನೋ, ನಾಗ್ಪುರ- ಸಿಎಸ್‌ಎಂಟಿ, ಗೋರಖ್‌ಪುರ- ಎಲ್‌ಟಿಟಿ, ಬಿಲಾಸ್‌ಪುರ ಎಲ್‌ಟಿಟಿ ಸೇರಿವೆ.

**ರೈಲು ಸೇವೆಗಳು ಹೀಗಿವೆ:** ಇದೇ ರೀತಿ, ಆಗ್ನೇಯ ರೈಲ್ವೇಯು ಹೌರಾಸಿ ಎಸ್‌ಎಂಟಿ, ಮತ್ತು ಚೆರಲಾಪಲ್ಲಿ ಶಾಲೀಮಾರ್ ರೈಲುಗಳನ್ನು ಓಡಿಸಲಿದೆ. ದಕ್ಷಿಣ ಮಧ್ಯ ರೈಲ್ವೇಯು ಚೆರಲಾಪಲ್ಲಿಯಿಂದ ಶಾಲೀಮಾರ್‌ಗೆ,



ಸಿಕಿಂದರಾಬಾದ್‌ನಿಂದ ಚೆನ್ನೈ ಎಗ್ಮೋರ್‌ಗೆ, ಮತ್ತು ಹೈದರಾಬಾದ್‌ನಿಂದ ಮುಂಬೈ ಎಲ್‌ಟಿಟಿಗೆ ಮೂರು ವಿಶೇಷ ರೈಲುಗಳನ್ನು ಓಡಿಸಿ ಪ್ರಯಾಣಿಕರ ದಟ್ಟಣೆಯನ್ನು ನಿರ್ವಹಿಸಿದೆ. ಪೂರ್ವ ರೈಲ್ವೇಯು ಹೌರಾ, ಸೀಲ್ದಾ ಮತ್ತು ಪ್ರಮುಖ ತಾಣಗಳ ನಡುವೆ ವಿಶೇಷ ರೈಲು ಸೇವೆಗಳನ್ನು ಒದಗಿಸಲಿದೆ. ಪಶ್ಚಿಮ ರೈಲ್ವೇಯು ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಏಳು ವಿಶೇಷ ರೈಲುಗಳನ್ನು ಓಡಿಸಲಿದೆ. ಇದಲ್ಲದೆ, ಬಿಹಾರದಿಂದ ಚಳಿಗಾಲದ ಪ್ರಯಾಣವನ್ನು ಸುಗಮಗೊಳಿಸಲು, ಈಶಾನ್ಯ ರೈಲ್ವೇಯು ಪಾಟ್ನಾ ಮತ್ತು ದರ್ಭಾಂಗಾದಿಂದ ಆನಂದ್ ವಿಹಾರ್ ಟರ್ಮಿನಲ್‌ಗೆ ವಿಶೇಷ ರೈಲುಗಳನ್ನು ಓಡಿಸಲಿದೆ.

ವಾಯುವ್ಯ ರೈಲ್ವೇಯು ಮುಂಬರುವ ಪ್ರಯಾಣದ ಅವಧಿಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಒಂದು-ಬಾರಿ ಪ್ರಯಾಣದ ಆಧಾರದ ಮೇಲೆ ಎರಡು ವಿಶೇಷ ದರ ವಿಶೇಷ ರೈಲುಗಳನ್ನು ಓಡಿಸಲಿದೆ. ಪಶ್ಚಿಮ ರೈಲ್ವೇಯು ಭಾನುವಾರ ದುರ್ಗಾಪುರ-ಬಾಂದ್ರಾ ಟರ್ಮಿನಸ್ ವಿಶೇಷ ರೈಲನ್ನು ಒಂದು-ಬಾರಿ ಓಡಿಸಲಿದೆ. ಉತ್ತರ ಮಧ್ಯ ರೈಲ್ವೇಯು ಪ್ರಯಾಗ್‌ರಾಜ್, ನವದೆಹಲಿಯ ನಡುವೆ ವಿಶೇಷ ರೈಲುಗಳನ್ನು ಓಡಿಸಲಿದೆ. ಚೆರಲಾಪಲ್ಲಿಯಿಂದ ಶಲಿಮಾರ್‌ಗೆ ರೈಲು ಸಂಖ್ಯೆ 07148 ಸಂಚರಿಸಲಿದೆ. ಸಿಖಂದರಾಬಾದ್‌ನಿಂದ ಚೆನ್ನೈ ಎಗ್ಮೋರ್‌ಗೆ ರೈಲು ಸಂಖ್ಯೆ 07146 ಸಂಚರಿಸಲಿದೆ. ಹೈದರಾಬಾದ್‌ನಿಂದ ಮುಂಬೈ ಎಲ್‌ಟಿಟಿಗೆ ರೈಲು ಸಂಖ್ಯೆ 07150 ಸಂಚರಿಸಲಿದೆ.

### ಎರಡು ಟ್ರಿಪ್‌ಗಳವರೆಗೆ ಸಂಚಾರ

**ಗೋರಖ್‌ಪುರದಿಂದ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು, ಭಾರತೀಯ ರೈಲ್ವೆ ಹೆಚ್ಚುವರಿ ಸೇವೆಗಳನ್ನು ಯೋಜಿಸಿದೆ. ಗೋರಖ್‌ಪುರ ಮತ್ತು ಆನಂದ್ ವಿಹಾರ್ ಟರ್ಮಿನಲ್ ನಡುವೆ 05591/05592 ರೈಲು ಎರಡು ಟ್ರಿಪ್‌ಗಳವರೆಗೆ ಸಂಚರಿಸಲಿದೆ. ಈ ರೈಲು ಡಿಸೆಂಬರ್ 7 ಮತ್ತು 8 ರಂದು ಗೋರಖ್ ಪುರದಿಂದ ಹೊರಡಲಿದೆ, ಡಿಸೆಂಬರ್ 8, 9 ರಂದು ಆನಂದ್ ವಿಹಾರ್ ಟರ್ಮಿನಲ್‌ನಿಂದ ಹೊರಡಲಿದೆ. ಗೋರಖ್‌ಪುರ, ಎಲ್‌ಟಿಟಿ ನಡುವೆ 05587/05588 ರೈಲು ಗೋರಖ್‌ಪುರದಿಂದ, ಡಿಸೆಂಬರ್ 9 ರಂದು ಎಲ್‌ಟಿಟಿಯಿಂದ ಹೊರಡಲಿದೆ.**

## ಷೇರು ಮಾರುಕಟ್ಟೆ ಪ್ರವೇಶಿಸಲು ತಯಾರಿ

**ವಾಷಿಂಗ್ಟನ್ :** ವಿಶ್ವದ ಅತ್ಯಂತ ಮೌಲ್ಯಯುತ ಖಾಸಗಿ ಕಂಪನಿಗಳಲ್ಲಿ ಒಂದಾದ ನಂತರ, ಎಲೋನ್ ಮಸ್ಕ್ ಅವರ ಬಾಹ್ಯಾಕಾಶ ತಂತ್ರಜ್ಞಾನ ಕಂಪನಿ ಸ್ಪೇಸ್‌ಎಕ್ಸ್ ಈಗ ಷೇರು ಮಾರುಕಟ್ಟೆಯನ್ನು ಪ್ರವೇಶಿಸಲು ತಯಾರಿ ನಡೆಸುತ್ತಿದೆ. ಮಾರುಕಟ್ಟೆ ಮೂಲಗಳ ಪ್ರಕಾರ, ಸ್ಪೇಸ್‌ಎಕ್ಸ್ ಆರಂಭಿಕ ಸಾರ್ವಜನಿಕ ಕೊಡುಗೆ 2026ರ ಅಂತ್ಯದ ವೇಳೆಗೆ ಸಂಭವಿಸಬಹುದು. ಅದಕ್ಕೂ ಮೊದಲು, ಕಂಪನಿಯು ತನ್ನ ಆಂತರಿಕ ಷೇರುಗಳನ್ನು ಮಾರಾಟ ಮಾಡುವ ಮೂಲಕ ತನ್ನ ಮೌಲ್ಯಮಾಪನವನ್ನು ಮತ್ತಷ್ಟು ಹೆಚ್ಚಿಸುವ ಯೋಜನೆಯಲ್ಲಿ ಕೆಲಸ ಮಾಡುತ್ತಿದೆ. ವರದಿಗಳ ಪ್ರಕಾರ, ಸ್ಪೇಸ್ ಎಕ್ಸ್ ಅಸ್ತಿತ್ವದಲ್ಲಿರುವ ಹೂಡಿಕೆದಾರರು ಮತ್ತು ಉದ್ಯೋಗಿಗಳಿಗೆ ಆಂತರಿಕ ಷೇರು ಮಾರಾಟದ ಮೂಲಕ ತಮ್ಮ ಪಾಲನ್ನು ಮಾರಾಟ ಮಾಡಲು ಅವಕಾಶ ನೀಡುತ್ತದೆ. ಈ ಕ್ರಮವು ಕಂಪನಿಯ ಮೌಲ್ಯಮಾಪನವನ್ನು 500 ಬಿಲಿಯನ್‌ನಿಂದ 750 ರಿಂದ 800 ಬಿಲಿಯನ್‌ಗೆ ಹೆಚ್ಚಿಸಬಹುದು. ಇದು ಸಂಭವಿಸಿದಲ್ಲಿ, ಸ್ಪೇಸ್ ಎಕ್ಸ್ ವಿಶ್ವದ ಅತ್ಯಂತ ಮೌಲ್ಯಯುತ ಖಾಸಗಿ ಕಂಪನಿಯಾಗಬಹುದು. ಆಂತರಿಕ ಷೇರು ಮಾರಾಟವು ಮೌಲ್ಯಮಾಪನಗಳನ್ನು ಹೆಚ್ಚಿಸುತ್ತದೆ.

ಬ್ಲೂಮ್‌ಬರ್ಗ್ ವರದಿಯ ಪ್ರಕಾರ, ಸ್ಪೇಸ್‌ಎಕ್ಸ್ ತನ್ನ ಕೆಲವು ಷೇರುದಾರರಿಗೆ ಖಾಸಗಿಯಾಗಿ ಷೇರುಗಳನ್ನು ಮಾರಾಟ ಮಾಡುವ ಅವಕಾಶವನ್ನು ನೀಡುವ ಬಗ್ಗೆ ಪರಿಗಣಿಸುತ್ತಿದೆ. ಟೆಂಡರ್ ಆಫರ್ ಎಂದು ಕರೆಯಲ್ಪಡುವ ಈ ಪ್ರಕ್ರಿಯೆಯು ಕಂಪನಿಯು ಸಾರ್ವಜನಿಕರೊಂದಿಗೆ ನೇರವಾಗಿ ವ್ಯವಹರಿಸುವ ಬದಲು ಸೀಮಿತ ಸಂಖ್ಯೆಯ ಹೂಡಿಕೆದಾರರೊಂದಿಗೆ ವ್ಯವಹರಿಸುವುದನ್ನು ಒಳಗೊಂಡಿರುತ್ತದೆ. ಸಂಭಾವ್ಯ ಷೇರು ಬೆಲೆ ಪ್ರತಿ ಷೇರಿಗೆ 400 ಮೀರಬಹುದು ಎಂದು ಮೂಲಗಳು ಹೇಳುತ್ತವೆ. ಈ ಬೆಲೆಯನ್ನು ಅಂತಿಮಗೊಳಿಸಿದರೆ, ಕಂಪನಿಯ ಒಟ್ಟು ಮೌಲ್ಯಮಾಪನವು 750 ರಿಂದ 800 ಬಿಲಿಯನ್ ವರೆಗೆ ತಲುಪಬಹುದು. ಈ ಅಂಕಿ ಅಂಶವು ಜುಲೈ 2024 ರಲ್ಲಿ ಸ್ಪೇಸ್‌ಎಕ್ಸ್ ಪ್ರತಿ ಷೇರಿಗೆ 212 ರಂತೆ ಸುಮಾರು 400 ಬಿಲಿಯನ್ ಮೌಲ್ಯಮಾಪನವನ್ನು ಸಾಧಿಸಿದಾಗ ಹಿಂದಿನ ನಿಧಿಯ ಸುತ್ತಿಗಿಂತ ಸುಮಾರು ಎರಡು ಪಟ್ಟು ಹೆಚ್ಚಾಗಿದೆ. ವರದಿಯ ಪ್ರಕಾರ, ಸ್ಪೇಸ್ ಎಕ್ಸ್‌ನ ನಿರ್ದೇಶಕರ ಮಂಡಳಿಯು ಟೆಕ್ಸಾಸ್‌ನಲ್ಲಿರುವ ಅದರ ಸ್ಟಾರ್‌ಬೇಸ್ ಕೇಂದ್ರದಲ್ಲಿ ಆಂತರಿಕ ಷೇರು ಮಾರಾಟ ಮತ್ತು ಭವಿಷ್ಯದ ಬಂಡವಾಳ ಸಂಗ್ರಹಣೆ ತಂತ್ರಗಳನ್ನು ಚರ್ಚಿಸಲು ಪ್ರಮುಖ ಸಭೆಯನ್ನು ನಡೆಸಿತು. ಆದಾಗ್ಯೂ, ಕಂಪನಿಯು ಇನ್ನೂ ಐಪಿಒ ಅಥವಾ ಷೇರು ಮಾರಾಟದ ಕುರಿತು ಯಾವುದೇ ಅಧಿಕೃತ ಘೋಷಣೆಗಳನ್ನು ಮಾಡಿಲ್ಲ.




# ಯಾವುದೇ ಗ್ಯಾರಂಟಿ ಇಲ್ಲದೆ ಸಾಲ

### ಭಾರತದ ಬೆಳವಣಿಗೆಯ ದರವನ್ನು ಹಿಂದೂ ಬೆಳವಣಿಗೆಯ ದರ ಎಂದು ಕರೆಯುವುದು ಧರ್ಮಕ್ಕೆ ಮಾಡುವ ಅಪಮಾನ

**ನವದೆಹಲಿ:** ಭಾರತದ ಬೆಳವಣಿಗೆಯ ದರವನ್ನು ಹಿಂದೂ ಧರ್ಮದೊಂದಿಗೆ ಜೋಡಿಸುವುದನ್ನು ಪ್ರಧಾನಿ ನರೇಂದ್ರ ಮೋದಿ ತೀವ್ರವಾಗಿ ಟೀಕಿಸಿದ್ದಾರೆ. ಹಿಂದೂಸ್ತಾನ್ ಟೈಮ್ಸ್ ಲೀಡರ್‌ಶಿಪ್ ಶೃಂಗಸಭೆಯ 23ನೇ ಆವೃತ್ತಿಯಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೆಲವು ದಶಕಗಳ ಹಿಂದೆ ಭಾರತದ ನಿಧಾನಗತಿಯ ಬೆಳವಣಿಗೆಯನ್ನು ಹಿಂದೂ ಬೆಳವಣಿಗೆಯ ದರ ಎಂದು ಕರೆಯುವ ಮೂಲಕ ಹಿಂದೂ ಜೀವನ ವಿಧಾನವನ್ನು ಅಪಖ್ಯಾತಿಗೆ ಒಳಪಡಿಸುವ ಪ್ರಯತ್ನ ನಡೆಯುತ್ತಿದೆ ಎಂದು ಪ್ರಧಾನಿ ಹೇಳಿದರು. 1950ರಿಂದ 1980ರ ದಶಕದ ನಡುವೆ ಇದ್ದ ಭಾರತದ ಕಡಿಮೆ ಆರ್ಥಿಕ ಬೆಳವಣಿಗೆಯ (ಸುಮಾರು 4% ವಾರ್ಷಿಕ) ದರವನ್ನು ಸೂಚಿಸಲು ಅರ್ಥಶಾಸ್ತ್ರಜ್ಞ ರಾಜ್ ಕೃಷ್ಣ ಅವರು ಈ ಪದವನ್ನು ಸೃಷ್ಟಿಸಿದ್ದರು.

**ಹಿಂದಿನ ಸರ್ಕಾರ ನಾಗರಿಕರ ಮೇಲೆ ನಂಬಿಕೆ ಇಟ್ಟಿರಲಿಲ್ಲ:** ಪ್ರಧಾನಿ ಮೋದಿ ಅವರು ಹಿಂದಿನ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಮಾತನಾಡುತ್ತಾ, ಹಿಂದಿನ ವ್ಯವಸ್ಥೆಗಳು ತಮ್ಮದೇ ನಾಗರಿಕರ ಮೇಲೆ ನಂಬಿಕೆ ಇಟ್ಟಿರಲಿಲ್ಲ ಎಂದು ಟೀಕಿಸಿದರು. ನಮ್ಮ ಸರ್ಕಾರವು ಆ ರೀತಿಯ ಕೆಲಸ ಮಾಡುವ ವಿಧಾನವನ್ನು ಮುರಿದಿದೆ. ಒಂದು ನಾಗರಿಕನು ಸ್ವಯಂ ದೃಢೀಕರಿಸಿದ ದಾಖಲೆಯೇ ಅದರ ಸತ್ಯಾಸತ್ಯತೆಯನ್ನು ಸಾಬೀತುಪಡಿಸಲು ಸಾಕು, ಎಂದು ಅವರು ಘೋಷಿಸಿದರು. ಸರ್ಕಾರದ ಅತಿ ದೊಡ್ಡ ಆಯಾಮ ಎಂದರೆ ನಾಗರಿಕರು ಅದರ ಮೇಲೆ ಇಡುವ ವಿಶ್ವಾಸ ಎಂದು ಪ್ರಧಾನಿ ಒತ್ತಿ ಹೇಳಿದರು.



**ಗ್ಯಾರಂಟಿ-ಮುಕ್ತ ಸಾಲಗಳು ಮತ್ತು ಹಣಕಾಸು ಸೇರ್ಪಡೆ:** ಯಾವುದೇ ಗ್ಯಾರಂಟಿ-ಮುಕ್ತ ಸಾಲಗಳ ಪರಿವರ್ತಕ ಪರಿಣಾಮವನ್ನು ಪ್ರಧಾನಿ ಮೋದಿ ಒತ್ತಿ ಹೇಳಿದರು. ಸಣ್ಣ ಮಾರಾಟಗಾರರು, ಬೀದಿಬದಿ ವ್ಯಾಪಾರಿಗಳು ಮತ್ತು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಈಗಾಗಲೇ 37 ಲಕ್ಷ ಕೋಟಿ ರೂ.ಸಾಲವನ್ನು ವಿತರಿಸಲಾಗಿದೆ ಎಂದು ಅವರು ಹೇಳಿದರು.

ಕೇವಲ 1,000ರೂ. ಕೇಳುವವರಿಗೂ ಯಾವುದೇ ಗ್ಯಾರಂಟಿ ಇಲ್ಲದೆ ಸಾಲ ದೊರೆಯುತ್ತಿದೆ.

ಇದು ತನ್ನ ಜನರ ಮೇಲೆ ವಿಶ್ವಾಸ ಇಡುವ ಆಡಳಿತ ಎಂದು ಘೋಷಿಸುವ ಮೂಲಕ ಆಡಳಿತವು ಹಣಕಾಸು ಸೇರ್ಪಡೆಗೆ ನೀಡಿರುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

### ಕ್ಲೇಮ್ ಮಾಡದ ಹಣವನ್ನು ಮರಳಿ ಪಡೆಯಲು ನೆರವು


**ಇದೇ ವೇಳೆ ಬ್ಯಾಂಕುಗಳಲ್ಲಿ ಕ್ಲೇಮ್ ಮಾಡದೇ ಇರುವ ಹಣದ ಬಗ್ಗೆ ವಿಷಯ ಪ್ರಸ್ತಾಪಿಸಿದ ಮೋದಿ ಅವರು ಆಘಾತಕಾರಿ ಅಂಕಿಅಂಶಗಳನ್ನು ಬಹಿರಂಗಪಡಿಸಿದರು. 78,000 ಕೋಟಿ ರೂ. ಬ್ಯಾಂಕ್‌ಗಳಲ್ಲಿ, 14,000 ಕೋಟಿ ರೂ. ವಿಮಾ ಕಂಪನಿಗಳಲ್ಲಿ, 3,000 ಕೋಟಿ ರೂ.ಮ್ಯೂಚುವಲ್ ಫಂಡ್‌ಗಳಲ್ಲಿ, ಮತ್ತು 9,000 ಕೋಟಿ ರೂ. ಡಿವಿಡೆಂಡ್‌ಗಳಲ್ಲಿ ಬಾಕಿ ಉಳಿದಿವೆ. ನಾಗರಿಕರು ತಮ್ಮ ನ್ಯಾಯಯುತ ಗಳಿಕೆಗಳನ್ನು ಮರಳಿ ಪಡೆಯಲು ಸಹಾಯ ಮಾಡಲು ಸರ್ಕಾರವು ವಿಶೇಷ ಜಿಲ್ಲಾ ಮಟ್ಟದ ಶಿಬಿರಗಳನ್ನು ಪ್ರಾರಂಭಿಸಿದೆ ಮತ್ತು ಈಗಾಗಲೇ ಸಾವಿರಾರು ಕೋಟಿ ಹಣವನ್ನು ಹಿಂದಿರುಗಿಸಲಾಗಿದೆ ಎಂದು ಅವರು ಹೇಳಿದರು. ಇದು ತಮ್ಮ ಕಷ್ಟಪಟ್ಟು ಗಳಿಸಿದ ಹಣವನ್ನು ಪಡೆಯಲು ಜನರನ್ನು ಹುಡುಕುತ್ತಿರುವ ಮೋದಿ, ಎಂದು ಪ್ರಧಾನ ಮಂತ್ರಿಯವರು ಬಲವಾಗಿ ಪ್ರತಿಪಾದಿಸಿದರು.**

> **ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಬೆಳವಣಿಗೆಯ ದರವನ್ನು ಹಿಂದೂ ಧರ್ಮಕ್ಕೆ ಜೋಡಿಸುವುದನ್ನು ತೀವ್ರವಾಗಿ ಖಂಡಿಸಿದ್ದಾರೆ. ಹಿಂದಿನ ಸರ್ಕಾರಗಳು ತಮ್ಮ ನಾಗರಿಕರ ಮೇಲೆ ನಂಬಿಕೆ ಇಡುತ್ತಿರಲಿಲ್ಲ ಎಂದು ಅವರು ಟೀಕಿಸಿದರು. ಗ್ಯಾರಂಟಿ ಇಲ್ಲದ ಸಾಲಗಳು ಮತ್ತು ಹಣಕಾಸು ಸೇರ್ಪಡೆಗೆ ಒತ್ತು ನೀಡಲಾಗಿದೆ. ಬ್ಯಾಂಕುಗಳಲ್ಲಿ ಕ್ಲೇಮ್ ಮಾಡದ ಹಣವನ್ನು ನಾಗರಿಕರಿಗೆ ಹಿಂದಿರುಗಿಸಲು ಸರ್ಕಾರ ವಿಶೇಷ ಶಿಬಿರಗಳನ್ನು ನಡೆಸುತ್ತಿದೆ.**
> -ನರೇಂದ್ರ ಮೋದಿ, ಪ್ರಧಾನ ಮಂತ್ರಿ

## ನೃತ್ಯ ಮಾಡುತ್ತಿದ್ದಾಗ ಮೃತ್ಯು ನರ್ತನ

**ಪಣಜಿ:** ನೈಟ್‌ಕ್ಲಬ್‌ನಲ್ಲಿ ಬೆಂಕಿ ಕಾಣಿಸಿಕೊಂಡಾಗ ಕನಿಷ್ಠ 100 ಜನರು ನೃತ್ಯ ಮಹಡಿಯಲ್ಲಿದ್ದರು ಮತ್ತು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಅವರಲ್ಲಿ ಕೆಲವರು ಕೆಳಗಡೆಗೆ ಇದ್ದ ಅಡುಗೆಮನೆಗೆ ಓಡಿಹೋಗಿ ಅಲ್ಲಿ ಸಿಬ್ಬಂದಿಯೊಂದಿಗೆ ಸಿಕ್ಕಿಹಾಕಿಕೊಂಡರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಪ್ರವಾಸಿಗರು ನೃತ್ಯ ಮಾಡುತ್ತಿದ್ದ ಕ್ಲಬ್‌ನ ಮೊದಲ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಕೆಲವು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಬೆಂಕಿ ಜ್ವಾಲೆ ಕಾಣುತ್ತಿದ್ದಂತೆ ಗದ್ದಲ ಉಂಟಾಯಿತು. ನಾವು ಕ್ಲಬ್‌ನಿಂದ ಹೊರಗೆ ಓಡಿಹೋದಾಗ ಇಡೀ ಕಟ್ಟಡಕ್ಕೆ ಬೆಂಕಿ ಹೊತ್ತಿಕೊಂಡಿರುವುದನ್ನು ನೋಡಿದೆವು ಎಂದು ಹೈದರಾಬಾದ್‌ನ ಪ್ರವಾಸಿ ಫಾತಿಮಾ ಶೇಖ್ ಮಾಧ್ಯಮಕ್ಕೆ ತಿಳಿಸಿದರು. ವಾರಾಂತ್ಯವಾಗಿದ್ದರಿಂದ ನೈಟ್‌ಕ್ಲಬ್ ಕಿಕ್ಕಿರಿದು ತುಂಬಿತ್ತು ಮತ್ತು ಕನಿಷ್ಠ 100 ಜನರು ನೃತ್ಯ ಮಹಡಿಯಲ್ಲಿದ್ದರು ಎಂದು ಅವರು ಹೇಳಿದರು.



ಬೆಂಕಿ ಹೊತ್ತಿಕೊಂಡ ನಂತರ, ಕೆಲವು ಪ್ರವಾಸಿಗರು ಕೆಳಗೆ ಓಡಲು ಪ್ರಾರಂಭಿಸಿದರು ಮತ್ತು ಗಲಿಬಿಲಿಯಲ್ಲಿ, ನೆಲ ಮಹಡಿಯಲ್ಲಿರುವ ಅಡುಗೆಮನೆಗೆ ಹೋದರು ಎಂದು ಶೇಖ್ ಹೇಳಿದರು. ಅವರು ಇತರ ಸಿಬ್ಬಂದಿಯೊಂದಿಗೆ ಅಲ್ಲಿ ಸಿಕ್ಕಿಹಾಕಿಕೊಂಡರು. ಅನೇಕರು ಕ್ಲಬ್‌ನಿಂದ ಹೊರಗೆ ಓಡಿಹೋಗುವಲ್ಲಿ ಯಶಸ್ವಿಯಾದರು ಎಂದು ಅವರು ವಿವರಿಸಿದರು. ತಾಳೆ ಎಲೆಗಳಿಂದ ಮಾಡಲ್ಪಟ್ಟ ತಾತ್ಕಾಲಿಕ ನಿರ್ಮಾಣವಿತ್ತು, ಅದು ಸುಲಭವಾಗಿ ಬೆಂಕಿ ಹೊತ್ತಿಕೊಲು ಸಾಧ್ಯವಾಗಿದೆ. ನೈಟ್‌ಕ್ಲಬ್ ಅರ್ಪೋರಾ ನದಿಯ ಹಿನ್ನೀರಿನಲ್ಲಿದೆ ಮತ್ತು ಕಿರಿದಾದ ಪ್ರವೇಶ ಮತ್ತು ನಿರ್ಗಮನ ಮಾರ್ಗವನ್ನು ಹೊಂದಿದೆ. ಕಿರಿದಾದ ಲೇನ್‌ಗಳ ಕಾರಣ ಸುಮಾರು 400 ಮೀಟರ್ ದೂರದಲ್ಲಿ ಅಗ್ನಿಶಾಮಕ ಟ್ಯಾಂಕರ್ ವಾಹನ ನಿಲ್ಲಿಸಬೇಕಾಗಿ ಬಂತು.

ಇದರಿಂದ ಬೆಂಕಿಯನ್ನು ನಿಯಂತ್ರಿಸುವುದು ಸವಾಲಿನ ಕೆಲಸವಾಗಿತ್ತು ನೆಲ ಮಹಡಿಯಲ್ಲಿ ಸಿಲುಕಿಕೊಂಡಿದ್ದರಿಂದ ಹೆಚ್ಚಿನ ಸಾವುಗಳು ಉಸಿರುಗಟ್ಟುವಿಕೆಯಿಂದ ಸಂಭವಿಸಿವೆ ಎಂದು ಅವರು ಹೇಳಿದರು. ಅರ್ಪೋರಾ-ನಾಗೋವಾ ಪಂಚಾಯತ್ ಅಧ್ಯಕ್ಷ ರೋಶನ್ ರೆಡ್ಕರ್, ಸೌರವ್ ಲುಥ್ರಾ ಈ ಕ್ಲಬ್ ನಡೆಸುತ್ತಿದ್ದರು.

ಅವರು ತಮ ಪಾಲುದಾರರೊಂದಿಗೆ ವಿವಾದ ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ನಾವು ಆವರಣವನ್ನು ಪರಿಶೀಲಿಸಿದ್ದೇವೆ, ಕ್ಲಬ್ ನಿರ್ಮಿಸಲು ಅವರಿಗೆ ಅನುಮತಿ ಇಲ್ಲ ಎಂದು ಕಂಡುಬಂದಿದೆ ಎಂದು ಅವರು ನುಡಿದರು.


ಇದನ್ನು ಕೆಡವಲು ನೋಟಿಸ್ ನೀಡಲಾಗಿತ್ತು. ಪಂಚಾಯತ್ ನಿರ್ದೇಶನಾಲಯದ ಅಧಿಕಾರಿಗಳು ಅದನ್ನು ತಡೆಹಿಡಿದಿದ್ದಾರೆ ಎಂದು ತಿಳಿದುಬಂದಿದೆ. ಆವರಣದ ಮೂಲ ಮಾಲೀಕರು ಲುಥ್ರಾ ಅವರಿಗೆ ಸ್ಥಳವನ್ನು ಸಬ್‌ಲೀಸ್ ಮಾಡಿದ್ದರು ಎಂದು ತಿಳಿಸಿದರು.

## ಅಮೆರಿಕದಲ್ಲಿ ಅಗ್ನಿ ಅವಘಡ ವಿದ್ಯಾರ್ಥಿನಿ ಸಜೀವ ದಹನ

**ನ್ಯೂಯಾರ್ಕ್:** ಅಮೆರಿಕದ ಆಲ್ಬನಿಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ತೆಲಂಗಾಣ ಮೂಲದ ವಿದ್ಯಾರ್ಥಿನಿಯೊಬ್ಬಳು ಸಾವನ್ನಪ್ಪಿದ್ದಾಳೆ. ಅಗ್ನಿ ಅವಘಡದಲ್ಲಿ ಸಾವನ್ನಪ್ಪಿದ ವಿದ್ಯಾರ್ಥಿನಿಯನ್ನು ತೆಲಂಗಾಣದ ಜನಗಾಂವ್ ಜಿಲ್ಲೆಯ ಸಹಜಾ ರೆಡ್ಡಿ (24) ಎಂದು ಗುರುತಿಸಲಾಗಿದೆ. ಮೊದಲಿಗೆ ಬೆಂಕಿ ಪಕ್ಕದ ಕಟ್ಟಡದಲ್ಲಿ ಕಾಣಿಸಿಕೊಂಡಿದ್ದು, ಸಹಜಾಳ ಮನೆಗೆ ವ್ಯಾಪಿಸಿತ್ತು. ಬೆಂಕಿ ಹೊತ್ತಿಕೊಂಡಾಗ ಆಕೆ ನಿದ್ರೆಯಲ್ಲಿದ್ದಿದ್ದರಿಂದ ಬಚಾವ್ ಆಗಲು ಸಾಧ್ಯವಾಗಿಲ್ಲ ಎಂದು ವರದಿಯಾಗಿದೆ.

ಈ ಬಗ್ಗೆ xನಲ್ಲಿ ಪೋಸ್ಟ್ ಮಾಡಿರುವ ಭಾರತದ ಕಾನ್ಸುಲೇಟ್ ಜನರಲ್, ಆಲ್ಬನಿಯಲ್ಲಿ ನಡೆದ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಭಾರತೀಯ ಮೂಲದ ಸಹಜ ರೆಡ್ಡಿ ಉದುಮಲ ಅವರ ಅಕಾಲಿಕ ನಿಧನದಿಂದ ನಾವು ತೀವ್ರ ದುಃಖಿತರಾಗಿದ್ದೇವೆ. ಈ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಸಂತ್ರಸ್ತೆಯ ಕುಟುಂಬದೊಂದಿಗೆ ಸಂಪರ್ಕದಲ್ಲಿದ್ದು, ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡುವುದಾಗಿ ಕಾನ್ಸುಲೇಟ್ ತಿಳಿಸಿದೆ.

ಸಹಜಾ ಅವರ ಮರಣದಿಂದ ಕುಟುಂಬ ಹಾಗೂ ಗ್ರಾಮ ದುಃಖದಲ್ಲಿ ಮುಳುಗಿದೆ. ಅವರು ಹೈದರಾಬಾದ್‌ನಲ್ಲಿ ಟಿಸಿಎಸ್‌ನಲ್ಲಿ ಉದ್ಯೋಗಿಯಾಗಿರುವ ಉದುಮುಲ ಜಯಕರ್ ರೆಡ್ಡಿ ಮತ್ತು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿ ಗೋಪುಮರಿಯಾ



ಶೈಲಜಾ ಅವರ ಹಿರಿಯ ಮಗಳಾಗಿದ್ದರು. ಸಹಜಾ 2021 ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಿದ್ದರು. ಅವರು ನ್ಯೂಯಾರ್ಕ್‌ನ ಆಲ್ಬನಿಯಲ್ಲಿ ವಾಸವಾಗಿದ್ದರು. ಪೋಷಕರು ವಿದೇಶದಿಂದ ತಮ್ಮ ಮಗಳ ಮೃತದೇಹವನ್ನು ಸ್ವದೇಶಕ್ಕೆ ತರಲು ಸರ್ಕಾರದ ಸಹಾಯ ಕೋರಿದ್ದಾರೆ.

ಸಂತ್ರಸ್ತೆಯ ಕುಟುಂಬಕ್ಕಾಗಿ ಗೋಫಂಡ್‌ಮಿ ರಚನೆ ಸಹಜಾ ಅವರ ಸೋದರಸಂಬಂಧಿ ರತ್ನ ಗೋಪು ಗೋಫಂಡ್ ರಚಿಸಿದ್ದಾರೆ. ಈ ನಿಧಿಯು ಅಂತ್ಯಕ್ರಿಯೆ ಮತ್ತು ಸಾರಿಗೆ ವ್ಯವಸ್ಥೆಗಳು, ಕುಟುಂಬಕ್ಕೆ ಬೆಂಬಲ, ದುರಂತ ಅಪಘಾತದಿಂದ ಉಂಟಾದ ಹೆಚ್ಚುವರಿ ವೆಚ್ಚಗಳ ಭರಿಸಲಿದೆ ಎನ್ನಲಾಗಿದೆ.

## ದೆಹಲಿಯಲ್ಲಿ ನನ್ನ ಗಂಡ 2ನೇ ಮದುವೆ ಆಗ್ತಿದ್ದಾರೆ, ನನಗೆ ನ್ಯಾಯ ಕೊಡಿಸಿ

**ಮೋದಿಗೆ ಪಾಕ್ ಮಹಿಳೆ ಮನವಿ**

**ನವದೆಹಲಿ:** ಪಾಕಿಸ್ತಾನಿ ಮಹಿಳೆಯೊಬ್ಬರು, ತಮ್ಮ ಪತಿ ಕರಾಚಿಯಲ್ಲಿ ತನ್ನನ್ನು ಕೈಬಿಟ್ಟು ದೆಹಲಿಯಲ್ಲಿ ರಹಸ್ಯವಾಗಿ ಎರಡನೇ ಮದುವೆಗೆ ಸಿದ್ಧತೆ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ.

ಅಲ್ಲದೇ, ನನಗೆ ನ್ಯಾಯ ಕೊಡಿಸಿ ಎಂದು ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ ನಿಕಿತಾ ನಾಗ್ದೇವ್ ಹೆಸರಿನ ಮಹಿಳೆ, ಪ್ರಧಾನಿ ನರೇಂದ್ರ ಮೋದಿಯವರಿಂದ ನ್ಯಾಯ ಕೋರಿ ಸೋಷಿಯಲ್ ಮೀಡಿಯಾದಲ್ಲಿ ವಿಡಿಯೋ ಹಂಚಿಕೊಂಡಿದ್ದಾರೆ.

ಕರಾಚಿ ನಿವಾಸಿ ನಿಕಿತಾ, ದೀರ್ಘಾವಧಿಯ ವೀಸಾದ ಮೇಲೆ ಇಂದೋರ್‌ನಲ್ಲಿ ವಾಸಿಸುತ್ತಿದ್ದ ಪಾಕಿಸ್ತಾನಿ ಮೂಲದ ವ್ಯಕ್ತಿ ವಿಕ್ರಮ್ ನಾಗ್ದೇವ್ ಅವರನ್ನು 2020ರ ಜನವರಿ 26 ರಂದು ಕರಾಚಿಯಲ್ಲಿ ಹಿಂದೂ ಪದ್ಧತಿಗಳ ಪ್ರಕಾರ ವಿವಾಹವಾಗಿದರು. ಒಂದು ತಿಂಗಳ ನಂತರ, ವಿಕ್ರಮ್ ಭಾರತಕ್ಕೆ ಬಂದರು. ಅಲ್ಲಿಂದಾಚೆಗೆ ನನ್ನ ಜೀವನವೇ ಹಾಳಾಗಿದೆ ಎಂದು ನಿಕಿತಾ ಆರೋಪಿದ್ದಾರೆ.

ಭಾರತಕ್ಕೆ ಬರಲು ಸಾಕಷ್ಟು ಬಾರಿ ಪ್ರಯತ್ನಿಸಿದೆ. 2020ರಲ್ಲಿ ವೀಸಾ ವಿಚಾರಕ್ಕಾಗಿ ನನ್ನನ್ನು ಅಟ್ಟಾರಿ ಗಡಿಯಲ್ಲೇ ತಡೆದು ಪಾಕಿಸ್ತಾನಕ್ಕೆ ವಾಪಸ್ ಕಳುಹಿಸಲಾಯಿತು.

ಅಂದಿನಿಂದ, ನನ್ನನ್ನು ಭಾರತಕ್ಕೆ ಕರೆಸಿಕೊಳ್ಳುವಂತೆ ವಿಕ್ರಮ್‌ಗೆ ಮನವಿ ಮಾಡುತ್ತಿದ್ದೇನೆ. ಆದರೆ, ಪ್ರತಿ ಬಾರಿಯೂ ಆತ ನಿರಾಕರಿಸುತ್ತಲೇ ಇದ್ದಾನೆ ಎಂದು ವಿಡಿಯೋದಲ್ಲಿ ಭಾವನಾತ್ಮಕವಾಗಿ ಮಹಿಳೆ ಮಾತನಾಡಿದ್ದಾರೆ.

ಈಗ ನನಗೆ ನ್ಯಾಯ ಸಿಗದಿದ್ದರೆ, ಮಹಿಳೆಯರು ನ್ಯಾಯದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಎಷ್ಟೋ ಹೆಣ್ಣುಮಕ್ಕಳು ವಿವಾಹವಾದ ಬಳಿಕ ಮನೆಗಳಲ್ಲಿ ದೈಹಿಕ ಮತ್ತು ಮಾನಸಿಕ ಕಿರುಕುಳ ಅನುಭವಿಸುತ್ತಿದ್ದಾರೆ.



ಎಲ್ಲರೂ ನನ್ನೊಂದಿಗೆ ನಿಲ್ಲಬೇಕೆಂದು ನಾನು ವಿನಂತಿಸುತ್ತೇನೆ ಎಂದು ಮನವಿ ಮಾಡಿಕೊಂಡಿದ್ದಾರೆ. ಮದುವೆಯಾದ ಹೊಸದರಲ್ಲೇ ನನ್ನ ಬಾಳಲ್ಲಿ ಆಘಾತಕಾರಿ ಘಟನೆಗಳು ನಡೆದಿವೆ. ನಾನು ಪಾಕಿಸ್ತಾನದಿಂದ ಅತ್ತೆಯ ಮನೆಗೆ ಹೋದಾಗ ಅವರ ನಡವಳಿಕೆಯಲ್ಲಿ ಸಂಪೂರ್ಣ ಬದಲಾವಣೆ ಕಂಡಿತು. ನನ್ನ ಗಂಡನಿಗೆ ಬೇರೊಬ್ಬರ ಜೊತೆ ಸಂಬಂಧ ಇರುವುದು ತಿಳಿಯಿತು.

ಈ ವಿಚಾರವನ್ನು ಮಾವನಿಗೆ ತಿಳಿಸಿದರೆ, ಹುಡುಗರಿಗೆ ಅಕ್ರಮ ಸಂಬಂಧವಿರುತ್ತದೆ.. ಏನೂ ಮಾಡಲು ಸಾಧ್ಯವಿಲ್ಲ ಅಂತ ಹೇಳ್ತಾರೆ ಎಂದು ನಿಕಿತಾ ವಿಡಿಯೋದಲ್ಲಿ ತಿಳಿಸಿದ್ದಾರೆ. ಕೋವಿಡ್-19 ಲಾಕ್‌ಡೌನ್ ಸಂದರ್ಭದಲ್ಲಿ ವಿಕ್ರಮ್ ನನ್ನನ್ನು ಪಾಕಿಸ್ತಾನಕ್ಕೆ ಮರಳುವಂತೆ ಮಾಡಿದ. ಈಗ ಭಾರತಕ್ಕೆ ನಾನು ಬರೋದನ್ನು ನಿರಾಕರಿಸುತ್ತಿದ್ದಾನೆ ಎಂದು ನಿಕಿತಾ ಆರೋಪಿಸಿದ್ದಾರೆ. ಭಾರತದಲ್ಲಿ ಪ್ರತಿಯೊಬ್ಬ ಮಹಿಳೆಗೂ ನ್ಯಾಯ ಸಿಗಬೇಕು ಎಂದು ಮನವಿ ಮಾಡಿದ್ದಾರೆ.


# ಅಕ್ರಮ ವಲಸಿಗರನ್ನು ಗುರುತಿಸಿ, ಅವರನ್ನು ತಡೆಯುವ ವ್ಯವಸ್ಥೆ

### ಉತ್ತರ ಪ್ರದೇಶದಲ್ಲಿಅಕ್ರಮ ಬಾಂಗ್ಲಾದೇಶಿ, ರೋಹಿಂಗ್ಯಾ ನುಸುಳುಕೋರರ ವಿರುದ್ಧ ಕಠಿಣ ಕ್ರಮ : ಯೋಗಿ ಆದೇಶ

**ಲಕ್ನೋ:** ಉತ್ತರ ಪ್ರದೇಶದಲ್ಲಿ ಅಕ್ರಮ ಬಾಂಗ್ಲಾದೇಶಿ, ರೋಹಿಂಗ್ಯಾ ನುಸುಳುಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸಿಎಂ ಯೋಗಿ ಆದಿತ್ಯನಾಥ್ ಅವರು ಹೊಸ ಆದೇಶ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಅಕ್ರಮ ವಲಸಿಗರನ್ನು ಗುರುತಿಸಿ, ಅವರನ್ನು ತಡೆಯಲು ಒಂದು ಸಮನ್ವಯ ವ್ಯವಸ್ಥೆಯನ್ನು ರೂಪಿಸುತ್ತಿದೆ.

**ವ್ಯಾಪಕ ಪರಿಶೀಲನಾ ಅಭಿಯಾನ:** ಪ್ರಸ್ತುತ ನಡೆಯುತ್ತಿರುವ ವ್ಯಾಪಕ ಪರಿಶೀಲನಾ ಅಭಿಯಾನವು, ಅಕ್ರಮ ನುಸುಳುಕೋರರ ಸುಸಂಘಟಿತ ಜಾಲವನ್ನು ಬಯಲು ಮಾಡಿದೆ. ಅನೇಕ ಜಿಲ್ಲೆಗಳಲ್ಲಿ ದೊಡ್ಡ ಸಂಖ್ಯೆಯ ಬಾಂಗ್ಲಾದೇಶಿ, ರೋಹಿಂಗ್ಯಾ ಶಂಕಿತರನ್ನು ಗುರುತಿಸಲಾಗಿದೆ. ಉತ್ತರ ಪ್ರದೇಶದ ಎಟಿಎಸ್ ಕೂಡ ಕಾರ್ಯಾಚರಣೆ ನಡೆಸಿ, ಹಲವು ರೋಹಿಂಗ್ಯಾ ನುಸುಳುಕೋರರನ್ನು ಬಂಧಿಸಿದೆ. ಇದು ಈ ಜಾಲಗಳ ಆಳ, ಅವುಗಳ ದೀರ್ಘಕಾಲೀನ ಸ್ವರೂಪವನ್ನು ಬಹಿರಂಗಪಡಿಸಿದೆ.

ಈ ಕಾರ್ಯಾಚರಣೆಯು ಪ್ರಸ್ತುತ ನಡೆಯುತ್ತಿರುವ ಚಟುವಟಿಕೆಗಳನ್ನು ಪತ್ತೆಹಚ್ಚುವುದಲ್ಲದೆ, ವರ್ಷಗಳಿಂದ ಇಂತಹ ನುಸುಳುವಿಕೆಗೆ ಸಹಾಯ ಮಾಡುತ್ತಿರುವ ಬೆಂಬಲ ವ್ಯವಸ್ಥೆಗಳ ಪದರಗಳನ್ನು ಸಹ ಅನಾವರಣಗೊಳಿಸುತ್ತಿದೆ. ಈ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಮತ್ತು ಕಾನೂನುಬದ್ಧವಾಗಿ ನಡೆಸಲು, ರಾಜ್ಯ ಸರ್ಕಾರವು ಪ್ರತಿ ವಿಭಾಗದಲ್ಲೂ ಬಂಧನ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಅಲ್ಲಿ ಬಂಧಿತರಾದ ಅಕ್ರಮ ವಲಸಿಗರನ್ನು ಎಲ್ಲಾ ಕಾನೂನು ಪ್ರಕ್ರಿಯೆಗಳು ಪೂರ್ಣಗೊಳ್ಳುವವರೆಗೆ ಇರಿಸಲಾಗುತ್ತದೆ. ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ ಗಡಿಪಾರು ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲಾಧಿಕಾರಿಗಳಿಗೆ ಪ್ರತಿ ದಿನ ಗೃಹ ಇಲಾಖೆಗೆ ವರದಿ ಸಲ್ಲಿಸಲು ಸೂಚನೆ ನೀಡಲಾಗಿದೆ.



> **ಪಶ್ಚಿಮ ಬಂಗಾಳದಲ್ಲಿ ನಡೆದ ಎನ್‌ಆರ್‌ಸಿ ಪ್ರಕ್ರಿಯೆಯ ನಂತರ ಅನೇಕರು ಉತ್ತರ ಪ್ರದೇಶಕ್ಕೆ ನುಸುಳುತ್ತಿದ್ದಾರೆ. ಈ ಕ್ರಮವು ಭಾವನಾತ್ಮಕ, ಪ್ರತಿಕ್ರಿಯಾತ್ಮಕವಲ್ಲ, ಬದಲಿಗೆ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲು ಮತ್ತು ಕಾನೂನು-ಸುವ್ಯವಸ್ಥೆಯನ್ನು ಕಾಪಾಡಲು ಕೈಗೊಂಡ ಗಂಭೀರ ಪ್ರಯತ್ನ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ರಾಷ್ಟ್ರೀಯ ಭದ್ರತೆ ರಾಜಿರಹಿತವಾದುದು ಮತ್ತು ಅಕ್ರಮ ನುಸುಳುವಿಕೆಯನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ.**
> -ಯೋಗಿ ಆದಿತ್ಯನಾಥ್, ಮುಖ್ಯಮಂತ್ರಿ

### ವಲಸಿಗರನ್ನು ಪತ್ತೆಹಚ್ಚುವುದು

**ಈ ಮೊದಲು, ಅಕ್ರಮ ವಲಸಿಗರನ್ನು ಪತ್ತೆಹಚ್ಚುವುದು, ಬಂಧಿಸುವುದು, ಗಡಿಪಾರು ಮಾಡುವುದು ವಿಭಿನ್ನವಾಗಿ ಮತ್ತು ಅಸಮರ್ಥವಾಗಿ ನಡೆಯುತ್ತಿತ್ತು ಎಂದು ಸರ್ಕಾರ ಹೇಳಿದೆ. ಹೊಸ ಮಾದರಿಯು ಈ ಎಲ್ಲಾ ಹಂತಗಳನ್ನು ಏಕೀಕೃತ ಮತ್ತು ಸುಗಮ ವ್ಯವಸ್ಥೆಯ ಅಡಿಯಲ್ಲಿ ತರುತ್ತಿದೆ. ವಿದೇಶಿಯರ ಕಾಯ್ದೆ, 1946ರ ಅಡಿಯಲ್ಲಿಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕಾಯ್ದೆಯ ಪ್ರಕಾರ, ಸಾಕ್ಷ್ಯವನ್ನು ಒದಗಿಸುವ ಜವಾಬ್ದಾರಿ ವ್ಯಕ್ತಿಯ ಮೇಲಿರುತ್ತದೆ. ನುಸುಳುಕೋರರಿಗೆ ನ್ಯಾಯಾಂಗ ಪರಿಹಾರಗಳನ್ನು ಪಡೆಯುವ ಅವಕಾಶವನ್ನು ನೀಡಲಾಗುತ್ತದೆ. ಇದರಿಂದಾಗಿ ಈ ಅಭಿಯಾನವು ದೃಢವಾಗಿದ್ದರೂ ಕಾನೂನುಬದ್ಧವಾಗಿ ಸರಿಯಾಗಿದೆ ಎಂದು ಖಚಿತಪಡಿಸಿಕೊಳ್ಳಲಾಗಿದೆ.**

ಇದರಿಂದ ನಿರಂತರ ಮೇಲ್ವಿಚಾರಣೆ, ಹೆಚ್ಚಿನ ಪಾರದರ್ಶಕತೆ, ವೇಗವಾದ ಪ್ರಗತಿಯನ್ನು ಖಚಿತ ಪಡಿಸಿಕೊಳ್ಳಬಹುದು. ಅಲ್ಲಿ ಈ ಅಕ್ರಮ ವಲಸಿಗರನ್ನು ಗಡಿಪಾರು ಮಾಡುವವರೆಗೆ ಇಡಲಾಗುತ್ತದೆ. ಈ ಕ್ರಮವು ಉತ್ತರ ಪ್ರದೇಶದಲ್ಲಿ ಅಕ್ರಮ ವಲಸಿಗರ ಹಾವಳಿಯನ್ನು ತಡೆಯುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಈ ಕಾರ್ಯಾಚರಣೆಯು ಅಕ್ರಮ ನುಸುಳುವಿಕೆಯನ್ನು ತಡೆಯುವುದಲ್ಲದೆ, ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

## ಮಿನಿ ನ್ಯೂಸ್

### ನನ್ನವರಿಂದಲೇ ನಾನು ಟೀಕೆಗೆ ಗುರಿಯಾಗಿದ್ದೆ: ನ್ಯಾ.ಬಿ.ಆರ್.ಗವಾಯಿ

**ಮುಂಬೈ:** ಪರಿಶಿಷ್ಟ ಜಾತಿಯವರ ಮೀಸಲಾತಿಗೂ ಕೆನೆಪದರ ಅನ್ವಯವಾಗಬೇಕು ಎಂದು ಒಂದು ತೀರ್ಪಿನಲ್ಲಿ ಹೇಳಿದಕ್ಕೆ ತಮ್ಮ ಸಮುದಾಯವರಿಂದಲೇ ಟೀಕೆಗಳನ್ನು ಎದುರಿಸಬೇಕಾಯಿತು ಎಂದು ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹೇಳಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಅವರ ದೃಷ್ಟಿಕೋನದಲ್ಲಿ ಹಿಂದುಳಿದವರಿಗೆ ಬೈಸಿಕಲ್ ಒಂದನ್ನು ಕೊಡುವಂಥದ್ದು ಸದೃಢ ಕ್ರಮವಾಗಿತ್ತು. ಇಂಥ ವ್ಯಕ್ತಿ ಎಂದಿಗೂ ಆ ಬೈಸಿಕಲ್ ಅನ್ನು ಬಿಟ್ಟುಕೊಡಬಾರದು ಎಂಬುದು ಅಂಬೇಡ್ಕರ್ ಅಭಿಪ್ರಾಯವಾಗಿತ್ತೆ? ಎಂದು ಪ್ರಶ್ನಿಸಿದ ಅವರು, ಅಂಬೇಡ್ಕರ್ ಅವರು ಆ ರೀತಿ ಚಿಂತಿಸಲಿಲ್ಲ ಎಂದು ಪ್ರತಿಪಾದಿಸಿದರು.

ಸುಪ್ರಿಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಇತ್ತೀಚೆಗೆ ನಿವೃತ್ತರಾದ ನ್ಯಾ.ಗವಾಯಿ ಅವರು ಸಮಾನ ಅವಕಾಶ ಪ್ರವರ್ಧಿಸುವಲ್ಲಿ ಸದೃಢ ಕ್ರಮದ ಪಾತ್ರ ಎಂಬ ವಿಷಯದ ಕುರಿತು ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ನೀಡುತ್ತಿದ್ದರು. ಡಾ.ಅಂಬೇಡ್ಕರ್ ಅವರಿಗೆಅ ವರ ಪುಣ್ಯ ತಿಥಿಯಂದು ಶ್ರದ್ಧಾಂಜಲಿ ಸಲ್ಲಿಸಿದ ನ್ಯಾ.ಗವಾಯಿ ಅವರು, ಈ ಮಾದರಿ ನಾಯಕ ಭಾರತದ ಸಂವಿಧಾನ ಶಿಲ್ಪಿಯಷ್ಟೆ ಅಲ್ಲ, ಅದರಲ್ಲಿ ಅಡಗಿರುವ ಸದೃಢ ಕ್ರಮಗಳ ಪ್ರತಿಪಾದಕರೂ ಆಗಿದ್ದಾರೆ ಎಂದು ಬಣ್ಣಿಸಿದರು.

### ಕೊಲ್ಲಂನಲ್ಲಿ ಭಾರಿ ಬೆಂಕಿ ಅವಘಡ 10 ಮೀನುಗಾರಿಕಾ ದೋಣಿಗಳು ಭಸ್ಮ

**ಕೊಲ್ಲಂ:** ಇಲ್ಲಿನ ಅಷ್ಟಮುಡಿ ಸರೋವರದಲ್ಲಿ ಲಂಗರು ಹಾಕಿದ್ದ ಸುಮಾರು 10 ಮೀನುಗಾರಿಕಾ ದೋಣಿಗಳು ಭಾನುವಾರ ಮುಂಜಾನೆ ಸಂಭವಿಸಿದ ಭಾರಿ ಬೆಂಕಿ ಅವಘಡದಲ್ಲಿ ಸುಟ್ಟು ಭಸವಾಗಿವೆ.

ಅಂಚಲುಮೂಡ್ ಪೊಲೀಸ್ ಠಾಣೆ ವ್ಯಾಪ್ತಿಯ ಕುರೀಪುಳ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಮಧ್ಯರಾತ್ರಿಯ ಮೊದಲು ಬೆಂಕಿ ಕಾಣಿಸಿಕೊಂಡಿದ್ದು ನಂತರ ಲಂಗರು ಹಾಕಿದ್ದ ದೋಣಿಗಳಿಗೆ ಬೆಂಕಿ ಆವರಿಸಿದೆ.ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದಾವಿಸಿ ಹೆಚ್ಚಿನ ಅನಾಹುತ ನಡೆಯದಂತೆ ಕ್ರಮ ಕೈಗೊಂಡಿದ್ದಾರೆ. ಪ್ರಾಥಮಿಕ ಅಂದಾಜಿನ ಪ್ರಕಾರ, ಸುಮಾರು 10 ದೋಣಿಗಳು ಸಂಪೂರ್ಣವಾಗಿ ನಾಶವಾಗಿವೆ. ಘಟನೆಗೆ ನಿಖರವಾದ ಕಾರಣ ಇನ್ನೂ ಗುರುತಿಸಲಾಗಿಲ್ಲ, ಆದರೆ ಗ್ಯಾಸ್ ಸಿಲಿಂಡರ್‌ನಿಮದ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿರುವ ಶಂಕೆ ಇದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಲ್ಲಿಯವರೆಗೆ ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಹೇಳಿದರು

### 610 ಕೋಟಿ ರೂ. ಟಿಕೆಟ್‌ಗಳ ಹಣ ಮರುಪಾವತಿಸಿದ ಇಂಡಿಗೋ

**ನವದೆಹಲಿ:** ಇಂಡಿಗೋ 610 ಕೋಟಿ ರೂ. ಮೌಲ್ಯದ ಟಿಕೆಟ್‌ಗಳ ಹಣವನ್ನು ಮರುಪಾವತಿಸಿದೆ. ಸರಿಯಾದ ಸಮಯಕ್ಕೆ ವಿಮಾನ ಹಾರಾಟದ ವ್ಯವಸ್ಥೆಯಲ್ಲಿ ಸುಧಾರಣೆ ಕಂಡುಬಂದಿದೆ ಇಂಡಿಗೋ 1,650 ಕ್ಕೂ ಹೆಚ್ಚು ವಿಮಾನಗಳನ್ನು ನಿರ್ವಹಿಸುವ ಹಾದಿಯಲ್ಲಿದೆ. 1,500 ವಿಮಾನಗಳು ಕಾರ್ಯನಿರ್ವಹಿಸಿದ್ದವು ಎಂದು ವಿಮಾನಯಾನ ಸಂಸ್ಥೆ ಭಾನುವಾರ ಸಂಜೆ ಬಿಡುಗಡೆ ಮಾಡಿದ ಸ್ಟೇಟಸ್ ಅಪ್‌ಡೇಟ್‌ನಲ್ಲಿ ತಿಳಿಸಿದೆ. ಡಿ.15 ರವರೆಗೆ ಬುಕಿಂಗ್‌ಗಳಿಗಾಗಿ ರದ್ದತಿ, ಮರುಹೊಂದಿಸುವ ವಿನಂತಿಗಳಿಗೆ ಸಂಪೂರ್ಣ ವಿನಾಯಿತಿ ನೀಡುವುದಾಗಿ ವಿಮಾನಯಾನ ಸಂಸ್ಥೆ ಪುನರುಚ್ಚರಿಸಿದೆ.

ಮರುಪಾವತಿ, ಲಗೇಜ್ ವಿಂಗಡಿಸುವ ಪ್ರಕ್ರಿಯೆಯು ವೇಗವಾಗಿ ನಡೆಯುತ್ತಿದೆ ಎಂದುಹೇಳಿದೆ. ನಾವು ವಿಮಾನ ಸೇವೆಯನ್ನು ಸಹಜ ಸ್ಥಿತಿಗೆ ತರಲು ಹಗಲಿರುಳು ಕೆಲಸ ಮಾಡುತ್ತಿದ್ದೇವೆ. ದಯವಿಟ್ಟು ನಮ್ಮೊಂದಿಗೆ ಸಹಕರಿಸಿ ಎಂದು ಇಂಡಿಗೋ ತಿಳಿಸಿದೆ. ಇಂಡಿಗೋ ಕಾರ್ಯಾಚರಣೆಯ ಬಿಕ್ಕಟ್ಟಿನಿಂದ ಉಂಟಾದ ಅಡಚಣೆಯನ್ನು ಪರಿಹರಿಸಲು ಮತ್ತು ಪ್ರಯಾಣಿಕರಿಗೆ ಅನಾನುಕೂಲ ಆಗದಂತೆ ನೋಡಿಕೊಳ್ಳಲು ನಾಗರಿಕ ವಿಮಾನಯಾನ ಸಚಿವಾಲಯ ತ್ವರಿತ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಅತ್ಯಾಚಾರ ಯತ್ನ, ಸತ್ವಿಂದರ್ ಸಿಂಗ್‌ಗೆ 7 ವರ್ಷ ಜೈಲು

**ಅಕ್ಲೆಂಡ್:** ಕ್ಯಾಬ್‌ನ ಜಿಪಿಎಸ್ ಬದಲಾಯಿಸಿ ಬೇರೆ ಮಾರ್ಗಕ್ಕೆ ತಿರುಗಿಸಿ ಹದಿಹರೆಯದ ಪ್ರಯಾಣಿಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಘಟನೆಗೆ ಸಬಂಧಿಸಿದಂತೆ ನ್ಯೂಜಿಲೆಂಡ್‌ನಲ್ಲಿರುವ ಭಾರತೀಯ ಮೂಲದ ಉಬರ್ ಚಾಲಕ ಸತ್ವಿಂದರ್ ಸಿಂಗ್‌ಗೆ ಏಳು ವರ್ಷ ಮತ್ತು ಎರಡು ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿದೆ. 2023ರಲ್ಲಿ ಕ್ಯಾಬ್ ಚಾಲಕ ಸತ್ವಿಂದರ್ ಸಿಂಗ್, ಮಹಿಳಾ ಪ್ರಯಾಣಿಕರಿಗೆ ಲೈಂಗಿಕ ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ನ್ಯಾಯಾಲಯ ಈ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ. ಕ್ಯಾಬ್‌ನಲ್ಲಿ ಸಂಚರಿಸುವ ವೇಳೆ ಚಾಲಕ ಸಿಂಗ್, ಮಹಿಳಾ ಪ್ರಯಾಣಿಕರಿಗೆ ನೀವು ಒಳ ಉಡುಪು ಧರಿಸಿದ್ದೀರಾ ಎಂದು ಪ್ರಶ್ನೆ ಮಾಡಿದ್ದನ್ನು ಆಕೆ ತೀವ್ರವಾಗಿ ವಿರೋಧಿಸಿದ್ದಾಳೆ, ಜೊತೆಗೆ ಇದು ನಿಮಗೆ ಸಂಬಂಧವಿಲ್ಲದ ವಿಷಯ ಎಂದು ಆಕೆ ಹೇಳಿದರೂ ಚಾಲಕ ಮತ್ತೆ ಮತ್ತೆ ಆಕೆಗೆ ಲೈಂಗಿಕ ದೌರ್ಜನ್ಯ ನೀಡಿದ್ದ ಎಂದು ಆಕೆ ಪೊಲೀಸರಿಗೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ನಿಗದಿತ ಸ್ಥಳಕ್ಕೆ ಹೋಗುವ ಜಿಪಿಎಸ್ ಬದಲು ಮಾಡಿ ಬೇರೆ ಮಾರ್ಗಕ್ಕೆ ಕರೆದುಕೊಂಡು ಹೋಗಿ ದೌರ್ಜನ್ಯ ಎಸಗಲಾಗಿದೆ ಜೊತೆಗೆ ದೈಹಿಕ ದೌರ್ಜನ್ಯ ನಡೆಸುವ ಮೂಲಕ ಅತ್ಯಾಚಾರ ನಡೆಸಿದ್ದಾನೆ ಎಂದು ಮಹಿಳೆ ಚಾಲಕನ ವಿರುದ್ಧ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದ ಪೊಲೀಸರು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

### ಅಲಾಸ್ಕಾ-ಕೆನಡಾ ಗಡಿಯಲ್ಲಿ 7.0 ತೀವ್ರತೆಯ ಭೂಕಂಪ

**ಅಲಾಸ್ಕಾ:** ರಾತ್ರಿ ಅಲಾಸ್ಕಾ-ಕೆನಡಾ ಗಡಿಯ ಬಳಿ 7.0 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಭೂಕಂಪ ಇದು ಆ ಪ್ರದೇಶದಲ್ಲಿ ಭಾರಿ ಭೀತಿಯನ್ನು ಉಂಟು ಮಾಡಿದೆ. ಭೂಕಂಪಎರಡೂ ದೇಶಗಳ ಗಡಿ ಪ್ರದೇಶಗಳಲ್ಲಿ ಬಲವಾದ ಕಂಪನಗಳು ಕಂಡುಬಂದಿವೆ. ಭೂಕಂಪದ ಕೇಂದ್ರಬಿಂದುವಿಗೆ ಸಮುದ್ರವು ಹತ್ತಿರದಲ್ಲಿದ್ದರೂ, ಅದೃಷ್ಟವಶಾತ್ ಇನ್ನೂ ಯಾವುದೇ ಸುನಾಮಿ ಎಚ್ಚರಿಕೆ ನೀಡಲಾಗಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಭೂವೈಜ್ಞಾನಿಕ ಸಮೀಕ್ಷೆಯ ಪ್ರಕಾರ, ಭೂಕಂಪದ ಕೇಂದ್ರಬಿಂದುವು ಅಲಾಸ್ಕಾದ ಜುನೌ ನಗರದ ವಾಯುವ್ಯಕ್ಕೆ ಸುಮಾರು 370 ಕಿಲೋಮೀಟರ್, ಕೆನಡಾದ ಯುಕಾನ್ ಪ್ರದೇಶದ ವೈಟ್‌ಹಾರ್ಸ್ ನಗರದಿಂದ 250 ಕಿಲೋಮೀಟರ್ ದೂರದಲ್ಲಿದೆ. ಅಲಾಸ್ಕಾ, ಕೆನಡಾದ ಯುಕಾನ್ ಪ್ರದೇಶದಲ್ಲಿ ಭೂಕಂಪದ ಅನುಭವವಾಗಿದೆ. ಈ ಪ್ರದೇಶದಲ್ಲಿ ಜನಸಂಖ್ಯೆ ತುಲನಾತ್ಮಕವಾಗಿ ಕಡಿಮೆ ಇದ್ದರೂ, ಭೂಕಂಪವು ನಾಗರಿಕರಲ್ಲಿ ತೀವ್ರ ಭೀತಿಯನ್ನುಂಟುಮಾಡಿದೆ. ಅನೇಕ ಸ್ಥಳಗಳಲ್ಲಿ, ಮನೆಗಳಲ್ಲಿನ ಕಪಾಟುಗಳು, ಗೋಡೆಗಳಿಂದ ವಸ್ತುಗಳು ಬಿದ್ದ ಘಟನೆಗಳು ನಡೆದಿವೆ.

# ವಿರಾಟ್ ಕೊಹ್ಲಿಯ ನೋ-ಲುಕ್ ಸಿಕ್ಸ್‌ಗೆ ದಂಗಾದ ಸ್ಟೇಡಿಯಂ

ವಿಶಾಖಪಟ್ಟಣದಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಭಾರತ ಭರ್ಜರಿ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಭಾರತ ಸರಣಿಯನ್ನು 2-1 ಅಂತರದಿಂದ ಗೆದ್ದುಕೊಂಡಿದೆ. ವಿರಾಟ್ ಕೊಹ್ಲಿ ಈ ಪಂದ್ಯದಲ್ಲಿ ಅಜೇಯ 65 ರನ್ ಗಳಿಸಿದರೆ, ಯಶಸ್ವಿ ಜೈಸ್ವಾಲ್ 116 ರನ್ ಸಿಡಿಸಿದರು. ಈ ಗೆಲುವು ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಭವಿಷ್ಯದ ಸುತ್ತಲಿನ ಊಹಾಪೋಹಗಳಿಗೆ ಅಂತ್ಯ ಕೂಡ ಹಾಡಿದೆ. ಇಬ್ಬರೂ ಅನುಭವಿ ಆಟಗಾರರು 2027 ರ ಏಕದಿನ ವಿಶ್ವಕಪ್‌ಗೆ ಸಂಪೂರ್ಣವಾಗಿ ಫಿಟ್ ಎಂದು ಮತ್ತೊಮ್ಮೆ ಸಾಬೀತುಪಡಿಸಿದರು.

**ವಿರಾಟ್ ಕೊಹ್ಲಿಯ ನೋ-ಲುಕ್ ಸಿಕ್ಸ್:** ವಿರಾಟ್ ಕೊಹ್ಲಿ ಪ್ರಸ್ತುತ ತಮ್ಮ ವೃತ್ತಿಜೀವನದ ಅತ್ಯುತ್ತಮ ಫಾರ್ಮ್ ನಲ್ಲಿದ್ದಾರೆ. ರಾಂಚಿ ಮತ್ತು ರಾಯ್‌ಪುರದಲ್ಲಿ ಸತತ ಎರಡು ಶತಕಗಳನ್ನು ಗಳಿಸಿದ ನಂತರ, ಅವರು ವಿಶಾಖಪಟ್ಟಣದಲ್ಲಿ ಕೂಡ ತಮ್ಮ ಅದ್ಭುತ ಪ್ರದರ್ಶನವನ್ನು ಮುಂದುವರಿಸಿದರು.



**ಸತತ ಎರಡು ಶತಕ**

ಮೂರನೇ ಏಕದಿನ ಪಂದ್ಯದಲ್ಲಿ, ಕೆಲವು ಅದ್ಭುತ ಹೊಡೆತಗಳನ್ನು ಆಡಿದರು, ಅದು ಎಲ್ಲರನ್ನೂ ಬೆರಗುಗೊಳಿಸಿತು.

34 ನೇ ಓವರ್‌ನ ಕೊನೆಯ ಎಸೆತದಲ್ಲಿ, 37 ವರ್ಷದ ಕೊಹ್ಲಿ ಮುಂದೆ ಬಂದು ಬೌಲರ್ ಕಾರ್ಬಿನ್ ಬಾಷ್ ಎಸೆತದಲ್ಲಿ ಸಿಕ್ಸರ್ ಬಾರಿಸಿದ್ದು ಎಲ್ಲರನ್ನೂ ದಂಗಾಗಿಸಿತು. ಕೊಹ್ಲಿ ಆ ಚೆಂಡನ್ನು ನೋಡಲೂ ಇಲ್ಲ, ಶಾಟ್ ಹೊಡೆದು ನೇರವಾಗಿ ಬಾಷ್ ಕಡೆಗೆ ನೋಡಿದರು. ವಿಕೆಟ್ ಕೀಪರ್ ಕ್ವಿಂಟನ್ ಡಿ ಕಾಕ್ ಕೊಹ್ಲಿಯ ಹೊಡೆತವನ್ನು ನೋಡಿ ನಗದೆ ಇರಲು ಸಾಧ್ಯವಾಗಲಿಲ್ಲ. ಮೂರನೇ ಏಕದಿನ ಪಂದ್ಯವನ್ನು ಭಾರತ 9 ವಿಕೆಟ್‌ಗಳಿಂದ ಗೆದ್ದುಕೊಂಡಿತು. ವಿರಾಟ್ ಕೊಹ್ಲಿ 45 ಎಸೆತಗಳಲ್ಲಿ ಅಜೇಯ 65 ರನ್ ಗಳಿಸಿದರೆ, ಯಶಸ್ವಿ ಜೈಸ್ವಾಲ್ 116 ರನ್ ಗಳಿಸಿ ಅದ್ಭುತ ಇನ್ನಿಂಗ್ಸ್ ಆಡಿದರು. ಸರಣಿಯ ಆರಂಭದಲ್ಲಿ, ರೋಹಿತ್ ಶರ್ಮಾ ಕೂಡ 73 ಎಸೆತಗಳಲ್ಲಿ 75 ರನ್ ಗಳಿಸಿ ಅದ್ಭುತ ಇನ್ನಿಂಗ್ಸ್ ಆಡಿದರು. ಭಾರತವು 271 ರನ್‌ಗಳ ಗುರಿಯನ್ನು ಆರಾಮವಾಗಿ ಮುಟ್ಟಿತು.

## ಟಿ20 ಇತಿಹಾಸದಲ್ಲೇ ಯಾರೂ ಮಾಡದ ವಿಶ್ವದಾಖಲೆ ಬರೆದ ಆ್ಯಂಡ್ರೆ ರಸೆಲ್

ಟಿ20 ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಅದು ಕೂಡ ಈವರೆಗೆ ಯಾರಿಂದಲೂ ಸಾಧ್ಯವಾಗದ ವರ್ಲ್ಡ್ ರೆಕಾರ್ಡ್ ಎಂಬುದು ವಿಶೇಷ. ಅಂದರೆ ಚುಟುಕು ಕ್ರಿಕೆಟ್‌ನಲ್ಲಿ ರಸೆಲ್ ಮೂರು ವಿಭಾಗಗಳಲ್ಲಿ ವಿಶೇಷ ಮೈಲುಗಲ್ಲು ದಾಟಿದ್ದಾರೆ.

ಶಾರ್ಜಾದಲ್ಲಿ ನಡೆಯುತ್ತಿರುವ ಇಂಟರ್‌ನ್ಯಾಷನಲ್ ಟಿ20 ಲೀಗ್‌ನಲ್ಲಿ ಅಬುಧಾಬಿ ಪರ ಕಣಕ್ಕಿಳಿಯುತ್ತಿರುವ ರಸೆಲ್ ಡೆಸರ್ಟ್ ವೈಪರ್ಸ್ ವಿರುದ್ಧದ ಪಂದ್ಯದಲ್ಲಿ 3 ಓವರ್‌ಗಳನ್ನು ಎಸೆದಿದ್ದರು. ಈ ವೇಳೆ 1 ವಿಕೆಟ್ ಕಬಳಿಸಿದ್ದಾರೆ. ಈ ಒಂದು ವಿಕೆಟ್‌ನೊಂದಿಗೆ ಆ್ಯಂಡ್ರೆ ರಸೆಲ್ ಟಿ20 ಕ್ರಿಕೆಟ್‌ನಲ್ಲಿ 500 ವಿಕೆಟ್‌ಗಳ ಸಾಧನೆ ಮಾಡಿದ್ದಾರೆ.



**ಮೂರು ವಿಭಾಗಗಳಲ್ಲಿ ಮೈಲುಗಲ್ಲು**

ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲೇ 500+ ವಿಕೆಟ್, 5000+ ರನ್ ಹಾಗೂ 500+ ಸಿಕ್ಸ್ ಸಿಡಿಸಿದ ವಿಶ್ವದ ಏಕೈಕ ಆಟಗಾರ ಎನಿಸಿಕೊಂಡಿದ್ದಾರೆ. ಅಂದರೆ ರಸೆಲ್ ಅವರನ್ನು ಹೊರತುಪಡಿಸಿ ಟಿ20 ಕ್ರಿಕೆಟ್‌ನಲ್ಲಿ ಯಾರಿಗೂ ಈ ಸಾಧನೆ ಮಾಡಲು ಸಾಧ್ಯವಾಗಿಲ್ಲ.

20 ಓವರ್‌ಗಳ ಕ್ರಿಕೆಟ್‌ನಲ್ಲಿ ಒಟ್ಟು 126 ಆಟಗಾರರು 5000 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಇನ್ನು 6 ಬೌಲರ್‌ಗಳು 500 ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ. ಹಾಗೆಯೇ 10 ಬ್ಯಾಟ್ಸ್‌ಮನ್‌ಗಳು 500 ಕ್ಕೂ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ್ದಾರೆ. ಆದರೆ ಮೂರು ಪಟ್ಟಿಗಳಲ್ಲಿ ಸ್ಥಾನ ಪಡೆದ ಏಕೈಕ ಆಟಗಾರ ರಸೆಲ್.

ಟಿ20 ಕ್ರಿಕೆಟ್‌ನಲ್ಲಿ ಈವರೆಗೆ 576 ಪಂದ್ಯಗಳನ್ನಾಡಿರುವ ಆ್ಯಂಡ್ರೆ ರಸೆಲ್ ಒಟ್ಟು 9496 ರನ್ ಕಲೆಹಾಕಿದ್ದಾರೆ. ಅಲ್ಲದೆ ಬರೋಬ್ಬರಿ 500 ವಿಕೆಟ್‌ಗಳನ್ನು ಸಹ ಪಡೆದಿದ್ದಾರೆ. ಇನ್ನು 772 ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ.

ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಯಾರಿಗೂ ಸಾಧ್ಯವಾಗದ ದಾಖಲೆ ಬರೆಯುವಲ್ಲಿ ಯಶಸ್ವಿಯಾಗಿದ್ದಾರೆ.

## ನಿಮ್ಮ ಕೆಲಸ ನೋಡ್ಕೊಂಡು ಸುಮ್ನಿದ್ರೆ ಸರಿ: ಗಂಭೀರ್ ಗರಂ

ಸೌತ್ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಭಾರತ ತಂಡ 2-1 ಅಂತರದಿಂದ ಗೆದ್ದುಕೊಂಡಿದೆ. ರಾಂಚಿಯಲ್ಲಿ ನಡೆದ ಮೊದಲ ಪಂದ್ಯದಲ್ಲಿ ಟೀಮ್ ಇಂಡಿಯಾ 17 ರನ್‌ಗಳ ಜಯ ಸಾಧಿಸಿದರೆ, ರಾಯ್‌ಪುರದಲ್ಲಿ ನಡೆದ ದ್ವಿತೀಯ ಪಂದ್ಯದಲ್ಲಿ ಸೌತ್ ಆಫ್ರಿಕಾ 4 ವಿಕೆಟ್‌ಗಳ ಗೆಲುವು ದಾಖಲಿಸಿತ್ತು. ಇನ್ನು ವಿಶಾಖಪಟ್ಟಣದಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಟೀಮ್ ಇಂಡಿಯಾ ಸರಣಿಯನ್ನು ಗೆದ್ದುಕೊಂಡಿದೆ. ಈ ಗೆಲುವಿನ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಭಾರತದ ಮುಖ್ಯ ಕೋಚ್ ಗೌತಮ್ ಗಂಭೀರ್ ಟೀಕಾಗಾರರಿಗೆ ತಿರುಗೇಟು ನೀಡಿದ್ದಾರೆ.

ಪಂದ್ಯದ ಬಳಿಕ ಮಾತನಾಡಿದ ಗೌತಮ್ ಗಂಭೀರ್, ಕೋಚಿಂಗ್ ಕೆಲಸದ ಬಗ್ಗೆ ಬಂದ ಟೀಕೆಗಳಿಂದ ಆಘಾತಕ್ಕೊಳಗಾಗಿದ್ದೇನೆ. ಟೆಸ್ಟ್ ಕ್ರಿಕೆಟ್‌ನಲ್ಲಿ ನಾವು ಬಯಸಿದ್ದಂತೆ ಫಲಿತಾಂಶಗಳು ಮೂಡಿಬಂದಿಲ್ಲ ನಿಜ. ಇದಕ್ಕೆ ಹಲವು ಕಾರಣಗಳಿವೆ. ಇದಾಗ್ಯೂ ಯಾರೂ ಕೂಡ ನಾವು ಕೊಲ್ಕತ್ತಾ ಟೆಸ್ಟ್ ಪಂದ್ಯದಲ್ಲಿ ನಾಯಕನಿಲ್ಲದೇ (ಶುಭ್‌ಮನ್ ಗಿಲ್ ಗಾಯಗೊಂಡಿದ್ದರು) ಆಡಿದ್ದೇವೆ ಎಂಬುದನ್ನು ಉಲ್ಲೇಖಿಸಿಲ್ಲ.

ಶುಭ್‌ಮನ್ ಗಿಲ್ ಕಳೆದ ಆರೇಳು ಟೆಸ್ಟ್ ಪಂದ್ಯಗಳಿಂದ ಸಾವಿರಕ್ಕೂ ಅಧಿಕ ರನ್ ಗಳಿಸಿದ್ದರು. ಅವರ ಅಲಭ್ಯತೆಯು ತಂಡದ ಫಲಿತಾಂಶದ ಮೇಲೆ ಪರಿಣಾಮ ಬೀರಿತ್ತು. ಇವೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಚ್ಚರಿ ಎಂದರೆ ಕ್ರಿಕೆಟ್‌ಗೆ ಯಾವುದೇ ಸಂಬಂಧವಿಲ್ಲದ ಕೆಲವರು ಈ ವಿಷಯಗಳ ಬಗ್ಗೆ ಪ್ರಶ್ನೆಗಳೆತ್ತಿದ್ದರು. ಅದರಲ್ಲೂ ಐಪಿಎಲ್ ಮಾಲೀಕರೊಬ್ಬರು ಪ್ರತ್ಯೇಕ ಕೋಚಿಂಗ್ ಬಗ್ಗೆಯೂ ಬರೆದಿದ್ದಾರೆ. ಇದು ನಿಜಕ್ಕೂ ತುಂಬಾ ಆಶ್ಚರ್ಯ. ಅವರು ತಮ್ಮ ಕ್ಷೇತ್ರದ ಕೆಲಸಗಳನ್ನು ನೋಡಿಕೊಂಡು ಇರುವುದು ಉತ್ತಮ. ನಾವು ಅವರ ಕ್ಷೇತ್ರಕ್ಕೆ ಹೋಗುವುದಿಲ್ಲ, ಆದ್ದರಿಂದ, ನಾವು ಮಾಡುವ ಕೆಲಸದಲ್ಲಿ ಅವರಿಗೆ ಹಸ್ತಕ್ಷೇಪ ಮಾಡಲು ಯಾವುದೇ ಹಕ್ಕಿಲ್ಲ, ಹೀಗಾಗಿ ಅವರವರ ಕೆಲಸ ನೋಡ್ಕೊಂಡು ಸುಮ್ಮನಿರುವುದು ಉತ್ತಮ ಗೌತಮ್ ಗಂಭೀರ್ ತಿರುಗೇಟು ನೀಡಿದ್ದಾರೆ.



ಇಲ್ಲಿ ಗೌತಮ್ ಗಂಭೀರ್ ಐಪಿಎಲ್ ಮಾಲೀಕರು ಎಂದು ಉಲ್ಲೇಖಿಸಿರುವುದು ಡೆಲ್ಲಿ ಕ್ಯಾಪಿಟಲ್ಸ್ ಓನರ್ ಪಾರ್ಥ್ ಜಿಂದಾಲ್ ಅವರನ್ನು ಎಂಬುದು ಮೇಲ್ನೋಟಕ್ಕೆ ಸ್ಪಷ್ಟ. ಏಕೆಂದರೆ ಟೀಮ್ ಇಂಡಿಯಾ ಟೆಸ್ಟ್ ಸರಣಿ ಸೋತ ಬೆನ್ನಲ್ಲೇ ಪಾರ್ಥ್ ಜಿಂದಾಲ್ ಸೋಷಿಯಲ್ ಮೀಡಿಯಾದಲ್ಲಿ ತಮ್ಮ ಆಕ್ರೋಶ ಹೊರಹಾಕಿದ್ದರು. ಭಾರತ ತಂಡವು ಗೆಲುವಿನ ಹತ್ತಿರಕ್ಕೂ ಬರಲಿಲ್ಲ, ತವರಿನಲ್ಲಿ ಎಂತಹ ಹೀನಾಯ ಸೋಲು ನಮ್ಮ ಟೆಸ್ಟ್ ತಂಡ ತವರಿನಲ್ಲಿ ಇಷ್ಟು ದುರ್ಬಲವಾಗಿರುವುದನ್ನು ನೋಡಿಲ್ಲ ರೆಡ್ ಬಾಲ್ ಸ್ಪೆಷಲಿಸ್ಟ್‌ಗಳನ್ನು ಆಯ್ಕೆ ಮಾಡದಿದ್ದಾಗ ಹೀಗಾಗುತ್ತದೆ. ಈ ತಂಡವು ರೆಡ್ ಬಾಲ್ ಫಾರ್ಮ್ಯಾಟ್‌ನಲ್ಲಿ ನಾವು ಹೊಂದಿರುವ ಆಳವಾದ ಶಕ್ತಿಯನ್ನು ಪ್ರತಿಬಿಂಬಿಸುವಷ್ಟು ಹತ್ತಿರವೂ ಇಲ್ಲ. ಟೆಸ್ಟ್ ಕ್ರಿಕೆಟ್‌ಗಾಗಿ ಸ್ಪೆಷಲಿಸ್ಟ್ ರೆಡ್ ಬಾಲ್ ಕೋಚ್ ಅನ್ನು ಆಯ್ಕೆ ಮಾಡಲು ಇದು ಸಕಾಲ ಎಂದು ಪಾರ್ಥ್ ಜಿಂದಾಲ್ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದರು.

## 2026ರ ಐಪಿಎಲ್ ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ನಡೆಯುತ್ತವೆ

2026ರ ಐಪಿಎಲ್‌ಗೆ ಆರ್‌ಸಿಬಿ ಎಲ್ಲಾ ಪಂದ್ಯಗಳು ಬೆಂಗಳೂರಿನಲ್ಲೇ ನಡೆಯಲಿದೆ ಎಂದು ಖುದ್ದು ಡಿಸಿಎಂ ಡಿಕೆ ಶಿವಕುಮಾರ್ ಘೋಷಣೆ ಮಾಡಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಚುನಾವಣೆಯಲ್ಲಿ ಮತದಾನದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಮರಳಿ ತರುವ ಭರವಸೆ ನೀಡಿದ್ದಾರೆ. ಅದರಲ್ಲೂ ಮುಖ್ಯವಾಗಿ 2026ರ ಐಪಿಎಲ್ ಪಂದ್ಯಗಳನ್ನೂ ಇಲ್ಲಿಯೇ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ನಿರಾಸೆಯಲ್ಲಿದ್ದ ಆರ್‌ಸಿಬಿ ಅಭಿಮಾನಿಗಳಿಗೆ ಸಿಹಿ ಸುದ್ದಿ ನೀಡಿದ್ದಾರೆ.

ಇತ್ತೀಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಸಂಭವಿಸಿ 11 ಜನರು ದಾರುಣವಾಗಿ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಪಂದ್ಯಗಳನ್ನು ಬೇರೆ ಮೈದಾನಗಳಿಗೆ ಸ್ಥಳಾಂತರ ಮಾಡಲಾಗಿತ್ತು. ಹೀಗಾಗಿ ಸಹಜವಾಗಿಯೇ ಆರ್‌ಸಿಬಿ ಅಭಿಮಾನಿಗಳಿಗೆ ನಿರಾಸೆಯಾಗಿತ್ತು. ಈ ಬಗ್ಗೆ ಡಿಕೆಶಿ ಮಾತನಾಡಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದು ಹೋಗುತ್ತಿರುವ ಅಂತರಾಷ್ಟ್ರೀಯ ಪಂದ್ಯಗಳನ್ನು ನಾವು ವಾಪಸ್ ತರುತ್ತೇವೆ. ಬೆಂಗಳೂರು ಯಾವಾಗಲೂ ಪ್ರಮುಖ ಕ್ರಿಕೆಟ್ ಹಬ್ ಆಗಿ ಉಳಿಯಬೇಕು. 2026ರ ಐಪಿಎಲ್ ಪಂದ್ಯಗಳು ಸಹ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ನಡೆಯುತ್ತವೆ.

ಐಪಿಎಲ್‌ನಂತಹ ಬೃಹತ್ ಟೂರ್ನಿಗಳನ್ನು ಬೆಂಗಳೂರು ಕಳೆದುಕೊಳ್ಳದಂತೆ ನೋಡಿಕೊಳ್ಳುತ್ತೇವೆ. ನಾನು ಕ್ರಿಕೆಟ್ ಲವರ್. ಆರ್‌ಸಿಬಿ ನಮ್ಮ ಹೆಮ್ಮೆ. ನಾನು ಎಲ್ಲಾ ಸರಿ ಮಾಡುತ್ತೇನೆ ಎಂದು ಭರವಸೆ ನೀಡಿದರು. ಬೆಂಗಳೂರಿನಲ್ಲಿ ಏನು ಅನಾಹುತ ಆಗಿದೆ, ಅದೆಲ್ಲವನ್ನ ತಪ್ಪಿಸಿ ಬೆಂಗಳೂರು ಗೌರವ ಉಳಿಸುವ ಕೆಲಸ ಮಾಡ್ತೀವಿ. ಕಾನೂನು ಚೌಕಟ್ಟಿನಲ್ಲಿ ಕ್ರೌಡ್ ಮ್ಯಾನೇಜ್ಮೆಂಟ್ ಗಮನದಲ್ಲಿಟ್ಟುಕೊಂಡು



ಸ್ಟೇಡಿಯಂ ಬಳಸುತ್ತೇವೆ. ಇದಕ್ಕೆ ಪರ್ಯಾಯವಾಗಿ ಬೇರೆ ದೊಡ್ಡ ಸ್ಟೇಡಿಯಂ ಮಾಡುತ್ತೇವೆ ಎಂದು ಹೇಳಿದರು.

ಕೆಎಸ್‌ಸಿಎ ಚುನಾವಣಾ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳೂ ತಮ್ಮ ಆಪ್ತರು. ಈ ಚುನಾವಣೆಯಲ್ಲಿ ನಿಂತಿರುವ ಬ್ರಿಜೇಶ್ ಪಟೇಲ್, ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್ ಹೀಗೆ ಎಲ್ಲರೂ ನನಗೆ ಬೇಕಾದವರೇ. ನಾನು ಚಿಕ್ಕವನಿರುವಾಗಲೇ ಕೆಎಸ್‌ಸಿಎಯಲ್ಲಿ ನನಗೆ ಸದಸ್ಯತ್ವ ನೀಡಲಾಗಿತ್ತು. ಯಾರೇ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದರೂ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸಬೇಕು. ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕು ಎಂಬ ಆಶಯ ತಮಗಿದೆ ಎಂದು ತಿಳಿಸಿದರು.

**ಆರ್‌ಸಿಬಿ ಅಭಿಮಾನಿಗಳಿಗೆ ಗುಡ್ ನ್ಯೂಸ್**

ಜೂನ್ 4ರಂದು ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಕ ಸಂಭವಿಸಿದ ಕಾಲ್ತುಳಿತ ದುರಂತವೇ ಟೂರ್ನಿ ಸ್ಥಳಾಂತರಕ್ಕೆ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ಜೂನ್ 3ರ ರಾತ್ರಿ ಐಪಿಎಲ್ ಟ್ರೋಫಿ ಗೆದ್ದು 17 ವರ್ಷಗಳ ವನವಾಸಕ್ಕೆ ಅಂತ್ಯ ಹಾಡಿತ್ತು. ಮರುದಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದ ದುರಂತ ನಡೆದು 11 ಜನ ಅಭಿಮಾನಿಗಳು ಪ್ರಾಣ ಕಳೆದುಕೊಂಡಿದ್ದರು. ಈ ಘಟನೆಯಿಂದ ಸುರಕ್ಷತೆ ಬಗ್ಗೆ ಕಳವಳ ಹೆಚ್ಚಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣವನ್ನು ದೊಡ್ಡ ಪ್ರಮಾಣದ ಕಾರ್ಯಕ್ರಮಗಳಿಗೆ ಸೂಕ್ತವಲ್ಲ ಮತ್ತು ಅಸುರಕ್ಷಿತ ಎಂದು ಕರ್ನಾಟಕ ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ಸಮಿತಿ ಹೇಳಿತ್ತು.

ಹೀಗಾಗಿ ಮುಂಬರುವ ಆವೃತ್ತಿಯಲ್ಲಿ ಆರ್‌ಸಿಬಿ ತವರು ಮೈದಾನದ ಎಲ್ಲಾ ಪಂದ್ಯಗಳನ್ನು ಪುಣೆಗೆ ಶಿಫ್ಟ್ ಮಾಡಲು ಬಿಸಿಸಿಐ ಹಾಗೂ ಐಪಿಎಲ್ ಆಡಳಿತ ಮಂಡಳಿ ಚರ್ಚಿಸುತ್ತಿದೆ ಎಂದು ವರದಿಗಳು ತಿಳಿಸಿವೆ. ಆದ್ರೆ ಈ ಬಗ್ಗೆ ಐಪಿಎಲ್ ಮಂಡಳಿಯಾಗಲಿ, ಬಿಸಿಸಿಐ ಆಗಲಿ ಅಧಿಕೃತ ಹೇಳಿಕೆ ನೀಡಿಲ್ಲ.

## ದರ್ಶನ್ ಸಂಕಷ್ಟಕ್ಕೆ ಕಾರಣ ಪ್ರದೋಷ್ ಹೇಳಿಕೆ



ನಟ ದರ್ಶನ್ ಪ್ರಮುಖ ಆರೋಪಿ ಆಗಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ವೇಳೆ ಲಕ್ಷಾಂತರ ರೂಪಾಯಿ ಹಣ ಪತ್ತೆ ಆಗಿತ್ತು. ಅದಕ್ಕೆ ಸಂಬಂಧಿಸಿದಂತೆ ಐಟಿ ಅಧಿಕಾರಿಗಳ ತನಿಖೆ ನಡೆಸುತ್ತಿದ್ದಾರೆ. ದರ್ಶನ್ ಅವರು ಈಗಾಗಲೇ ಅದಕ್ಕೆ ತಮ್ಮ ಹೇಳಿಕೆ ನೀಡಿದ್ದಾರೆ. ಆದರೆ ಈ ಪ್ರಕರಣದಲ್ಲಿ ಸಿಲುಕಿರುವ ಇನ್ನುಳಿದ ಆರೋಪಿಗಳು ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿದ್ದಾರೆ.


ಇದರಿಂದಾಗಿ ದರ್ಶನ್ ಅವರಿಗೆ ಸಂಕಷ್ಟ ಹೆಚ್ಚುವ ಸಾಧ್ಯತೆ ಇದೆ. ದರ್ಶನ್ ಆಪ್ತ ಪ್ರದೋಷ್ ಹೇಳಿಕೆಯನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಪಡೆದುಕೊಂಡಿದ್ದಾರೆ.

ಮನೆಯಲ್ಲಿ ಸಿಕ್ಕ ಹಣಕ್ಕೆ ಪಕ್ಕಾ ಲೆಕ್ಕ ಕೊಡಲು ಪ್ರದೋಷ್ ಅವರಿಂದ ಸಾಧ್ಯವಾಗಿಲ್ಲ. ಅವರ ಹೇಳಿಕೆಯಿಂದ ತನಿಖೆ ಮತ್ತಷ್ಟು ಚುರುಕುಗೊಂಡಿದೆ. ಆದಾಯ ತೆರಿಗೆ ಇಲಾಖೆ ಮುಂದೆ ಪ್ರದೋಷ್ ನೀಡಿದ ಹೇಳಿಕೆಯ ಪ್ರತಿ ಟಿವಿ9ಗೆ ಲಭ್ಯವಾಗಿದೆ. ಮನೆಯಲ್ಲಿ ಸಿಕ್ಕ 30 ಲಕ್ಷ ರೂಪಾಯಿ ಹಣಕ್ಕೆ ಪ್ರದೋಷ್ ದ್ವಂದ್ವ ಉತ್ತರ ನೀಡಿದ್ದಾರೆ. ಇದರಿಂದಾಗಿ ದರ್ಶನ್ ಮತ್ತೆ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ದಟ್ಟವಾಗಿದೆ.

'ಮನೆಯಲ್ಲಿ ಸಿಕ್ಕ ಹಣ ನನ್ನದಲ್ಲ. ನನ್ನ ಕುಟುಂಬಕ್ಕೂ ಸೇರಿದಲ್ಲ' ಎಂದು ಪ್ರದೋಷ್ ಹೇಳಿಕೆ ನಿಡಿದ್ದಾರೆ. ಇದರಿಂದಾಗಿ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುವಂತಾಗಿದೆ. ಹಾಗಾದರೆ ಈ 30 ಲಕ್ಷ ರೂಪಾಯಿ ಹಣ ಎಲ್ಲಿಂದ ಬಂತು? ಕೊಟ್ಟವರು ಯಾರು ಎಂಬುದಕ್ಕೆ ಪ್ರದೋಷ್ ಉತ್ತರ ನೀಡಿಲ್ಲ. ಇದರಿಂದ ದರ್ಶನ್ ಅವರನ್ನು ಮತ್ತೆ ವಿಚಾರಣೆಗೆ ಒಳಪಡಿಸಲು ಐಟಿ ಅಧಿಕಾರಿಗಳು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

**ಪ್ರದೋಷ್ ಐಟಿ ಮುಂದೆ ಹೇಳಿದ್ದೇನು? ಅಧಿಕಾರಿಗಳ ಪ್ರಶ್ನೆ:** ಮೇಲೆ ತಿಳಿಸಿದ 30,00,000 ರೂಪಾಯಿ ನಗದು ವಶಪಡಿಸಿಕೊಳ್ಳಲಾದ ಹಣದ ಮೂಲವನ್ನು ದಯವಿಟ್ಟು ಒದಗಿಸಿ. **ಪ್ರದೋಷ್ ಉತ್ತರ:** ಸರ್, ಮೇಲೆ ತಿಳಿಸಿದ 30,00,000 ರೂಪಾಯಿ ನಗದು ವಶಪಡಿಸಿಕೊಳ್ಳಲಾದ ಹಣದ ಮೂಲ ನನಗೆ ತಿಳಿದಿಲ್ಲ. ಏಕೆಂದರೆ ಅದು ನನಗೆ ಅಥವಾ ನನ್ನ ಕುಟುಂಬದ ಸದಸ್ಯರಿಗೆ ಸೇರಿಲ್ಲ. **ಅಧಿಕಾರಿಗಳ ಪ್ರಶ್ನೆ:** 12.06.2024ರಂದು ನಿಮ್ಮ ನಿವಾಸದಿಂದ ಪತ್ತೆಯಾದ ಮತ್ತು ವಶಪಡಿಸಿಕೊಂಡ ಹಣದ ಮೂಲದ ಬಗ್ಗೆ ಸರಿಯಾದ ವಿವರಣೆ ಇಲ್ಲದಿದ್ದರೆ, ಸಂಪೂರ್ಣ ನಗದನ್ನು ವಶಪಡಿಸಿಕೊಳ್ಳಲಾಗುತ್ತದೆ. ಇದರ ಬಗ್ಗೆ ನಿಮಗೆ ಯಾವುದೇ ಆಕ್ಷೇಪಣೆ/ಕಾಮೆಂಟ್‌ಗಳಿವೆಯೇ? **ಪ್ರದೋಷ್ ಉತ್ತರ:** ಸರ್, 12.06.2024ರಂದು ನನ್ನ ನಿವಾಸದಿಂದ ಪತ್ತೆಯಾದ ಮತ್ತು ವಶಪಡಿಸಿಕೊಂಡ ಹಣದ ಮೂಲ ಇನ್ನೂ ವಿವರಿಸಲಾಗಿಲ್ಲ ಎಂದು ನಾನು ಒಪ್ಪುತ್ತೇನೆ ಮತ್ತು ಅದನ್ನು ವಶಪಡಿಸಿಕೊಳ್ಳಬಹುದು ಮತ್ತು ಅದಕ್ಕೆ ಅನುಗುಣವಾಗಿ ತೆರಿಗೆ ವಿಧಿಸಬಹುದು.

## ವಿರೋಧದ ನಡುವೆಯೂ ಗೆದ್ದ ರಣವೀರ್ ಸಿಂಗ್: 'ಧುರಂಧರ್' ಕಲೆಕ್ಷನ್ ಸೂಪರ್



ನಟ ರಣವೀರ್ ಸಿಂಗ್ ಅವರು ತಮ್ಮ ಮಾತಿನ ಕಾರಣದಿಂದಲೇ ಅನೇಕ ಬಾರಿ ವಿವಾದ ಮಾಡಿಕೊಳ್ಳುತ್ತಾರೆ. ಇತ್ತೀಚೆಗೆ ಅವರು ಕಾಂತಾರ ಚಾಪ್ಟರ್ 1 ಸಿನಿಮಾದಲ್ಲಿನ ರಿಷಬ್ ಶೆಟ್ಟಿಯ ಅಭಿನಯವನ್ನು ಹೊಗಳುವ ಭರದಲ್ಲಿ ದೈವಕ್ಕೆ ಅವಮಾನ ಮಾಡಿದ್ದರು. ಅದರಿಂದ ವಿವಾದ ಶುರುವಾಗಿತ್ತು. ಅದು ಕೂಡ 'ಧುರಂಧರ್' ಬಿಡುಗಡೆ ಹೊಸ್ತಿಲಲ್ಲೇ ಅವರು ಈ ರೀತಿ ಮಾಡಿದ್ದರಿಂದ ಈ ಸಿನಿಮಾದ ಕಲೆಕ್ಷನ್ ಮೇಲೆ ಪರಿಣಾಮ ಬೀರಬಹುದು ಎಂದೇ ಊಹಿಸಲಾಗಿತ್ತು. ಆದರೆ ಆ ರೀತಿ ಆಗಿಲ್ಲ.

ಧುರಂಧರ್' ಸಿನಿಮಾ ಅತ್ಯುತ್ತಮವಾಗಿಯೇ ಕಲೆಕ್ಷನ್ ಮಾಡುತ್ತಿದೆ. ಮೊದಲ ದಿನಕ್ಕಿಂತಲೂ ಎರಡನೇ ದಿನದ ಕಲೆಕ್ಷನ್ ಜಾಸ್ತಿ ಆಗಿದೆ. ಬಿಡುಗಡೆಗೂ ಮುನ್ನ 'ಧುರಂಧರ್' ಬಗ್ಗೆ ಕೆಲವು ಅನುಮಾನಗಳು ಇದ್ದವು. ಈ ಸಿನಿಮಾಗೆ ಅಷ್ಟೇನೂ ಹೈಪ್ ಇರಲಿಲ್ಲ. ಹಾಗಾಗಿ ಕಳಪೆ ಕಲೆಕ್ಷನ್ ಆಗಬಹುದು ಎಂದು ಅನೇಕರು ಊಹಿಸಿದ್ದರು. ಆದರೆ ಬಾಕ್ಸ್ ಆಫೀಸ್‌ನಲ್ಲಿ ಈ ಸಿನಿಮಾಗೆ ಭರ್ಜರಿ ಓಪನಿಂಗ್ ಸಿಕ್ಕಿತು. ಮೊದಲ ದಿನವಾದ ಶುಕ್ರವಾರ (ಡಿಸೆಂಬರ್ 5) 'ಧುರಂಧರ್' ಸಿನಿಮಾ 27 ರೂಪಾಯಿ ಕಲೆಕ್ಷನ್ ಮಾಡಿತು. 2ನೇ ದಿನ ಇನ್ನಷ್ಟು ಹೆಚ್ಚಾಯಿತು. ಎರಡನೇ ದಿನವಾರ ಶನಿವಾರ (ಡಿಸೆಂಬರ್ 6) 'ಧುರಂಧರ್' ಸಿನಿಮಾದ ಕಲೆಕ್ಷನ್‌ನಲ್ಲಿ ಏರಿಕೆ ಕಂಡಿದೆ. ಶನಿವಾರ ರಾತ್ರಿ 10 ಗಂಟೆ ವೇಳೆಗೆ ಈ ಸಿನಿಮಾಗೆ 31 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ ಎಂದು Sacnilk ವರದಿ ಮಾಡಿದೆ. ಅಂದರೆ, 2 ದಿನಕ್ಕೆ ಈ ಸಿನಿಮಾದ ಒಟ್ಟು ಗಳಿಕೆ 58 ಕೋಟಿ ರೂಪಾಯಿ ಆಗಿದೆ. ಇದರಿಂದ ರಣವೀರ್ ಸಿಂಗ್ ಅವರು ಗೆದ್ದು ಬೀಗಿದ್ದಾರೆ.

'ಧುರಂಧರ್' ಸಿನಿಮಾಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಹಾಗಾಗಿ ಮೂರನೇ ದಿನ ಕೂಡ ಕಲೆಕ್ಷನ್ ಹೆಚ್ಚುವುದು ಖಚಿತ. ಭಾನುವಾರ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರು ಸಿನಿಮಾ ವೀಕ್ಷಿಸಲಿದ್ದಾರೆ. ಇದರಿಂದಾಗಿ 'ಧುರಂಧರ್' ಸಿನಿಮಾದ ಒಟ್ಟು ಕಲೆಕ್ಷನ್ 100 ಕೋಟಿ ರೂಪಾಯಿ ಸಮೀಪಿಸಲಿದೆ. ರಣವೀರ್ ಸಿಂಗ್ ಅವರ ವೃತ್ತಿ ಜೀವನದ ಸೂಪರ್ ಹಿಟ್ ಸಿನಿಮಾಗಳ ಸಾಲಿಗೆ ಧುರಂಧರ್ ಕೂಡ ಸೇರ್ಪಡೆ ಆಗಿದೆ. ನೈಜ ಘಟನೆಗಳನ್ನು ಆಧರಿಸಿ 'ಧುರಂಧರ್' ಸಿನಿಮಾ ಸಿದ್ಧವಾಗಿದೆ. 'ಉರಿ' ಸಿನಿಮಾ ಖ್ಯಾತಿ ಆದಿತ್ಯ ಧಾರ್ ಅವರು ಈ ಚಿತ್ರಕ್ಕೆ ನಿರ್ದೇಶನ ಮಾಡಿದ್ದಾರೆ. ದೇಶಭಕ್ತಿ ಕಹಾನಿಯನ್ನು ಈ ಸಿನಿಮಾ ಹೊಂದಿದೆ. ರಣವೀರ್ ಸಿಂಗ್ ಜೊತೆ ಅಕ್ಷಯ್ ಖನ್ನಾ, ಆರ್. ಮಾಧವನ್, ಸಂಜಯ್ ದತ್, ಅರ್ಜುನ್ ರಾಮ್‌ಪಾಲ್, ಸಾರಾ ಅರ್ಜುನ್ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ.

## ಸಿನಿಮಾ ವಿತರಕಿಯಾದ ಪ್ರಿಯಾ ಸುದೀಪ್



ಈಗಾಗಲೇ ಸುದೀಪ್ ಅಭಿನಯದ ಮಾರ್ಕ್ ಚಿತ್ರದ ಟ್ರೈಲರ್ ರಿಲೀಸ್ ಆಗಿದೆ. ಕಿಚ್ಚ ಸುದೀಪ್‌ನ ಹೊಸ ಲುಕ್ ನಲ್ಲಿ ನೋಡಿ ಫ್ಯಾನ್ಸ್ ಫಿದಾ ಆಗಿದ್ದಾರೆ. ಹಾಗೆಯೇ ಮಾರ್ಕ್ ಸಿನಿಮಾ ಡಿಸೆಂಬರ್-25 ಕ್ಕೆ ಬರೋದು ಪಕ್ಕಾ ಆಗಿದೆ. ಹಾಗೆಯೇ ಇದರ ಜೊತೆಗೆ ಮತ್ತೊಂದು ವಿಶೇಷತೆ ಏನೆಂದರೆ ಮಾರ್ಕ್ ಚಿತ್ರವನ್ನು ವಿತರಣೆ ಮಾಡ್ತಿರೋದು ಕಿಚ್ಚ ಸುದೀಪ್ ಅವರ ಪತ್ನಿ ಪ್ರಿಯಾ ಸುದೀಪ್. ಈ ಮೂಲಕ ನಿರ್ಮಾಣದ ಜೊತೆ ವಿತರಣೆಗೂ ಕಾಲಿಟ್ಟದ್ದಾರೆ ಪ್ರಿಯಾ.

**ಸುಪ್ರಿಯಾನ್ವಿ ಸ್ಟುಡಿಯೋ:** ಈಗಾಗಲೇ ಪ್ರಿಯಾ ಸುದೀಪ್ ಅವರು ಸುಪ್ರಿಯಾನ್ವಿ ಸ್ಟುಡಿಯೋ ಮೂಲಕ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮ್ಯಾಂಗೋ ಪಚ್ಚ ಅನ್ನೋದೇ ಈ ಚಿತ್ರದ ಹೆಸರು. ಸುದೀಪ್ ಅಕ್ಕನ ಮಗ ಸಂಚಿತ್ ಸಂಜೀವ್ ಈ ಚಿತ್ರದ ಮೂಲಕ ನಾಯಕರಾಗುತ್ತಿದ್ದಾರೆ. ಇನ್ನೂ ಈ ಚಿತ್ರವು ಮುಂದಿನ ವರ್ಷ ಜನವರಿ 15 ರಂದು ರಿಲೀಸ್ ಆಗುತ್ತಿದೆ. ಪ್ರಿಯಾ ಸುದೀಪ್ ಅವರ ಸುಪ್ರಿಯಾನ್ವಿ ಸ್ಟುಡಿಯೋ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಸಿನಿಮಾಗಳನ್ನ ನಿರ್ಮಿಸಲಿದೆ. ಮ್ಯಾಂಗೋ ಪಚ್ಚ ಚಿತ್ರ ಇದು ಆರಂಭ ಮಾತ್ರವೇ ಆಗಿದೆ. ಹೊಸ ಪ್ರತಿಭೆಗಳೊಂದಿಗೆ ಹೆಚ್ಚು ಹೆಚ್ಚು ಚಿತ್ರಗಳನ್ನ ತಯಾರಿಸಿ ನಮ್ಮ ಪ್ರೇಕ್ಷಕರಿಗೆ ಅತ್ಯುತ್ತಮ ಮನರಂಜನೆ ಕೊಡಲಿದೆ. ಮಾರ್ಕ್ ಸಿನಿಮಾ ಡಿಸೆಂಬರ್-25 ಕ್ಕೆ ಬರೋದು ಪಕ್ಕಾ ಆಗಿದೆ. ಈ ಮಧ್ಯೆ ಸುದೀಪ್ ಫ್ಯಾನ್ಸ್ ಗೆ ಗುಡ್ ನ್ಯೂಸ್ ಒಂದು ಹೊರಬಿದ್ದಿದೆ. ಅದೇನೆಂದರೆ ಕಿಚ್ಚ ಸುದೀಪ್ ಅಭಿನಯದ ಮಾರ್ಕ್ ಚಿತ್ರದ ಟ್ರೈಲರ್ ರಿಲೀಸ್ ಆಗಿದೆ. ಕಿಚ್ಚ ಸುದೀಪ್ ನ ಹೊಸ ಲುಕ್ ನಲ್ಲಿ ನೋಡಿ ಫ್ಯಾನ್ಸ್ ಫಿದಾ ಆಗಿದ್ದಾರೆ.

## ನಾಯಕಿಯಾಗಿ ಎಂಟ್ರಿ ಕೊಡಲಿರುವ ದುನಿಯಾ ವಿಜಿ ಪುತ್ರಿ




ದುನಿಯಾ ವಿಜಯ್ ಕನ್ನಡ ಚಿತ್ರರಂಗದ ಜನಪ್ರಿಯ ನಟ ಮತ್ತು ನಿರ್ದೇಶಕ. ಅವರ ಇಬ್ಬರು ಪುತ್ರಿಯರು ಇದೀಗ ಚಿತ್ರರಂಗಕ್ಕೆ ಎಂಟ್ರಿ ನೀಡಿದ್ದಾರೆ. ವಿಜಿ ಅವರ ಮೊದಲ ಪುತ್ರಿ ರಿತನ್ಯಾ ಅವರು ಈಗಾಗಲೇ ತಂದೆಯ ಜೊತೆಗೆ 'ಲ್ಯಾಂಡ್ ಲಾರ್ಡ್' ಸಿನಿಮಾನಲ್ಲಿ ನಟಿಸಿದ್ದಾರೆ. ಆದರೆ ನಾಯಕಿಯಾಗಿ ಈಗ ಹೊಸ ಸಿನಿಮಾ ಮೂಲಕ ಅಧಿಕೃತವಾಗಿ ಎಂಟ್ರಿ ಕೊಡುತ್ತಿದ್ದಾರೆ. 'ಯಲಾ ಕುನ್ನಿ' ಸಿನಿಮಾ ಖ್ಯಾತಿಯ ನಿರ್ದೇಶಕ ಪ್ರದೀಪ್ ದಳವಾಯ್ ಹೊಸ ಸಿನಿಮಾ ನಿರ್ದೇಶನ ಮಾಡುತ್ತಿದ್ದು, ಸಿನಿಮಾಕ್ಕೆ 'ಜವರ' ಎಂದು ಹೆಸರಿಡಲಾಗಿದೆ. ಸಿನಿಮಾನಲ್ಲಿ 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ನಾಯಕನಾಗಿ ನಟಿಸುತ್ತಿದ್ದಾರೆ. ಈ ಸಿನಿಮಾನಲ್ಲಿ ದುನಿಯಾ ವಿಜಯ್ ಮೊದಲ ಪುತ್ರಿ ರಿತನ್ಯಾ ನಾಯಕಿಯಾಗಿ ನಟಿಸಲಿದ್ದಾರೆ. ಚಿದಾವೃಷಭ ಅವರು ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಜವರ' ಸಿನಿಮಾದ ಮುಹೂರ್ತ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಅದ್ದೂರಿಯಾಗಿ ನೆರವೇರಿದೆ. ಸ್ಮಶಾನದಲ್ಲಿ ಶವಗಳನ್ನು ಹೂಳುವ ಕೆಲಸ ಮಾಡುತ್ತಿರುವ ನೀಲಮ್ಮ 'ಜವರ' ಸಿನಿಮಾಕ್ಕೆ ಕ್ಲಾಪ್ ಮಾಡುವ ಮೂಲಕ ಸಿನಿಮಾಕ್ಕೆ ಚಾಲನೆ ನೀಡಿದ್ದಾರೆ. ಸಿನಿಮಾದ ವಿಶೇಷ ಪಾತ್ರಗಳಲ್ಲಿ ಹಿರಿಯ ನಟ ರಂಗಾಯಣ ರಘು ಮತ್ತು ನಟಿ ಶ್ರುತಿ ಅವರುಗಳು ನಟಿಸುತ್ತಿದ್ದಾರೆ. ಇವರ ಪಾತ್ರಗಳು ಸಹ ಸಿನಿಮಾದ ಪ್ರಮುಖ ಪಾತ್ರಗಳೇ ಆಗಿರಲಿವೆಯಂತೆ. ಈ ಸಿನಿಮಾದಲ್ಲಿ ರಿತನ್ಯಾ, ವಿಜಿ, ಭೂಮಿ ಹೆಸರಿನ ಪಾತ್ರದಲ್ಲಿ ನಟಿಸಲಿದ್ದಾರೆ.

## ಮಾರ್ಕ್ ಕಥೆ ಬಗ್ಗೆ ಸುಳಿವು ನೀಡಿದ ಟ್ರೇಲರ್: ಕಿಚ್ಚ ಸುದೀಪ್ ಸಿಕ್ಕಾಪಟ್ಟೆ ಮಾಸ್

ಇನ್ನೇನು ಕೆಲವೇ ದಿನಗಳಲ್ಲಿ 'ಮಾರ್ಕ್' ಸಿನಿಮಾ ಬಿಡುಗಡೆ ಆಗಲಿದೆ. ಕ್ರಿಸ್ಮಸ್ ಪ್ರಯುಕ್ತ ಡಿಸೆಂಬರ್ 25ರಂದು ಸಿನಿಮಾ ರಿಲೀಸ್ ಮಾಡಲು ತಯಾರಿ ನಡೆದಿದೆ. ಈಗ ಟ್ರೇಲರ್ ಮೂಲಕ ನಿರೀಕ್ಷೆ ಹೆಚ್ಚಿಸಲಾಗಿದೆ. ಕಿಚ್ಚ ಸುದೀಪ್ ನಟನೆಯ ಈ ಸಿನಿಮಾ ಮೇಲೆ ಅಭಿಮಾನಿಗಳು ಸಖತ್ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅದ್ದೂರಿಯಾಗಿ ಸಿನಿಮಾ ಮೂಡಿಬಂದಿದೆ.



ಟ್ರೇಲರ್ ನೋಡಿ ಎಲ್ಲರೂ ಮೆಚ್ಚಿಗೆ ಸೂಚಿಸಿದ್ದಾರೆ.

ಮಾರ್ಕ್ ಸಿನಿಮಾದಲ್ಲಿ ಕಿಚ್ಚ ಸುದೀಪ್ ಅವರ ಆ್ಯಕ್ಷನ್ ಅಬ್ಬರ ಇರಲಿದೆ ಎಂಬುದಕ್ಕೆ ಟ್ರೇಲರ್ ಸಾಕ್ಷಿಯಾಗಿದೆ. ಈ ಸಿನಿಮಾಗೆ ವಿಜಯ್ ಕಾರ್ತಿಕೇಯನ್ ಅವರು ನಿರ್ದೇಶನ ಮಾಡಿದ್ದಾರೆ. ಸತ್ಯಜ್ಯೋತಿ ಫಿಲ್ಮ್ಸ್ ಮತ್ತು ಕಿಚ್ಚ ಕ್ರಿಯೇಷನ್ಸ್' ಮೂಲಕ 'ಮಾರ್ಕ್' ಸಿನಿಮಾ ನಿರ್ಮಾಣ ಆಗಿದೆ. ಈ ಮೊದಲು ಇದೇ ಕಾಂಬಿನೇಷನ್‌ನಲ್ಲಿ ನಿರ್ಮಾಣ ಆಗಿದ್ದ 'ಮ್ಯಾಕ್ಸ್ ಸಿನಿಮಾ ಕೂಡ ಡಿಸೆಂಬರ್ 25ರಂದು ಬಿಡುಗಡೆ ಆಗಿ ಧೂಳೆಬ್ಬಿಸಿತ್ತು. ಈ ವರ್ಷ ಡಿಸೆಂಬರ್ 25ಕ್ಕೆ 'ಮಾರ್ಕ್ ಸಿನಿಮಾ ಎಲ್ಲಾ ಕಡೆಗಳಲ್ಲಿ ಅಬ್ಬರಿಸಲಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈ ಸಿನಿಮಾ ತೆರೆಕಾಣಲಿದೆ.

ಅಜನೀಶ್ ಲೋಕನಾಥ್ ಅವರು 'ಮಾರ್ಕ್' ಸಿನಿಮಾಗೆ ಸಂಗೀತ ನೀಡಿದ್ದಾರೆ. ಈ ಸಿನಿಮಾದ ಕಥೆ ಏನು ಎಂಬುದರ ಬಗ್ಗೆ ಟ್ರೇಲರ್ ಮೂಲಕ ಸುಳಿವು ನೀಡಲಾಗಿದೆ. ಮಕ್ಕಳ ಅಪಹರಣದ ಕಹಾನಿಯನ್ನು ಈ ಸಿನಿಮಾ ಹೊಂದಿದೆ. ಮಕ್ಕಳನ್ನು ಕಿಡ್ನಾಪ್ ಮಾಡುವ ಖಳರಿಗೆ ಮಾರ್ಕ್ ತಕ್ಕ ಪಾಠ ಕಲಿಸುತ್ತಾನೆ. ಅದು ಹೇಗೆ ಎಂಬುದನ್ನು ಚಿತ್ರಮಂದಿರದಲ್ಲಿ ನೋಡಲು ಫ್ಯಾನ್ಸ್ ಕಾಯುತ್ತಿದ್ದಾರೆ. ತಮಿಳು ಚಿತ್ರರಂಗದ ಖ್ಯಾತ ನಟ ಯೋಗಿಬಾಬು, ಮಲಯಾಳಂ ಚಿತ್ರರಂಗದ ಶೈನ್ ಟಾಮ್ ಚಾಕೋ ಸೇರಿದಂತೆ ಹಲವು ಸ್ಟಾರ್ ಕಲಾವಿದರು 'ಮಾರ್ಕ್' ಸಿನಿಮಾದಲ್ಲಿ ನಟಿಸಿದ್ದಾರೆ. ಟ್ರೇಲರ್‌ನಲ್ಲಿ ಎಲ್ಲಾ ಪಾತ್ರಗಳ ಝಲಕ್ ತೋರಿಸಲಾಗಿದೆ. ಈ ಸಿನಿಮಾ ಖಂಡಿತಾ ಸೂಪರ್ ಹಿಟ್ ಆಗಲಿದೆ ಎಂದು ಫ್ಯಾನ್ಸ್ ಕಮೆಂಟ್ ಮಾಡುತ್ತಿದ್ದಾರೆ. ಶೇಖರ್ ಚಂದ್ರ ಅವರ ಛಾಯಾಗ್ರಹಣ ಈ ಸಿನಿಮಾಗಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**